ಸಂಪುಟ 15
ಸಂಚಿಕೆ 38

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
26, ಸೆಪ್ಟೆಂಬರ್ 1993

ಒಟ್ಟಪಾಳಂ ಫಲಿತಾಂಶದಿಂದ ಕಾಂಗ್ರೆಸ್(ಐ) ಪಾಠ ಕಲಿಯಲಿ

--ಸುರ್ಜಿತ್

ಕೇರಳದ ಒಟ್ಟಪಾಳಂ ಲೋಕಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ 1.32 ಲಕ್ಷ ಮತಗಳ ಅಭೂತ ಪೂರ್ವ ಅಂತರದಿಂದ ಗೆದ್ದಿರುವುದು ಕಾಂಗ್ರೆಸ್(ಐ) ಜನಸಾಮಾನ್ಯರಿಂದ ಎಷ್ಟು ದೂರವಾಗಿದೆ ಎಂಬುದರ ದ್ಯೋತಕ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಸೆಪ್ಟೆಂಬರ್ 14 ರಂದು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಸುರ್ಜಿತ್ ಈ ಮಾತನ್ನು ಹೇಳಿದರು. ಅವರು ಪತ್ರಕರ್ತರು ಹಲವು ವಿಷಯಗಳ ಬಗ್ಗೆ ಕೇಳಿದ ಪ್ರಶ್ನೆಗಳನ್ನು ಉತ್ತರಿಸಿದರು. ಒಟ್ಟಪಾಳಂನ ತೀರ್ಪು ನಿಜಕ್ಕೂ ಮಹತ್ವ ಪೂರ್ಣವಾದದ್ದು. ಯು.ಡಿ.ಎಫ್. ಹಾಗೂ ಎಲ್.ಡಿ.ಎಫ್‌ಗಳ ನಡುವೆ ತೀವ್ರ ಧ್ರುವೀಕರಣ ಇರುವಂತಹ ಕೇರಳದಂತಹ ರಾಜ್ಯದಲ್ಲಿ ಇಷ್ಟು ದೊಡ್ಡ ಅಂತರ ಎಂದೂ ಕಂಡುಬರಲಿಲ್ಲ ಎಂದು ಸುರ್ಜಿತ್ ಹೇಳಿದರು. ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ 12.6 ಶೇ. ಮತದಾರರು ಕಾಂಗ್ರೆಸ್ (ಐ)ನ್ನು ತ್ಯಜಿಸಿ ದೂರಸರಿದಿದ್ದಾರೆ. ಈ ಲೋಕಸಭಾ ಕ್ಷೇತ್ರದ ಎಲ್ಲಾ ಏಳು ವಿಧಾನಸಭಾ ಕ್ಷೇತ್ರಗಳಲ್ಲೂ ಸಿಪಿಐ(ಎಂ) ಗೆದ್ದಿದೆ. ಆದ್ದರಿಂದ ಕೆಲವರೆನ್ನುವಂತೆ ಕೇವಲ ಮುಸಲ್ಮಾನರಷ್ಟೇ ಅಲ್ಲ ಪ್ರತಿಯೊಂದು ಜನವಿಭಾಗವೂ ಕಾಂಗ್ರೆಸ್(ಐ)ನಿಂದ ದೂರಸರಿದಿದೆ ಎಂಬುದು ಇದರಿಂದ ತಿಳಿಯುತ್ತದೆ ಎಂದು ಸುರ್ಜಿತ್ ಹೇಳಿದರು. ಕಳೆದ ಬಾರಿ ವಿಧಾನಸಭಾ ಚುನಾವಣೆಯನ್ನು ಗೆದ್ದ ಈ ಲೋಕಸಭಾ ಕ್ಷೇತ್ರದ ಕುಂಜಿಂಕುಳಂನಲ್ಲೂ ಕಾಂಗ್ರೆಸ್(ಐ) ಈ ಬಾರಿ 15,000 ಕಡಿಮೆ ಮತ ಪಡೆಯಿತು. ಇಲ್ಲಿ ಮುಸ್ಲಿಂ ಜನಸಂಖ್ಯೆ ಬಹಳ ಕಡಿಮೆ.

ಚೌರಿಂಗಿ-ಒಟ್ಟಪಾಳಂ ಹೆಚ್ಚಿದ ಎಡಶಕ್ತಿಗಳ ಪ್ರತಿಷ್ಠೆ

ಕೋಮುವಾದಿಗಳೊಡನೆ ರಾಜಿಮಾಡಿಕೊಳ್ಳುವ [illegible]ಗಳಿಂದಾಗಿ ಹಾಗೂ ಜನ- ವಿರೋಧಿಯಾದ ಆರ್ಥಿಕ ನೀತಿಗಳಿಂದಾಗಿ ಹೆಚ್ಚೆಚ್ಚು ಜನ ಕಾಂಗ್ರೆಸ್(ಐ)ನಿಂದ ದೂರ ಸರಿಯುತ್ತಿದ್ದಾರೆ ಎಂಬುದನ್ನೂ ಒಟ್ಟಪಾಳಂನ ಫಲಿತಾಂಶವನ್ನು ವಿಶ್ಲೇಷಿಸಿದರೆ ತಿಳಿಯುತ್ತದೆ. "ಆರ್ಥಿಕ ನೀತಿಗಳ ವಿರುದ್ಧ ಜನಗಳಲ್ಲಿ ಬೆಳೆಯುತ್ತಿರುವ ಅಸಮಾಧಾನವನ್ನು ಇನ್ನೂ ಕೂಡಾ ಕಾಂಗ್ರೆಸ್(ಐ) ಸರಿಯಾಗಿ ಅಂದಾಜು ಮಾಡಿಲ್ಲ. ಒಟ್ಟಪಾಳಂ ಫಲಿತಾಂಶದಿಂದ ಅದು ಪಾಠ ಕಲಿಯಬೇಕು. ಎಡ ಮತ್ತು ಜಾತ್ಯಾತೀತ ಶಕ್ತಿಗಳು ಬಲಶಾಲಿಯಾಗಿದ್ದಲ್ಲಿ ಜನ ಈ ಶಕ್ತಿಗಳತ್ತ ನೋಡುತ್ತಿದ್ದಾರೆ" ಎಂದ ಸುರ್ಜಿತ್ "ಒಟ್ಟಪಾಳಂ ಮತ್ತು ಚೌರಿಂಗಿ ಉಪಚುನಾವಣೆಗಳು ಜನ ನಮ್ಮತ್ತ ನೋಡುತ್ತಿದ್ದಾರೆ ಎಂಬುದನ್ನು ಎತ್ತಿ ತೋರಿಸಿದೆ. ಎಡಶಕ್ತಿಗಳ ಪ್ರತಿಷ್ಠೆ ಬಹಳ ಹೆಚ್ಚಿದೆ- ವಿಶೇಷವಾಗಿ ಎಡಶಕ್ತಿಗಳು ಜನಗಳ ನಡುವೆ ದುಡಿಯುತ್ತಿರುವ ರಾಜ್ಯಗಳಲ್ಲಿ" ಎಂದು ಸುರ್ಜಿತ್ ಹೇಳಿದರು.

ವಿರೋಧಿ ಜಾತ್ಯಾತೀತ ಶಕ್ತಿಗಳ ಐಕ್ಯತೆಗೆ ಎಡಪಕ್ಷಗಳ ಯತ್ನ

ತಾನು ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತ ಸೆಪ್ಟೆಂಬರ್ 13 ರಂದು ವಿ.ಪಿ.ಸಿಂಗ್‌ರನ್ನು ಭೇಟಿಯಾಗಿ ಉತ್ತರಪ್ರದೇಶದಲ್ಲಿ ಮುಂಬರುವ ಚುನಾವಣೆಗಳಲ್ಲಿ ಎಲ್ಲಾ ವಿರೋಧಿ ಜಾತ್ಯಾತೀತ ಶಕ್ತಿಗಳನ್ನು ಒಂದೇ ಸಮಾನ ವೇದಿಕೆಯ ಮೇಲೆ ತರುವ ಬಗ್ಗೆ ಮಾತುಕತೆ ಮುಂದುವರೆಸಿರುವುದಾಗಿ ಸುರ್ಜಿತ್ ವ್ಯಕ್ತಪಡಿಸಿದರು. ಮಾತುಕತೆಗಳು ನಡೆಯುತ್ತಿರುವಾಗಲೇ ಕೆಲವು ವಿವರಗಳನ್ನು ಪತ್ರಿಕೆಗಳಿಗೆ ವಿಕೃತಗೊಳಿಸಿ ಪರೋಕ್ಷವಾಗಿ ತಿಳಿಸಿರುವುದು ದುರದೃಷ್ಟಕರ ಎಂದು ಸುರ್ಜಿತ್ ವಿಷಾದಿಸಿದರು.

ಈ ಮಾತುಕತೆಗಳಿಗೆ ಆಧಾರವಾಗಬಹುದಾದ ಯಾವುದೇ ಪ್ರಸ್ತಾಪವನ್ನು ಮುಲಾಯಂ ಸಿಂಗ್ ಯಾದವ್ ಎಂದೂ ಮಾಡಿಲ್ಲ ಎಂದು ಅವರು ಸ್ಪಷ್ಟೀಕರಿಸಿದರು. ಈಗ ಚರ್ಚೆಯಲ್ಲಿರುವ ಸೂತ್ರಗಳಲ್ಲಿ ಒಂದು ಎಡಪಕ್ಷಗಳು ಮುಂದಿಟ್ಟ ಸೂತ್ರ. ಸುರ್ಜಿತ್ ಸೂಚಿಸಿದ ಈ ಸೂತ್ರದ ಪ್ರಕಾರ ಕಳೆದ ಚುನಾವಣೆಗಳಲ್ಲಿ ಸಮಾಜವಾದಿ ಪಕ್ಷ ಹಾಗೂ ಬಹುಜನ ಸಮಾಜ ಪಕ್ಷ ಒಟ್ಟಾಗಿ ಜನತಾದಳಕ್ಕಿಂತ ಹೆಚ್ಚು ಮತಗಳನ್ನು ಪಡೆದಿದ್ದ ಕ್ಷೇತ್ರಗಳಲ್ಲಿ ಮುಂಬರುವ ಚುನಾವಣೆಗಳ ಸೀಟು ಹೊಂದಾಣಿಕೆಯಲ್ಲಿ ಆ ಎರಡು ಪಕ್ಷಗಳ ಕೂಟಕ್ಕೆ ನೀಡಬೇಕು.

ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ಸೋಲಿಸಲು ಪರಸ್ಪರ ಹತ್ತಿರ ಬರಲೇಬೇಕಾದ ಅನಿವಾರ್ಯತೆಯ ಬಗ್ಗೆ ಜನತಾದಳ ಹಾಗೂ ಸಮಾಜವಾದಿ ಪಕ್ಷಗಳ ಮುಖಂಡರಿಗೆ ತಾನು ಒತ್ತಿ ಹೇಳಿರುವುದಾಗಿ ಸುರ್ಜಿತ್ ತಿಳಿಸಿದರು. ಆ ರಾಜ್ಯದಲ್ಲಿ ಕಾಂಗ್ರೆಸ್(ಐ) ಖಂಡಿತಾ ಗಂಭೀರ ಸ್ಪರ್ಧೆ ನೀಡಲಾರದು. ಅದಕ್ಕೀಗ ಅಲ್ಲಿ ನಿಜವಾದ ನೆಲೆಯೇ ಇಲ್ಲ. ಉತ್ತರಪ್ರದೇಶದಲ್ಲಿ ಬಿಜೆಪಿಯ ಸೋಲು ದೇಶದ ಭವಿಷ್ಯದ ರಾಜಕೀಯದಲ್ಲಿ ಒಂದು ಬಹುಮುಖ್ಯ ಅಂಶವಾದ್ದರಿಂದ ಬಿಜೆಪಿಗೆ ಸವಾಲು ನೀಡುವ ಹೊಣೆ ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳ ಮೇಲಿದೆ. ಎಡಪಕ್ಷಗಳು ತಾವಾಗಿಯೇ ದೊಡ್ಡ ಶಕ್ತಿಯಲ್ಲದಿದ್ದರೂ ಎಲ್ಲಾ ಶಕ್ತಿಗಳು ಒಂದಾದರೆ ಎಡ ಶಕ್ತಿಗಳು ದೊಡ್ಡ ಕೊಡುಗೆ ನೀಡಬಲ್ಲವು ಆದ್ದರಿಂದಲೇ ಎಲ್ಲರನ್ನು ಒಟ್ಟಿಗೆ ತರಲು ಅವು ಸಕ್ರಿಯವಾಗಿ ಪ್ರಯತ್ನಿಸುತ್ತಿವೆ ಎಂದು ಸುರ್ಜಿತ್ ವಿವರಣೆ ನೀಡಿದರು.

ಈ ಪ್ರಸ್ತಾಪಕ್ಕೆ ವಿ.ಪಿ.ಸಿಂಗ್‌ರವರ ಪ್ರತಿಕ್ರಿಯೆ ಏನಿತ್ತು ಎಂದು ಪತ್ರಕರ್ತರು ಕೇಳಿದಾಗ ಸುರ್ಜಿತ್ "ಸಕರಾತ್ಮಕವಾಗಿತ್ತು ವಿ.ಪಿ. ಸಿಂಗ್‌ರೊಂದಿಗಿರುವ ಪ್ರತಿಯೊಬ್ಬರು ಈ ಎಲ್ಲಾ ಶಕ್ತಿಗಳು ಒಗ್ಗಟ್ಟಾಗಬೇಕು ಎಂದು ಭಾವಿಸುತ್ತಾರೆ" ಎಂದರು ಮುಲಾಯಂ ಸಿಂಗ್ ಯಾವವರಿಗೂ ಈ ಮಾತುಕತೆ ಬಗ್ಗೆ ತಿಳಿದಿದೆ. ಅವರು "ಕಠಿಣ ನಿಲುವು ತಳೆಯುತ್ತಿದ್ದಾರೆ" ಎಂಬುದನ್ನು ಸುರ್ಜಿತ್ ನಿರಾಕರಿಸಿದರು. ಎರಡೂ ಪಕ್ಷಗಳನ್ನು ಒಂದೆಡೆ ತರುವ ನಿರೀಕ್ಷೆಯನ್ನು ಸುರ್ಜಿತ್ ಮತ್ತೆ ವ್ಯಕ್ತಪಡಿಸಿದರು.ಆದರೆ ಈ ಘಟ್ಟದಲ್ಲೇ ವಿವರಗಳನ್ನು ಬಹಿರಂಗ ಪಡಿಸುವುದು ಅವಸರದ ಕೆಲಸವಾಗುತ್ತದೆ ಎಂದ ಅವರು "ಇದುವರೆಗೆ ಯಾರೂ ಕೂಡಾ ನಿಮ್ಮ ಸಮಯ ವ್ಯರ್ಥಮಾಡಬೇಡಿ ಎಂದಿಲ್ಲ. ಯಾರೂ ನಕಾರಾತ್ಮಕ ನಿಲುವು ತಳೆದಿಲ್ಲ" ಎಂದು ಮಾತುಕತೆಗಳ ಬಗ್ಗೆ ಆಶಾಭಾವನೆ ವ್ಯಕ್ತಪಡಿಸಿದರು.

ಕಾಂಗ್ರೆಸ್(ಐ) ನಿಜವಾಗಿಯೂ ಏನು ಬಯಸುತ್ತದೆ ?

ಧರ್ಮವನ್ನು ರಾಜಕೀಯದಿಂದ ದೇರ್ಪಡಿಸುವ ಮಸೂದೆಗಳ ಬಗ್ಗೆ ಮಾತನಾಡುತ್ತಾ ಸುರ್ಜಿತ್ ಸಂವಿಧಾನವನ್ನು ತಿದ್ದುಪಡಿಮಾಡಿ ಜಾತ್ಯಾತೀತತೆಯೆಂದರೆ ಧರ್ಮವನ್ನು ಪ್ರಭುತ್ವದಿಂದ ದೇರ್ಪಡಿಸುವುದು ಎಂದು ನಿರ್ವಚಿಸಿ ಇಡೀ ಶಾಸನವನ್ನು ಅಂಗೀಕರಿಸಬೇಕು ಎಂದು ಸಿಪಿಐ(ಎಂ) ಬಯಸುವುದಾಗಿ ತಿಳಿಸಿದರು. ಇದು ಈ ಮಸೂದೆಗಳ ಅತ್ಯಂತ ಮಹತ್ವದ ಅಂಶ. ಜಾತ್ಯತೀತತೆಯ ನಿರ್ವಚನೆ ಮಾಡುವ ತಿದ್ದುಪಡಿಯಿಲ್ಲದೆ ಕೇವಲ ಜನತಾ ಪ್ರಾತಿನಿಧ್ಯ ಕಾನೂನನ್ನಷ್ಟೇ ತಿದ್ದುಪಡಿ ಮಾಡಲು ಸಿಪಿಐ(ಎಂ)ನ ಒಪ್ಪಿಗೆಯಿಲ್ಲ ಎಂದು ಅವರು ಹೇಳಿದರು. ಸಿಪಿಐ(ಎಂ) ಕೂಡಾ ಬದಲಿಸಬೇಕೆನ್ನುವ ಒಂದೇ ಅಂಶವೆಂದರೆ ಮತದಾನದ ಮೊದಲು ಅಭ್ಯರ್ಥಿಯನ್ನು ಮತಗಣನಾ ಅಧಿಕಾರಿಗಳೇ ಅನರ್ಹಗೊಳಿಸುವ ಅಂಶ. ದುರುಪಯೋಗಕ್ಕೆ ಇಲ್ಲಿ ಬಹಳ ಅವಕಾಶಗಳಿವೆ. ಈ ಅಂಶದ ಬಗೆಗಿರುವ ಭಯಗಳನ್ನು ಸರಕಾರ ಹೋಗಲಾಡಿಸಬೇಕು. ಆದರೆ ಈ ಮಸೂದೆಗಳನ್ನು ಬದಿಗೊತ್ತಿ ಜನತಾ ಪ್ರಾತಿನಿಧ್ಯ ಕಾನೂನನ್ನು ತಿದ್ದುಪಡಿ ಮಾಡುವ ಸರಕಾರದ ಪ್ರಯತ್ನಗಳಿಂದ ಸರಕಾರದ ಉದ್ದೇಶದ ಸಾಚಾತನದ ಬಗ್ಗೆ ಸಂಶಯ ಮೂಡುತ್ತದೆ, ಇದನ್ನು ನಾವು ಪ್ರತಿರೋಧಿಸುತ್ತೇವೆ ಎಂದು ಅವರು ಹೇಳಿದರು.

ಭಾರತ-ಚೀನಾ ಒಪ್ಪಂದಗಳನ್ನು ಕೂಡಾ ಸುರ್ಜಿತ್ ಸ್ವಾಗತಿಸಿದರು. ಬದಲಾದ ಜಾಗತಿಕ ಸನ್ನಿವೇಶದಲ್ಲಿ ಏಶಿಯಾದ ಈ ಎರಡು ಬೃಹತ್ ದೇಶಗಳು ಪರಸ್ಪರ ನಿಕಟ ಬರುವುದು ಅತ್ಯಗತ್ಯ. ಒಟ್ಟಾಗಿ ಅವು ಹೆಚ್ಚುತ್ತಿರುವ ಅಮೇರಿಕಾದ ಒತ್ತಡಗಳನ್ನು ಎದುರಿಸಲು ಸಾಧ್ಯ ಎಂದು ಹೇಳಿದ ಸುರ್ಜಿತ್ ಈ ಸಂದರ್ಭದಲ್ಲಿ ಅಮೇರಿಕಾದ ಆಣತಿಯಂತೆ ಸೋಮಾಲಿಯಾಕ್ಕೆ ಭಾರತ ಸೇನಾ ತುಕಡಿಗಳನ್ನು ಕಳಿಸಿರುವುದು ನಾಚಿಕೆಗೇಡು ಎಂದರು. ●

ಎಡ, ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳಿಗೆ ಸ್ಫೂರ್ತಿ ತುಂಬಿದ ವಿಜಯ

ಮೇ ತಿಂಗಳಲ್ಲಿ ನಡೆಯಬೇಕಾಗಿದ್ದ ಚುನಾವಣೆ ಸ್ವೇಚ್ಛಾಚಾರಕ್ಕೆ ಆಳುವ ಪಕ್ಷದ ಪರವಾದ ಪಕ್ಷಪಾತಕ್ಕೆ ಕುಖ್ಯಾತರಾದ ಮುಖ್ಯ ಚುನಾವಣಾ ಆಯುಕ್ತ ಶೇಷನ್ ಹಾಗೂ ಕಾಂಗ್ರೆಸ್ (ಐ)ನ ಶಾಮೀಲಿನಿಂದಾಗಿ ಕೊನೆಗೂ ಸೆಪ್ಟೆಂಬರ್ , ರಂದು ನಡೆಯಿತು. ಈ ಅವಕಾಶ ದೊರೆತದ್ದೇ ತಡ ಒಟ್ಟಪಾಳಂನ ಜನ ಅತ್ಯಂತ ಸ್ಪಷ್ಟ ತೀರ್ಪನ್ನು ನೀಡಿ ಕಾಂಗ್ರೆಸ್(ಐ) ಮುಖಂಡರ ಮುಖಕ್ಕೆ ಒಂದುವಾರದೊಳಗೆ ಎರಡನೇ ಬಾರಿ ಮಂಗಳಾರತಿ ಮಾಡಿದರು. ಕಳೆದ ಮೂರು ಚುನಾವಣೆಗಳಲ್ಲಿ (1984 ರಲ್ಲಿ, 1989 ಹಾಗೂ 1991ರಲ್ಲಿ) ಸತತವಾಗಿ ಕಾಂಗ್ರೆಸ್(ಐ) ಅಭ್ಯರ್ಥಿಯನ್ನು ಆರಿಸಿದ ಮೀಸಲು ಕ್ಷೇತ್ರ ಈ ಬಾರಿ ಕಾಂಗ್ರೆಸ್(ಐ)ನ್ನು ಸಂಪೂರ್ಣವಾಗಿ ತಿರಸ್ಕರಿಸಿತು. ಸಿಪಿಐ(ಎಂ)ನ ಯುವ ಅಭ್ಯರ್ಥಿ ಬಡಕುಟುಂಬದಿಂದ ಬಂದ ಸರಳ ಜೀವಿ ಸ್ನಾತಕೋತ್ತರ ಅಭ್ಯರ್ಥಿ ಎಸ್. ಶಿವರಾಮನ್ ಅವರಿಗೆ ಭಾರೀ ಬೆಂಬಲ ವ್ಯಕ್ತಪಡಿಸಿತು. ಎಲ್.ಡಿ.ಎಫ್.ನ ಈ ಯುವ ಅಭ್ಯರ್ಥಿ ಕಾಂಗ್ರೆಸ್(ಐ)ನ ನುರಿತ ರಾಜಕಾರಣಿ ಕೆ.ಕೆ. ಬಾಲಕೃಷ್ಣನ್ ಅವರನ್ನು 1,32,652 ಮತಗಳಿಂದ ಪರಾಭವಗೊಳಿಸಿದರು. ಕಾಂ. ಶಿವರಾಮನ್ 55.2 ಶೇಕಡಾ ಮತಗಳಿಸಿದರು. ಬಿಜೆಪಿ ಅಭ್ಯರ್ಥಿ ಠೇವಣಿ ಕಳಕೊಂಡರು.

ಒಟ್ಟಪಾಳಂ ಲೋಕಸಭಾ ಉಪಚುನಾವಣೆಯಲ್ಲಿ ಎಡ ಪ್ರಜಾಪ್ರಭುತ್ವ ರಂಗಕ್ಕೆ ಇಂತಹ ಭವ್ಯ ವಿಜಯವನ್ನು ಕೊಟ್ಟ ಕೇರಳದ ಜನತೆಯನ್ನು ಹಾರ್ದಿಕವಾಗಿ ಅಭಿನಂದಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಚುನಾವಣಾ ತೀರ್ಪು ಕೋಮುವಾದವನ್ನು ಸಂತುಷ್ಟಗೊಳಿಸುವ ನೀತಿಯ ವಿರುದ್ಧವಾದ ಹಾಗೂ ಜನ- ವಿರೋಧಿ ಆರ್ಥಿಕ ನೀತಿಗಳಿಗೆ ವಿರುದ್ಧವಾದ ಮತ ಎಂದು ವರ್ಣಿಸಿದೆ. ಇಡೀ ಲೋಕಸಭಾ ಕ್ಷೇತ್ರದಲ್ಲಿ ಕಂಡುಬಂದ ಭಾರೀ ಅಂತರವಷ್ಟೇ ಅಲ್ಲ, ಈ ಕ್ಷೇತ್ರದ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲೂ ಎಲ್.ಡಿ.ಎಫ್. ಅಭ್ಯರ್ಥಿ ಸಾಧಿಸಿದ ಭಾರೀ ಮುನ್ನಡೆ ಮಹತ್ವಪೂರ್ಣವಾದದ್ದು ಎಂದಿರುವ ಪೊಲಿಟ್‌ಬ್ಯೂರೋ ಈ ವಿಜಯ ಇಡೀ ದೇಶದಲ್ಲಿ ಎಡ, ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳಿಗೆ ಸ್ಫೂರ್ತಿ ತುಂಬುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ.

ಒಟ್ಟಪಾಳಂ ಚುನಾವಣೆಯ ನಂತರ ಯು.ಡಿ.ಎಫ್. ರಾಜ್ಯ ಸರಕಾರ ರಾಜೀನಾಮೆ ನೀಡಿ ರಾಷ್ಟ್ರಪತಿ ಆಳ್ವಿಕೆಯಲ್ಲಿ ಚುನಾವಣೆ ನಡೆಸಬೇಕಾದ ಅಗತ್ಯ ಇನ್ನಷ್ಟು ಹೆಚ್ಚಿದೆ ಎಂದು ಸಿಪಿಐ(ಎಂ) ಕೇರಳ ರಾಜ್ಯಮಂಡಳಿ ಹೇಳಿದೆ. ಈ ನಡುವೆ ಈ ಫಲಿತಾಂಶದಿಂದ ಆಘಾತಕ್ಕೊಳಗಾಗಿರುವ ಯು.ಡಿ.ಎಫ್. ಗೊಂದಲಪೂರವಾಗಿದೆ ಎಂದು ತಿಳಿದು ಬಂದಿದೆ.

ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಸ್ವಾಗತ

ಮೀಸಲಾತಿ ಅಧಿಸೂಚನೆ : ಸಾಮಾಜಿಕ ನ್ಯಾಯದತ್ತ ಇಟ್ಟ ಹೆಜ್ಜೆ

ಭಾರೀ ವಿಳಂಬದ ನಂತರ ಕೇಂದ್ರ ಸರ್ಕಾರೀ ಹುದ್ದೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ 27. ಶೇ. ಮೀಸಲಾತಿಯನ್ನು ನೀಡುವ ಅಧಿಸೂಚನೆ ಜ್ಯಾರಿಯಾಗಿದೆ. ವಿಳಂಬದ ನಂತರವಾದರೂ ಈಗಲಾದರೂ ಕೈಗೊಂಡಿರುವ ಈ ಕ್ರಮವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸ್ವಾಗತಿಸಿದೆ. ಇದು ವಿ.ಪಿ.ಸಿಂಗ್ ಸರಕಾರ ಘೋಷಿಸಿದ ಮೀಸಲಾತಿಯನ್ನು ಎತ್ತಿಹಿಡಿದು ಹಿಂದುಳಿದ ವರ್ಗಗಳಲ್ಲಿನ ಸಂಪನ್ನ ವಿಭಾಗಗಳನ್ನು (ಕೆನೆಮಯವಾದ ಪದರವನ್ನು) ಮೀಸಲಾತಿ ಸೌಲಭ್ಯದಿಂದ ಹೊರತುಪಡಿಸಬೇಕೆನ್ನುವ ಸುಪ್ರೀಂ ಕೋರ್ಟ್ ನಿರ್ದೇಶಕ್ಕೆ ಅನುಗುಣವಾಗಿಯೇ ಇದೆ, 'ಕೆನೆಮಯವಾಗಿರುವ ಪದರ'ವನ್ನು ಗುರುತಿಸಿರುವುದು ಸುಪ್ರೀಂ ಕೋರ್ಟ್ ನಿರ್ಣಯಕ್ಕೆ ಅನುಗುಣವಾಗಿ ಇದೆ ಎಂದು ಪಿ.ಬಿ. ಹೇಳಿದೆ.

ಈ ಅಧಿಸೂಚನೆಯ ಅನುಭವವನ್ನು ಸ್ವಲ್ಪ ಸಮಯದ ನಂತರ ಪರಾಮರ್ಶಿಸಬೇಕು. ಮೀಸಲಾತಿ ಕೋಟಾಗಳು ಈ ಹಿಂದುಳಿದ ವರ್ಗಗಳಿಂದಲೇ, ಭರ್ತಿಯಾಗುತ್ತವೆಯೋ ಇಲ್ಲವೇ ಎಂಬ ಬಗ್ಗೆ ನಿಗಾ ಅಗತ್ಯ

ಈ ಅಧಿಸೂಚನೆಯ ಜ್ಯಾರಿಯೊಂದಿಗೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ದೀರ್ಘಕಾಲದ ಬೇಡಿಕೆ ಈಡೇರಿದಂತಾಗಿದೆ. ಸಾಮಾಜಿಕ ನ್ಯಾಯದ ಗುರಿಸಾಧನೆಯಲ್ಲಿ ಇದು ಒಂದು ಸೀಮಿತ ಹೆಜ್ಜೆ ಎಂಬ ತನ್ನ ನಿಲುವನ್ನು ಮತ್ತೆ ನೆನಪಿಸಿರುವ ಪೊಲಿಟ್‌ಬ್ಯೂರೋ, ಭೂ ಸುಧಾರಣೆಗಳನ್ನು ಜ್ಯಾರಿಗೆ ತರುವಂತೆ ಮಾಡುವ, ಸಾಮಾಜಿಕ ಹಾಗೂ ಆರ್ಥಿಕ ಶೋಷಣೆಯನ್ನು ಕೊನೆಗೊಳಿಸಲು ಸಾಮಾಜಿಕ ಆರ್ಥಿಕ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ ತರುವ ಹೋರಾಟವನ್ನು ಎಲ್ಲಾ ಜನವಿಭಾಗಗಳನ್ನು ಒಟ್ಟುಗೂಡಿಸಿ ಮುಂದುವರೆಸಬೇಕಾಗಿದೆ ಎಂದಿದೆ.

ಚೀಣಾದೊಡನೆ ಒಪ್ಪಂದಗಳು : ಮುಂದಕ್ಕಿಟ್ಟ ದೊಡ್ಡಹೆಜ್ಜೆ

ಚೀಣಾಕ್ಕೆ ಭಾರತದ ಪ್ರಧಾನಿಯ ಭೇಟಿಯ ಸಂದರ್ಭದಲ್ಲಿ ಭಾರತ ಮತ್ತು ಚೀಣಾದ ಸರಕಾರಗಳ ನಡುವೆ ಒಪ್ಪಂದಗಳಿಗೆ ಸಹಿ ಆಗಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸ್ವಾಗತಿಸಿದೆ. ಚೀಣಾದೊಡನೆ ಸಂಬಂಧಗಳನ್ನು ಸುಧಾರಿಸಬೇಕೆಂದು ಸಿಪಿಐ(ಎಂ) ಹಿಂದಿನಿಂದಲೂ ಹೇಳಿಕೊಂಡು ಬಂದಿರುವ ನಿಲುವಿಗೆ ಅನುಗುಣವಾಗಿರುವ ಒಪ್ಪಂದಗಳು ಇವು.

ವಾಸ್ತವ ನಿಯಂತ್ರಣಾ ರೇಖೆಯ ಸುತ್ತ ಪರಸ್ಪರ ವಿಶ್ವಾಸ ಕುದುರಿಸುವ ಕ್ರಮಗಳ ಮೂಲಕ ಗಡಿಯಲ್ಲಿ ಶಾಂತಿ ಹಾಗೂ ನೆಮ್ಮದಿಯನ್ನು ಬಲಗೊಳಿಸುವ ಒಪ್ಪಂದ ಒಂದು ದೊಡ್ಡ ಹೆಜ್ಜೆ. ವಾಸ್ತವ ನಿಯಂತ್ರಣ ರೇಖೆಗೆ ಗೌರವ ನೀಡಿ ಅದನ್ನು ಪರಿಪಾಲಿಸುವ, ಈ ಪ್ರದೇಶದಲ್ಲಿ ಮಿಲಿಟರಿ ಪ್ರಮಾಣವನ್ನು ಕಡಿಮೆಮಾಡುವ ಹಾಗೂ ಎರಡೂ ಕಡೆಯ ತಜ್ಞರು ನಿಯಂತ್ರಣಾ ರೇಖೆಯ ವಾಸ್ತವ ವ್ಯಾಪ್ತಿಯ ಬಗ್ಗೆ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಪರಿಹರಿಸುವ ನಿರ್ಣಯ ಈ ಒಪ್ಪಂದದ ಸಕಾರಾತ್ಮಕ ಹೆಜ್ಜೆಗಳು. ಪರಸ್ಪರ ವಿರುದ್ಧ ಬಲಪ್ರಯೋಗ ಮಾಡುವುದಿಲ್ಲ ಎಂದೂ ಎರಡೂ ದೇಶಗಳು ಪ್ರತಿಜ್ಞೆ ಮಾಡಿವೆ. ಈ ಒಪ್ಪಂದ ಹಾಗೂ ಗಡಿಪ್ರಶ್ನೆಯ ಮೇಲೆ ಜಂಟಿ ಕಾರ್ಯನಿರತ ಗುಂಪು ತನ್ನ ಕೆಲಸವನ್ನು ತೀವ್ರಗೊಳಿಸಬೇಕು ಎಂದು ನಿರ್ದೇಶನ ನೀಡಿರುವುದು ಗಡಿವಿವಾದದ ಪೂರ್ಣ ಇತ್ಯರ್ಥಕ್ಕೆ ಅನುವುಮಾಡಿಕೊಡುತ್ತದೆ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ಪರಿಸರ ಮತ್ತು ಸುದ್ದಿ ಮಾಧ್ಯಮದ ರಂಗಗಳಲ್ಲಿ ಗಡಿ ವ್ಯಾಪಾರ ಹಾಗೂ ಸಹಕಾರವನ್ನು ವಿಸ್ತರಿಸುವ ಬಗ್ಗೆ ಮಾಡಿಕೊಂಡಿರುವ ಇನ್ನೊಂದು ಒಪ್ಪಂದ ಕೂಡ ಈ ಎರಡು ದೊಡ್ಡ ಏಶಿಯನ್ ದೇಶಗಳ ನಡುವೆ ಪರಸ್ಪರ ಸಂಬಂಧಗಳನ್ನು ಬಲಪಡಿಸಲು ನೆರವಾಗುತ್ತದೆ. ಆರ್ಥಿಕ ಸಹಕಾರ ಹಾಗೂ ವ್ಯಾಪಾರ ಸಂಬಂಧಗಳನ್ನು ಬೆಳೆಸುವ ಇನ್ನಷ್ಟು ಮುತುವರ್ಜಿ ಅಗತ್ಯ ಎಂದು ಪಿ.ಬಿ. ಹೇಳಿದೆ.

ಎರಡು ದೇಶಗಳಲ್ಲಿನ ಸಂಬಂಧಗಳಲ್ಲಿರುವ ಎಲ್ಲಾ ಕಿರಿಕಿರಿಗಳನ್ನು ನಿವಾರಿಸಲೇಬೇಕೆನ್ನುವ ಬಗ್ಗೆ ಅರಿವು ಎರಡೂ ದೇಶಗಳಲ್ಲಿ ಹೆಚ್ಚಿರುವುದು ಎರಡು ದೇಶಗಳ ನಡುವೆ ಸಂಬಂಧಗಳಲ್ಲಿ ತ್ವರಿತ ಸುಧಾರಣೆಗಳನ್ನು ಸಾಧ್ಯವಾಗಿಸಬಲ್ಲದು. ತಮ್ಮ ಸ್ವಾತಂತ್ರ್ಯ, ಸಾರ್ವಭೌಮತ್ವಗಳನ್ನು ಉಳಿಸಿಕೊಳ್ಳಬಯಸುವ ಎಲ್ಲಾ ದೇಶಗಳ ಮೇಲೆ ತನ್ನ ಪ್ರಾಬಲ್ಯವನ್ನು ಹೇರಲು ಅಮೇರಿಕಾ ಪ್ರಯತ್ನಿಸುತ್ತಿರುವಂತಹ ವಿಶ್ವ ಸನ್ನಿವೇಶದಲ್ಲಿ ಸರ್ವತೋಮುಖ ಸಹಕಾರ ಬೆಳೆಯುವುದು ನಮ್ಮೆರಡೂ ದೇಶಗಳ ಹಾಗೂ ಈ ಪ್ರದೇಶದ ಹಿತಾಸಕ್ತಿಗಳಿಗೆ ಅನುಕೂಲವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಭಾರತ್ ಬಂದ್ : ಪೊಲಿಟ್‌ಬ್ಯೂರೋ ಅಭಿನಂದನೆ

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ನೀಡಿದ ಕರೆಯ ಮೇರೆಗೆ ಭಾರತ್ ಬಂದ್ ಹಾಗೂ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ ಜನತೆಯನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಅಭಿನಂದಿಸಿದೆ.

ಬಂದ್‌ನಲ್ಲಿ ಭಾಗವಹಿಸಿದವರ ವಿರುದ್ಧ ವ್ಯಾಪಕ ದಮನ ನಡೆದಿರುವುದನ್ನು ಪೊಲಿಟ್‌ಬ್ಯೂರೋ ಖಂಡಿಸಿದೆ. ದೇಶಾದ್ಯಂತ ಸಾವಿರಾರು ಕಾರ್ಯಕರ್ತರನ್ನು ಬಂದ್ ಸಮಯದಲ್ಲಿ ಬಂಧಿಸಲಾಯಿತು. ಅಸ್ಸಾಂ, ಕೋಕ್ರಾಝಾರ್, ಮಾಲೇಗಾಂವ್‌ನಲ್ಲಿ, ಬಿಹಾರದ ಗೋಡ್ಡಾದಲ್ಲಿ, ಆಂಧ್ರ ಪ್ರದೇಶದ ಹೈದರಾಬಾದ್‌ನಲ್ಲಿ ಹಾಗೂ ದಿಲ್ಲಿ ಸಮೀಪವಿರುವ ನೋಯ್ಡಾದಲ್ಲಿ ಅಮಾನುಷ ಲಾಠೀಚಾರ್ಜ್ ನಡೆಯಿತು.

ಬಂದ್ ಹಾಗೂ ಸಾರ್ವತ್ರಿಕ ಮುಷ್ಕರದ ಯಶಸ್ಸು ನರಸಿಂಹರಾವ್ ಸರಕಾರದ ಆರ್ಥಿಕ ನೀತಿಗಳಿಗೆ ದುಡಿಯುವ ಜನರ ವಿರೋಧದ ಒಂದು ಬಲಶಾಲಿಯಾದ ಅಭಿವ್ಯಕ್ತಿ ಎಂದು ಪೊಲಿಟ್‌ಬ್ಯೂರೋ ವರ್ಣಿಸಿದೆ.

ಸಿಪಿಐ(ಎಂ) ದಿಲ್ಲಿ ಕಛೇರಿಗೆ ಬಂದ್ ದಿನ ಪೋಲೀಸ್ ಮುತ್ತಿಗೆ

ಬಂದ್‌ನ ದಿನ ಮುಂಜಾವಿನಿಂದಲೇ ನವದೆಹಲಿಯಲ್ಲಿರುವ ಸಿಪಿಐ(ಎಂ) ರಾಜ್ಯ ಸಮಿತಿಯ ಕಚೇರಿಯ ಹೊರಗೆ ಪೋಲೀಸ್ ಬಂದೋಬಸ್ತ್ ಹಾಕಿದ್ದನ್ನು ಪೊಲಿಟ್‌ಬ್ಯೂರೋ ಖಂಡಿಸಿದೆ. ಪಕ್ಷದ ಮಹಿಳಾ ಮುಖಂಡರಾದ ಬೃಂದಾ ಕಾರಟ್ ಹಾಗೂ ಇಂದ್ರಾಣಿ ಮಜುಂದಾರ್ ಬಂದ್ ಸಮಯದಲ್ಲಿ ಕಚೇರಿ ಬಿಟ್ಟು ಹೊರಹೋಗದಂತೆ ತಡೆಯಲು ಪೋಲೀಸರನ್ನು ಹಾಕಲಾಗಿತ್ತು. ಪಕ್ಷದ ಕಚೇರಿ ಹಾಗೂ ಅದರ ಮುಖಂಡರ ಮೇಲೆ ನಡೆದಿರುವ ಈ ಪೋಲೀಸ್ ಕಾರ್ಯಾಚರಣೆ ಒಂದು ರಾಷ್ಟ್ರೀಯ ರಾಜಕೀಯ ಪಕ್ಷದ ಹಕ್ಕುಗಳನ್ನು ದಮನ ಮಾಡುವ ನಗ್ನ ಪ್ರಯತ್ನ ಎಂದು ಟೀಕಿಸಿರುವ ಪಿ.ಬಿ. ಈ ಕಾನೂನುಬಾಹಿರ ಕ್ರಮಕ್ಕೆ ವಿವರಣೆ ನೀಡಬೇಕೆಂದು ದಿಲ್ಲಿ ಆಡಳಿತವನ್ನು ಒತ್ತಾಯಿಸಿದೆ.

ಕೈಗಾರಿಕೆಗಳು ಮುಚ್ಚಿ ಕಾರ್ಮಿಕರು ಬೀದಿಪಾಲಾಗುತ್ತಿರುವಾಗ ಆರ್ಥಿಕ ಸ್ಥಿರತೆ ನಿರೀಕ್ಷಿಸುವುದು ಹಾಸ್ಯಾಸ್ಪದ

-- ಡಾ. ಎಂ.ಕೆ. ಫಂಡೆ

ಭಾರತ ಸರಕಾರ ಈಗಲಾದರೂ ತನ್ನ ಆರ್ಥಿಕ ನೀತಿಗಳ ಹಾಗೂ ತಾನು ಈಗ ಹಿಡಿದಿರುವ ದಾರಿಯ ಅಪಾಯಕಾರೀ ಪರಿಣಾಮಗಳನ್ನು ಅರಿತುಕೊಂಡು ದೇಶದ ಆರ್ಥಿಕವನ್ನು ಉಳಿಸಲು ಪರ್ಯಾಯ ನೀತಿಗಳನ್ನು ರೂಪಿಸುತ್ತದೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಫಂಡೆ ಆಶಯ ವ್ಯಕ್ತಪಡಿಸಿದ್ದಾರೆ. ಅವರು ಬೆಂಗಳೂರಿನಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಿದ್ದರು.

ಸೆಪ್ಟೆಂಬರ್ 9 ರ ರಾಷ್ಟ್ರವ್ಯಾಪಿ ಕೈಗಾರಿಕಾ ಮುಷ್ಕರ ಭಾರತದ ದುಡಿಯುವ ಜನಗಳಲ್ಲಿ, ಶ್ರಮಜೀವಿಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಎತ್ತಿ ತೋರಿದೆ. ಸರಕಾರ ಇದರ ಮಹತ್ವವನ್ನು ಕಡೆಗಣಿಸಲು ಯತ್ನಿಸಿರುವುದಾದರೂ, ಈ ಕಾರ್ಯಾಚರಣೆಯ ವ್ಯಾಪ್ತಿಯನ್ನು ನಿರ್ಲಕ್ಷಿಸುವುದು ಅದಕ್ಕೆ ಸಾಧ್ಯವಿಲ್ಲವೆಂದು ಡಾ. ಫಂಡೆ ಹೇಳಿದ್ದಾರೆ.

ಭಾರತದ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ಪರಿಶೀಲಿಸುತ್ತಿರಲೆಂದು ಭಾರತ ಸರಕಾರ ರಚಿಸಿದ ತ್ರಿಪಕ್ಷೀಯ ಸಮಿತಿ ಕಾರ್ಮಿಕರ ಒಂದೇ ಒಂದು ಸಮಸ್ಯೆಯನ್ನು ಪರಿಹರಿಸಿಲ್ಲ. ಮೂರು ತಿಂಗಳಿಗೊಮ್ಮೆ ಸಮಿತಿಯ ಸಭೆ ಸೇರುವುದೆಂದು ಕಾರ್ಮಿಕ ಮಂತ್ರಿ ಸಂಗ್ಮಾರವರು ತಾವೂ ನೀಡಿದ ಮಾತನ್ನು ಎಂದೂ ನಡೆಸಿಕೊಟ್ಟಿಲ್ಲ. ಕೆಲವು ಕೈಗಾರಿಕಾ ತ್ರಿಪಕ್ಷೀಯ ಸಮಿತಿಗಳಂತೂ ಕೇವಲ ಕಾಗದದಲ್ಲೇ ಉಳಿದಿವೆ. ಈ ಸಮಿತಿಗಳು ಕೈಗೊಂಡ ನಿರ್ಣಯಗಳು ಜಾರಿಗೆ ಬಂದಿಲ್ಲ. ಆದರೂ ಬಂದ್ ನಂತರ ಕಾರ್ಮಿಕ ಮಂತ್ರಿಗಳು ಕಾರ್ಮಿಕ ವರ್ಗದ ಎಲ್ಲಾ ಸಮಸ್ಯೆಗಳನ್ನು ಸರಕಾರ ಬಗೆಹರಿಸಿದೆ, ಕಾರ್ಮಿಕರು ಮುಷ್ಕರ ಮಾಡಲು ಕಾರಣಗಳೇ ಇಲ್ಲ ಎಂದು ಹೇಳಿಕೊಂಡಿದ್ದಾರೆ! ತ್ರಿಪಕ್ಷೀಯ ಸಮಿತಿ ಕೈಗಾರಿಕಾ ರೋಗಗ್ರಸ್ತತೆಯ ಬಗ್ಗೆ ಪರಿಶೀಲಿಸುತ್ತಿರುವುದರಿಂದ ಬಿ.ಐ.ಎಫ್.ಆರ್. ರೋಗಗ್ರಸ್ತ ಕೈಗಾರಿಕೆಗಳ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳುವುದಿಲ್ಲ ಎಂಬ ಭಾರತ ಸರಕಾರದ ಆಶ್ವಾಸನೆಯೂ ಟೊಳ್ಳು ಮಾತೆಂದು ಈಗ ಸಾಬೀತಾಗಿದೆ ಎಂದು ಡಾ. ಫಂಡೆ ತಿಳಿಸಿದರು.

ಹೊಸ ಆರ್ಥಿಕ ನೀತಿಗಳಿಂದಾಗಿ ಹೆಚ್ಚೆಚ್ಚು ಕೈಗಾರಿಕೆಗಳು ರೋಗಗ್ರಸ್ತವಾಗುತ್ತಿವೆ ಎಂದ ಡಾ. ಫಂಡೆ ಅಂಕಿ-ಅಂಶಗಳನ್ನು ನೀಡಿದರು. ಇತ್ತೀಚಿನ ಅಂಕಿ ಸಂಖ್ಯೆಗಳ ಪ್ರಕಾರ ರೋಗಗ್ರಸ್ತ ಘಟಕಗಳ

ಇತ್ತೀಚಿನ ಅಂಕಿ-ಸಂಖ್ಯೆಗಳ ಪ್ರಕಾರ ರೋಗಗ್ರಸ್ತ ಕೈಗಾರಿಕಾ ಘಟಕಗಳ ಸಂಖ್ಯೆ 4 ಲಕ್ಷ 10 ಸಾವಿರಕ್ಕೇರಿದೆ. ವಾಣಿಜ್ಯೋದ್ಯಮಿಗಳ ಸಂಘದ ಪ್ರಕಾರವೇ 1992-93 ರಲ್ಲಿ 30 ಲಕ್ಷ ಕಾರ್ಮಿಕರು ಕೆಲಸ ಕಳಕೊಂಡರು. 1993-94 ರಲ್ಲಿ 50 ಲಕ್ಷ ಕಾರ್ಮಿಕರು ಕೆಲಸ ಕಳಕೊಳ್ಳುತ್ತಾರೆ. ಆರ್ಥಿಕ ತಜ್ಞರ ಅಂದಾಜಿನ ಪ್ರಕಾರ ಈ ಸಂಖ್ಯೆ ಇನ್ನೂ ಹೆಚ್ಚಿರುತ್ತದೆ. ಹೀಗಿರುವಾಗ ದುಡಿಯುವ ಜನಗಳ ಸಮಸ್ಯೆಗಳನ್ನೆಲ್ಲಾ ಬಗೆಹರಿಸಿದ್ದೇವೆ ಎಂದು ಹೇಗೆ ಹೇಳುತ್ತೀರಿ ಸಂಗ್ಮಾರವರೇ?

ಸಂಖ್ಯೆ ಈಗ 4 ಲಕ್ಷ 10 ಸಾವಿರಕ್ಕೇರಿದೆ. ಅಸೋಸಿಯೇಟೆಡ್ ಚೇಂಬರ್ ಆಫ್ ಕಾಮರ್ಸ್ ಪ್ರಕಾರವೇ 1992-93 ರಲ್ಲಿ 30 ಲಕ್ಷ ಕಾರ್ಮಿಕರು ಇದರಿಂದಾಗಿ ಕೆಲಸ ಕಳಕೊಂಡರು. 1993-94 ರಲ್ಲಿ ಇನ್ನೂ 50 ಲಕ್ಷ ಕಾರ್ಮಿಕರು ಕೆಲಸ ಕಳಕೊಳ್ಳುವ ಸಂಭವವಿದೆ.

ಆರ್ಥಿಕ ತಜ್ಞರ ಅಂದಾಜಿನ ಪ್ರಕಾರ ಈ ಸಂಖ್ಯೆ ಇನ್ನೂ ಹೆಚ್ಚಿದೆ. ಈಗಾಗಲೇ ನಗರಗಳಲ್ಲಿ 3.7 ಕೋಟಿ ನಿರುದ್ಯೋಗಿಗಳ ಪಟ್ಟಿಯಲ್ಲಿದ್ದಾರೆ. ಗ್ರಾಮಾಂತರದಲ್ಲಿ 7 ಕೋಟಿ ನಿರುದ್ಯೋಗಿಗಳಾಗಿದ್ದಾರೆ. ಈ ಸಂಖ್ಯೆ ಆತಂಕಕಾರೀ ರೀತಿಯಲ್ಲಿ ಬೆಳೆಯುವಾಗ, ಆರ್ಥಿಕ ಸ್ಥಿರತೆ ನಿರೀಕ್ಷಿಸುವುದು ಹಾಸ್ಯಾಸ್ಪದ. ಕಾರ್ಮಿಕ ಸಂಘಗಳು ಹೊಸ ಉದ್ಯೋಗಾವಕಾಶಗಳ ಸೃಷ್ಟಿಗಾಗಿ ಒಂದು ದೇಶವ್ಯಾಪಿ ಆಂದೋಲನವನ್ನು ಹರಿಯಬಿಡಬೇಕಾಗುತ್ತದೆ ಎಂದು ಡಾ. ಫಂಡೆ ಎಚ್ಚರಿಸಿದರು.

ಐ.ಎಂ.ಎಫ್. ಬಯಸುವಂತೆ ಎಕ್ಸಿಟ್ ಪಾಲಿಸಿಯನ್ನು ಅಳವಡಿಸಿಕೊಂಡ ಹೊಸ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ತರಲು ತವಕಪಡುತ್ತಿರುವ ಸರಕಾರ ಬೋನಸ್ ಕಾಯ್ದೆಯನ್ನು ತಿದ್ದುಪಡಿ ಮಾಡುವ ಬಗ್ಗೆ ಯಾವುದೇ ಉತ್ಸಾಹ ತೋರುತ್ತಿಲ್ಲ. ಆ ಕಾಯ್ದೆಯಲ್ಲಿ ನಮೂದಿಸಿರುವ ಮಿತಿ ಈಗ ಅರ್ಥ ಹೀನ. ಆದಾಯ ತೆರಿಗೆ ಶಾಸನದಲ್ಲೂ ಅತೀ ಕಮ್ಮಿ ವಿನಾಯ್ತಿ ಮಿತಿಯಿಂದಾಗಿ ಬಹು ಮಂದಿ ಕಾರ್ಮಿಕರು, ರೈತರು ಬೋನಸ್ ಕಾಯ್ದೆಗೆ ಬಲಿಯಾಗಿದ್ದಾರೆ ಎಂದು ಡಾ. ಫಂಡೆ ಹೇಳಿದರು.

ಸಾರ್ವಜನಿಕ ವಲಯದ ಕಾರ್ಮಿಕರಿಗೆ ತುಟ್ಟಿಭತ್ಯೆ, ವೇತನ ಮಾತುಕತೆಗಳಲ್ಲಿನ ವಿಳಂಬ, ಕಾರ್ಮಿಕರನ್ನು ವಂಚಿಸುವ ಪೆನ್ಶನ್ ಯೋಜನೆ ಇತ್ಯಾದಿಗಳ ಬಗ್ಗೆ ವಿವರಿಸಿದ ಕಾಂ ಫಂಡೆ ದುಡಿಯುವ ಜನಗಳು ಈ ಎಲ್ಲಾ ಮೋಸಗಳನ್ನು ತೆಪ್ಪಗೆ ನಿಂತು ನೋಡಲು ಸಿದ್ಧರಿಲ್ಲ ಎಂದು ಎಚ್ಚರಿಸಿದರು. ರಾಷ್ಟ್ರವ್ಯಾಪಿ ಸಾಮೂಹಿಕ ಹೋರಾಟಗಳ ಹೊಸ ಕಾರ್ಯಕ್ರಮವನ್ನು ರೂಪಿಸಲಾಗುವುದು ಎಂದರು. ಭಾರತ ಸರಕಾರ ಕಾರ್ಮಿಕ ಸಂಘಗಳ, ಇತರ ಸಾಮೂಹಿಕ ಸಂಘಟನೆಗಳ ಮನವಿಗಳನ್ನು ಉಪೇಕ್ಷಿಸಿದರೆ ಅದು ಇನ್ನೂ ತೀವ್ರತರವಾದ ಆಂದೋಲನಗಳನ್ನು ಎದುರಿಸಬೇಕಾಗಬಹುದು. ಅದಕ್ಕೆ ಸರಕಾರವೇ ಹೊಣೆಯಾಗುತ್ತದೆ ಎಂದೂ ಡಾ. ಎಂ.ಕೆ. ಫಂಡೆ ಎಚ್ಚರಿಕೆ ನೀಡಿದರು.

ಸುದ್ದಿಗಳು

ವಿಮಾ ರಂಗದ ಖಾಸಗೀಕರಣದ ವಿರುದ್ಧ ಹೋರಾಟಕ್ಕೆ ಕರೆ

ಶಿವಮೊಗ್ಗ : ಕೇಂದ್ರ ಸರಕಾರವು ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್. ಗಳ ಷರತ್ತುಗಳಿಗೆ ತಲೆಬಾಗಿ ವಿಮೆ, ಬ್ಯಾಂಕು, ಮತ್ತಿತರ ಸಾರ್ವಜನಿಕ ರಂಗದ ಉದ್ಯಮಗಳನ್ನು ಖಾಸಗೀಕರಣಗೊಳಿಸಲು ಪ್ರಯತ್ನಿಸುತ್ತಿದ್ದು, ಈ ಪಿತೂರಿಯ ವಿರುದ್ಧ ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ದಕ್ಷಿಣ ಮಧ್ಯವಲಯ ವಿಮಾ ನೌಕರರ ಫೆಡರೇಷನ್‌ನ ಉಪಾಧ್ಯಕ್ಷ ಎಂ.ಕೆ. ದೇಶಪಾಂಡೆಯವರು ಕರೆಯಿತ್ತರು.

ದೇಶಪಾಂಡೆಯವರು ಆ. 22 ರಂದು ಶಿವಮೊಗ್ಗದಲ್ಲಿ ಆರಂಭಗೊಂಡ ವಿಮಾ ನೌಕರರ ಸಂಘ, ಉಡುಪಿ ವಿಭಾಗದ 2 ದಿನಗಳ 36ನೇ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. 25 ಮಹಿಳಾ ಪ್ರತಿನಿಧಿಗಳು ಸೇರಿದಂತೆ 159 ಪ್ರತಿನಿಧಿಗಳು, ವೀಕ್ಷಕರು ಪಾಲ್ಗೊಂಡಿದ್ದ ಸಮ್ಮೇಳನದಲ್ಲಿ 35 ಮಂದಿ ವರದಿಯ ಮೇಲೆ ಚರ್ಚೆ ನಡೆಸಿದರು. ಸಮ್ಮೇಳನದಲ್ಲಿ ಈ ಕೆಳಗಿನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು. ಅಧ್ಯಕ್ಷರಾಗಿ ಬಿ.ಆರ್. ಕಾಮತ್, ಪ್ರಧಾನ ಕಾರ್ಯದರ್ಶಿಯಾಗಿ ಪಿ. ವಿಶ್ವನಾಥ ರೈ ಆರಿಸಲ್ಪಟ್ಟರು.

ಅಂತರ್‌ರಾಷ್ಟ್ರೀಯ, ರಾಷ್ಟ್ರೀಯ ಮತ್ತು ಉದ್ಯಮಕ್ಕೆ ಸಂಬಂಧಿಸಿದಂತೆ ಗೊತ್ತುವಳಿಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಸಮ್ಮೇಳನದ ಸ್ವಾಗತ ಸಮಿತಿಯ ಸಂಚಾಲಕ ಕೆ.ಬಿ. ಕೃಷ್ಣಮೂರ್ತಿಯವರು ವಂದನಾರ್ಪಣೆಗೈದರು.

ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳಿಂದ ಧರಣೆ

ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳ ಹೋರಾಟ ಸಮಿತಿ ಹಾಗೂ ಕೊಂಕಣ ರೈಲ್ವೆ ಅಧಿಕಾರಿಗಳ ಜಂಟಿ ಸಭೆಯ ಕರೆಯಬೇಕು, ಕೊಂಕಣ ರೈಲ್ವೆಯ ನೇಮಕಾತಿಯಲ್ಲಿ ಸಂತ್ರಸ್ತರಿಗೆ ಆದ ಅನ್ಯಾಯದ ಬಗ್ಗೆ ಶೀಘ್ರ ತನಿಖೆ ನಡೆಸಬೇಕು. ಸಂತ್ರಸ್ತರಿಗೆ ಉದ್ಯೋಗ ನೀಡುವ ಪೂರಕವಾಗಿ ಖಚಿತವಾಗಿ ನಿಯಮಾವಳಿಗಳನ್ನು ತಯಾರಿಸಿ ಉದ್ಯೋಗಗಳ ಮಾಹಿತಿಯನ್ನು ಒದಗಿಸಬೇಕೆಂಬ ಬೇಡಿಕೆಗಳನ್ನು ಒತ್ತಾಯಿಸಿ ಜಿಲ್ಲಾಧಿಕಾರಿ ಕಛೇರಿ ಮಂಗಳೂರು ಇವರ ಕಛೇರಿ ಎದುರು ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳ ಹೋರಾಟ ಸಮಿತಿ ನೇತೃತ್ವದಲ್ಲಿ ಆಗಸ್ಟ್ 17, 1993 ರಂದು ಧರಣೆ ಸತ್ಯಾಗ್ರಹ ಜರುಗಿತು. ಧರಣೆ ಸತ್ಯಾಗ್ರಹದ ಉದ್ಘಾಟನೆಯನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ. ಯಾದವ ಶೆಟ್ಟಿ ನೆರವೇರಿಸಿದರು.

ಹೋರಾಟಕ್ಕೆ ಬೆಂಬಲ ಸೂಚಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ)ನ ದ.ಕ. ಜಿಲ್ಲಾ ಕಾರ್ಯದರ್ಶಿ ಎಸ್. ರಾಜ್‌ಕುಮಾರ್, ಸಿಐಟಿಯು ದ.ಕ. ಜಿಲ್ಲಾ ಸಹಕಾರ್ಯದರ್ಶಿ ಉಮೇಶ್ ಭಂಡಾರಿ, ರೈತ ಮುಂದಾಳು ಡೇವಿಡ್ ಕರ್ಕಡ ರವರು ಮಾತನಾಡಿದರು.

ಧರಣೆ ಸತ್ಯಾಗ್ರಹದ ಮನವಿಯನ್ನು ಜಿಲ್ಲಾಧಿಕಾರಿಯವರಿಗೆ ಸಮಿತಿಯ ಅಧ್ಯಕ್ಷರಾದ ವಿಶ್ವನಾಥ ರೈ, ಕಾರ್ಯದರ್ಶಿ ಪಿ. ವಿಶ್ವನಾಥ, ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷರಾದ ಕೆ. ಯಾದವ ಶೆಟ್ಟಿ ಪ್ರಭಾಕರ ನಾಯಕ್, ದುಗ್ಗಪ್ಪ ಎ. ಶೆಟ್ಟಿ ಮುಂತಾದವರಿದ್ದು, ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳು ಹೋರಾಟ ಸಮಿತಿ, ರೈಲ್ವೆ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳನ್ನೊಳಗೊಂಡ ಜಂಟಿ ಸಭೆಯನ್ನು ಕೂಡಲೇ ಕರೆಯಲಾಗುವುದೆಂಬ ಭರವಸೆಯನ್ನು ಜಿಲ್ಲಾಧಿಕಾರಿಗಳು ವ್ಯಕ್ತಪಡಿಸಿದರು.

ಕೊನೆಗೆ ನಡೆದ ಸಮಾರೋಪ ಸಭೆಯಲ್ಲಿ ಹೋರಾಟ ಸಮಿತಿಯ ಅಧ್ಯಕ್ಷರಾದ ವಿಶ್ವನಾಥ ರೈ ಮತ್ತು ಡಿ.ವೈ.ಎಫ್.ಐ ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡಿದರು. ಪ್ರಾರಂಭದಲ್ಲಿ ಸಮಿತಿಯ ಕಾರ್ಯದರ್ಶಿ ಪಿ. ವಿಶ್ವನಾಥರವರು ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ಪಂಚಾಯಿತಿ ಕೇಂದ್ರದ ಮಂಜೂರಾತಿ ರಾಜಕೀಯ ಗ್ರಾಮಸ್ಥರ ಪ್ರತಿಭಟನೆ, ಸತ್ಯಾಗ್ರಹ

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನಲ್ಲಿ ಗ್ರಾಮ ಪಂಚಾಯಿತಿಗಳ ಅಸಮರ್ಪಕ ವಿಂಗಡಣೆ ಕಾರ್ಯದಲ್ಲಿ ತಹಶೀಲ್ದಾರರು ಈ ಕ್ಷೇತ್ರದ ಶಾಸಕ. ವಿ. ಮುನಿಯಪ್ಪನವರು ಹೇಳಿದಂತೆ ಸರ್ಕಾರದ ಧೋರಣೆಗೆ ವಿರುದ್ಧವಾಗಿ ಅಸಮರ್ಪಕವಾಗಿ ವಿಂಗಡಣೆ ಮಾಡಿದ್ದಲ್ಲದೆ ಪಂಚಾಯಿತಿ ಕೇಂದ್ರಗಳ ರಚನೆಯಲ್ಲೂ ಸಹ ರಾಜಕೀಯ ದುರುಪಯೋಗ ಮಾಡಿ ತನ್ನ ಹಿಂಬಾಲಕರಿಗೊಂದರಂತೆ ಅವರಿರುವ ಸ್ಥಳಗಳಲ್ಲಿ ಕೇಂದ್ರ ಸ್ಥಾನಗಳನ್ನು ಮಾಡಿದ್ದು ಇದರ ವಿರುದ್ಧವಾಗಿ ಇಡೀ ತಾಲ್ಲೂಕಿನಲ್ಲಿ ತೀವ್ರವಾಗಿ ವಿರೋಧ ವ್ಯಕ್ತವಾಗಿದೆ. ಈ ವಿಚಾರದ ಬಗ್ಗೆ ಈಗಾಗಲೇ ಮನವಿ ಪತ್ರ ಮತ್ತು ಸಾವಿರಾರು ಜನರ ಧರಣೆ ಸತ್ಯಾಗ್ರಹಗಳೂ ಸಹ ನಡೆಸಿ ಒತ್ತಾಯ ಮಾಡಿದ್ದರೂ ಕೋಲಾರ ಜಿಲ್ಲಾಧಿಕಾರಿಗಳೂ ಸಹ ಈ ಶಾಸಕನ ಕೈಗೊಂಬೆಯಾಗಿ ಅವಾಸ್ತವಿಕವಾಗಿ ವಿಂಗಡಣೆ ಮತ್ತು ಕೇಂದ್ರಗಳ ರಚನೆ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟ ಪಡಿಸಿರುತ್ತಾರೆ. ಕುಂದಲಗುರ್ಕಿ ಮತ್ತು ಮಂಡಳ ಕೇಂದ್ರವಾಗಿದ್ದು, ಎಲ್ಲಾ ಸೌಲಭ್ಯಗಳೂ ಇದ್ದು ಎಲ್ಲಾ ಹಳ್ಳಿಗಳಿಗೂ ಮಧ್ಯಭಾಗದಲ್ಲಿದ್ದು 1,188 ಜನಸಂಖ್ಯೆ ಇರುವ ಗ್ರಾಮವನ್ನು ಕಡೆಗಣಿಸಿ ಸಂಬಂಧವಿಲ್ಲದ ವೈ. ಹುಣಸೇನಹಳ್ಳಿ ಒಂದು ಮೂಲೆಯಲ್ಲಿದ್ದು ಯಾವುದೇ ಅನುಕೂಲಗಳು ಇಲ್ಲದ ಕೇವಲ 433 ಜನಸಂಖ್ಯೆಯುಳ್ಳ ಗ್ರಾಮವನ್ನು ಗ್ರಾಮಪಂಚಾಯಿತಿ ಕೇಂದ್ರವನ್ನಾಗಿ ಜಿಲ್ಲಾಧಿಕಾರಿಗಳು ಪ್ರಕಟಿಸಿರುವುದರ ವಿರುದ್ಧ ಸುಮಾರು ನೂರಐವತ್ತು ಜನರು ಆಗಸ್ಟ್ 10, 1993 ರಂದು ಧರಣೆ ನಡೆಸಿದ್ದಲ್ಲದೆ ಈ ದಿನದಿಂದಲೇ "ಅನಿರ್ದಿಷ್ಟ ಉಪವಾಸ ಸತ್ಯಾಗ್ರಹವನ್ನು" ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನಡೆಸಲಾಗುತ್ತಿದೆ. ಈ ಉಪವಾಸ ಸತ್ಯಾಗ್ರಹ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಕೆ.ಎಂ. ವೆಂಕಟೇಶ್‌ರವರ ನೇತೃತ್ವದಲ್ಲಿ ಕೆ.ಎನ್. ಪಾಪಣ್ಣ, ಕೆ.ಸಿ. ವೆಂಕಟೇಶ್. ಕೆ.ಎಂ. ವೆಂಕಟಸ್ವಾಮಿ, ಕೆ.ಎಂ. ರಾಮಪ್ಪ. ಜೆ.ಟಿ. ನಾರಾಯಣಸ್ವಾಮಿ, ಕೆ.ಪಿ. ಶ್ರೀರಾಮ, ವೆಂಕಟರೋಣಪ್ಪ ಕೆ.ವಿ. ವೆಂಕಟರಾಯಪ್ಪ, ಹೆಚ್.ಮುನಿಶಾಮಪ್ಪ, ಆಲಂಬಗಿರಿ ಪಾಪಣ್ಣ, ಕೆ. ಸೊಣ್ಣಪ್ಪ, ಕೆ.ಎಸ್. ವೀರಣ್ಣ, ಈ 13 ಜನರು ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೆ. ಕುಂದಲಗುರ್ಕಿ ಗ್ರಾಮದಲ್ಲಿ ಕೇಂದ್ರಸ್ಥಾನ ಮಾಡಬೇಕೆಂತಲೂ ತಾಲ್ಲೂಕಿನಲ್ಲಿ ಅಸಮರ್ಪಕವಾಗಿ ವಿಂಗಡಿಸಿರುವ ಎಲ್ಲಾ ಗ್ರಾಮಗಳನ್ನು ಸರಿಪಡಿಸಬೇಕೆಂದು ಒತ್ತಾಯಿಸಲಾಗಿದೆ. ಉಪವಾಸ ಸತ್ಯಾಗ್ರಹ ಮುಂದುವರೆದಿದೆ.

ಪಿಕೆಟಿಂಗ್: ಕುಂದಲಗುರ್ಕಿ ವಿಭಾಗದಲ್ಲಿ ಸಿಪಿಐ(ಎಂ) ಪ್ರಭಾವ ಹೆಚ್ಚಿಗೆಯಿದ್ದು ಕಾಂಗ್ರೆ ಪ್ರಭಾವ ಕಡಿಮೆಯಿರುವುದರಿಂದ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದೇ ಹಟ ಮಾಡುತ್ತಿರುವುದರಿಂದ ಆಗಸ್ಟ್ 12, 1993 ರಂದು ಶಿಡ್ಲಘಟ್ಟ ತಹಶೀಲ್ದಾರ್ ಕಚೇರಿಯನ್ನು 2-30 ನಿಮಿಷಗಳ ಕಾಲ ಮುತ್ತಿಗೆ ಹಾಕಿ ಸುಮಾರು 300 ಜನ ತಡೆ ಕೆಲಸ ಹಿಡಿದು ಬಂಧನಕ್ಕೊಳಗಾದರು.

ಮಹಿಳೆಯರ ಮೇಲಿನ ಕಿರುಕುಳಕ್ಕೆ ಜೆ.ಎಂ.ಎಸ್. ಪ್ರತಿಭಟನೆ

ಸಿಂಧನೂರು : ಇಲ್ಲಿನ ಡ್ರೈವರ್ ಮತ್ತು ಕ್ಲೀನರ್ಸ್ ಯೂನಿಯನ್ ಮುಖಂಡರಾದ ಬಾಷು ಮಿಯಾ ಮತ್ತಿತರರು ಮಹಿಳೆಯರ ಮೇಲೆ ಅನೇಕ ಮಾನಸಿಕ ದೈಹಿಕ ಆಘಾತಗಳನ್ನು ನೀಡುತ್ತಿದ್ದಾರೆ. ಅವರು ಆಗಸ್ಟ್ 6, 1993 ರಂದು ಓರ್ವ ಮಹಿಳೆಯ ಮೇಲೆ ಅತ್ಯಾಚಾರವೆಸಗಲು ಪ್ರಯತ್ನಿಸುದ್ದುದೇ ಅಲ್ಲದೇ ಅಲ್ಲಿನ ಜನತಾ ಕಾಲೋನಿಯಲ್ಲಿನ ಮಹಿಳೆಯರಿಗೆ ಕಿರುಕುಳ ನೀಡುವುದನ್ನು ಪ್ರತಿಭಟಿಸಿ ನೂರಾರು ಮಹಿಳೆಯರು ಪುರಸಭೆಯಿಂದ ಮೆರವಣಿಗೆ ಹೊರಟು ತಹಶೀಲ್ದಾರರಿಗೆ ಮನವಿ ಪತ್ರ ಅರ್ಪಿಸಿದರು.

ಈ ಮೆರವಣಿಗೆ ನೇತೃತ್ವವನ್ನು ಜನವಾದಿ ಮಹಿಳಾ ಸಂಘಟನೆಯ ಮಹಾದೇವಿ, ಲಿಂಗಮ್ಮ, ರಸೂಲಮ್ಮ, ಶ್ರೀಮತಿ ಗಂಗೂಬಾಯಿ ಮತ್ತು ಕು. ಸಿದ್ದೇಶ್ವರಿ ಮುಂತಾದವರು ಮಾತನಾಡಿದರು.

ಆಟೋ ಚಾಲಕರ ಮೇಲೆ ಹಲ್ಲೆ: ಚಾಲಕರ ಸಂಘದ ಖಂಡನೆ

ಹೊಸಪೇಟೆ : ಮೊನ್ನೆ ಆಗಸ್ಟ್ 18 ರಂದು ರಾತ್ರಿ ಕುಡಿದ ಅಮಲಿನಲ್ಲಿ ಕಾಂಟ್ರಾಕ್ಟರ್ ನೀಲಕಂಠರೆಡ್ಡಿ ಮತ್ತು ಈತನ ಗೂಂಡಾಗಳು ಆಟೋ ಚಾಲಕರ ಮೇಲೆ ಹಲ್ಲೆ ನಡೆಸಿದ್ದನ್ನು ಹೊಸ ಪೇಟೆ ಆಟೋ ಚಾಲಕರ ತೀವ್ರವಾಗಿ ಖಂಡಿಸಿದೆ.

ಈ ಗುಂಡಾಪಡೆ ರಾತ್ರಿ ಸಮಯದಲ್ಲಿ ಆಗಾಗ ಆಟೋ ಚಾಲಕರ ಮೇಲೆ ಹಲ್ಲೆ ನಡೆಸುತ್ತ ನಿರಂತರವಾಗಿ ಕಿರುಕುಳ ಕೊಡುತ್ತಿರುವುದನ್ನು ಗಮನಿಸಿ ಮುಂದೆ ಯಾವುದೇ ರೀತಿಯ ಅಹಿತಕರ ಬೆಳವಣಿಗೆಗೆ ಸಹಾಯಕವಾಗಬಾರದೆಂಬ ಸದುದ್ದೇಶದಿಂದ ಗೂಂಡಾಗಳ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಂಘ ಒತ್ತಾಯಿಸಿದೆ.

ಕಾಂಟ್ರಾಕ್ಟರ್ ನೀಲಕಂಠರೆಡ್ಡಿ ಮತ್ತು ಆತನ ಗೂಂಡಾಗಳು ಹಲವಾರು ವರ್ಷದಿಂದ ನಗರದಲ್ಲಿ ಅಹಿತಕರ ಚಟುವಟಿಕೆಗಳನ್ನು ನಡೆಸುತ್ತ ಬಂದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಪೋಲೀಸ್ ಇಲಾಖೆಯಲ್ಲಿ ಮೊಕದ್ದಮೆ ದಾಖಲಾಗಿರುವುದು ನಗರದ ಜನತೆಗೆ ಗೊತ್ತಿರುವ ಸಂಗತಿಯಾಗಿದೆ.

ಮೊನ್ನೆ ನಡೆದ ಘಟನೆಗೆ ಸಂಬಂಧಿಸಿದಂತೆ ನಗರ ಪೋಲೀಸ್ ಠಾಣೆಯಲ್ಲಿ ನೀಲಕಂಠರೆಡ್ಡಿ ತಾಳೂರು ವೀರಭದ್ರ, ಕೃಷ್ಣಾರೆಡ್ಡಿ, ಶ್ರೀನಿವಾಸ ಮುಂತಾದವರ ಮೇಲೆ ಕಾನೂನುಕ್ರಮ ಕೈಗೊಳ್ಳಲು ಆಟೋ ಚಾಲಕರ ಸಂಘದ ಪದಾಧಿಕಾರಿಗಳು ಮೊನ್ನೆ ದೂರು ನೀಡಿದ್ದು, ಇವರ ಮೇಲೆ ಮೊಕದ್ದಮೆ ದಾಖಲಾಗಿದೆ. ಆರೋಪಿಗಳನ್ನು ಕೂಡಲೇ ಬಂಧಿಸಲು ಹೊಸಪೇಟೆ ಆಟೋ ಯೂನಿಯನ್ ಒತ್ತಾಯಿಸಿದೆ.

ಅಂಗನವಾಡಿ ಕಾರ್ಯಕರ್ತರ ತಾಲೂಕು ಮಟ್ಟದ ಸಭೆ

ಕುರುಗೋಡು : ಬಳ್ಳಾರಿ ಜಿಲ್ಲೆಯಲ್ಲಿ ಕುರುಗೋಡು ಗ್ರಾಮದಲ್ಲಿ ಪಂಚಾಪ್ಪರಯ್ಯ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮುಖ್ಯ ಅತಿಥಿಗಳಾಗಿ ರೈತ ಮುಖಂಡರಾದ ವಿ.ಎಸ್. ಶಿವಶಂಕರ್‌ರವರು ಭಾಗವಹಿಸಿ ಮಾತನಾಡುತ್ತಾ ಅಂಗನವಾಡಿ ಶಿಕ್ಷಕಿಯರು ಒಂದಾಗಿ, ಹೋರಾಟ ಮಾಡದೇ ಸಮಸ್ಯೆಯು ಬಗೆ ಹರಿಯುವುದಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳು ಹಾಗೂ ಪಟ್ಟಾಭದ್ರಹಿತಾಸಕ್ತಿಗಳಿಗೆ ನಮ್ಮ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಅತ್ಯಾಚಾರ ಕೂಡಲೇ ನಿಲ್ಲಬೇಕು, ಹಾಗೂ ನಮ್ಮ ಉದ್ಯೋಗ ಭದ್ರತೆಯಾಗಬೇಕಾದರೆ, ನಾವು ಒಂದಾಗಿ ಹೋರಾಟ ಮಾಡಬೇಕೆಂದು, ಅಂಗನವಾಡಿ ಶಿಕ್ಷಕಿಯರಿಗೆ ವಿ. ಎಸ್. ಶಿವಶಂಕರ್ ಕರೆ ನೀಡಿದರು. ಇನ್ನೊಬ್ಬ ರೈತ ಮುಖಂಡನಾದ ಕೆ. ಬಸವನಗೌಡರ ಕೂಡ ಭಾಗವಹಿಸಿ ಮಾತನಾಡಿದರು. ಸೆಪ್ಟೆಂಬರ್ 5 ರಂದು ತಾಲೂಕು ಮಟ್ಟದ ಶಿಕ್ಷಕಿಯರ ಸಮಾವೇಶಗೊಳ್ಳಲು ಕುರುಗೋಡಿನಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಭಾರತ್ ಬಂದ್‌ಗೆ ಸ್ಪಂದಿಸಿದ ಕರ್ನಾಟಕದ ಜನತೆ

ಎನ್.ಕೆ. ಉಪಾಧ್ಯಾಯ

ನರಸಿಂಹರಾವ್ ಸರಕಾರದ ಆರ್ಥಿಕ ನೀತಿಯ ವಿರುದ್ಧ ಹಾಗೆಯೇ ಕೋಮುವಾದದ ವಿರುದ್ಧ ಸೆಪ್ಟೆಂಬರ್ 9 ರಂದು ಭಾರತ್ ಬಂದ್ ಆಚರಿಸಿ ಜನತೆಯ ಕಾರ್ಮಿಕರ ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕೆಂದು 42 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ದೇಶದ ಜನತೆಗೆ ಕರೆಕೊಟ್ಟಿದ್ದವು. ಸಿಪಿಐ(ಎಂ), ಸಿಪಿಐ ಜನತಾದಳ, ರಾಷ್ಟ್ರೀಯರಂಗ ಈ ಭಾರತ ಬಂದ್‌ಗೆ ಬೆಂಬಲ ನೀಡಿದ್ದವು.

ಕರ್ನಾಟಕ ರಾಜ್ಯದ ಕಾರ್ಮಿಕರೂ, ರೈತರು, ವಿದ್ಯಾರ್ಥಿ ಯುಜನತೆ ಭಾರತ್ ಬಂದ್‌ಗೆ ಬೆಂಬಲ ನೀಡಿ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಯನ್ನು ಖಂಡಿಸುವುದರಲ್ಲಿ ಭಾರತ ದೇಶದ ಇತರ ಜನತೆಯೊಡನೆ ಸೇರಿಕೊಂಡಿರುವುದನ್ನು ನಾವು ಸ್ವಾಗತಿಸುತ್ತೇವೆ. ರಾಜ್ಯದ 20 ಜಿಲ್ಲೆಗಳಲ್ಲೂ, ದ. ಕ. ಗುಲ್ಬರ್ಗ, ರಾಯಚೂರು, ಕೋಲಾರದ ಎಲ್ಲಾ ತಾಲೂಕುಗಳಲ್ಲೂ, ಇತರ ಜಿಲ್ಲೆಗಳ ಹೆಚ್ಚಿನ ತಾಲೂಕುಗಳಲ್ಲೂ ಬಂದ್ ನಡೆದಿದೆ. ಬರೀ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಮಾತ್ರವಲ್ಲ ಪ್ರತಿಯೊಂದು ಜಿಲ್ಲೆಯಲ್ಲಿ ದೊಡ್ಡ ಗ್ರಾಮಗಳಲ್ಲೂ ಬಂದ್ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಈ ಮುಂಚೆ ಭಾರತ್ ಬಂದ್- ಕರ್ನಾಟಕ ಬಂದ್ ನಡೆದಾಗ ನಗರ ಕೇಂದ್ರಗಳಿಗೆ ಮಾತ್ರ ಬಂದ್ ಸೀಮಿತಗೊಳ್ಳುತ್ತಿತ್ತು. ಹೆಚ್ಚಾಗಿ ಕಾರ್ಮಿಕರು, ನಗರಗಳಲ್ಲಿರುವ ವ್ಯಾಪಾರಿಗಳು ಬಂದ್‌ಗೆ ಸ್ಪಂದಿಸುತ್ತಿದ್ದರು. ಗ್ರಾಮಾಂತರ ಪ್ರದೇಶಗಳ ಜನ, ತಾಲೂಕು ಕೇಂದ್ರಗಳು ಶಾಲಾ-ಕಾಲೇಜುಗಳು ತಮ್ಮ ನಿರ್ಲಿಪ್ತತೆಯನ್ನು ತೋರ್ಪಡಿಸುತ್ತಿದ್ದರು. ಬಂದ್‌ಗೆ ವಿರುದ್ಧ ಮಾಡುತ್ತಿರಲಿಲ್ಲ. ಆದರೆ ಸಕ್ರಿಯವಾಗಿ ಸ್ಪಂದಿಸುತ್ತಿರಲಿಲ್ಲ. ಆದರೆ ಈ ಸಲದ ಬಂದ್ ಚರಿತ್ರಾರ್ಹವಾಗಿತ್ತೆಂದರೆ ತಪ್ಪಾಗಲಾರದು. ಮೇಲೆ ನಮೂದಿಸಿದ ಜಿಲ್ಲೆಗಳಲ್ಲಿ ಗ್ರಾಮಾಂತರ ಪ್ರದೇಶಗಳ ಜನರೂ, ರೈತರೂ, ಕೃಷಿ ಕಾರ್ಮಿಕರೂ, ವಿದ್ಯಾರ್ಥಿಗಳೂ, ಯುವಜನತೆಯೂ ಅಸಂಘಟಿತ ಕಾರ್ಮಿಕರು ಈ ಸಲದ ನರಸಿಹರಾವ್ ಸರಕಾರದ ಆರ್ಥಿಕ ನೀತಿ, ಡಂಕೆಲ್ ಪ್ರಸ್ತಾವಗಳನ್ನು ವಿರೋಧಿಸುವುದರಲ್ಲಿ ಮಹತ್ವದ ಪಾತ್ರವಹಿಸಿರುವುದು ಕರ್ನಾಟಕದ ರಾಜಕೀಯ ಬೆಳವಣಿಗೆಯಲ್ಲಿ ಮಹತ್ವದ ವಿಷಯವೆಂದರೆ ತಪ್ಪಾಗಲಾರದು. ರಾಯಚೂರು ಜಿಲ್ಲೆಯ ಒಂಬತ್ತು ತಾಲೂಕುಗಳಲ್ಲಿ ತಾಲೂಕಿನ ಮುಖ್ಯ ಗ್ರಾಮಗಳಲ್ಲಿ ಯಶಸ್ವಿ ಬಂದ್ ಆಚರಿಸಲಾಗಿದೆ. ಗಂಗಾವತಿಯಲ್ಲಿ 4,000 ಕ್ಕೂ ಹೆಚ್ಚು ಕಾರ್ಮಿಕರೂ ಬಡರೈತರೂ, ಕೃಷಿಕಾರ್ಮಿಕರೂ ಬೃಹತ್ ಮತಪ್ರದರ್ಶನ ನಡೆಸಿರುವುದು ಮೆಚ್ಚತಕ್ಕ ವಿಷಯ. ಗಂಭೀರವಾಗಿ ಪರಿಗಣಿಸತಕ್ಕ ಸಂಗತಿ. ಅದೇ ರೀತಿಯಲ್ಲಿಯೇ ಸ್ವಾತಂತ್ರ್ಯ ನಂತರ ಯಾವುದೇ ಬಂದ್ ಕಾರ್ಯಕ್ರಮಗಳಿಗೆ ಸ್ಪಂದಿಸದ ಮಲೆನಾಡು ಜಿಲ್ಲೆಗಳಾದ ಹಾಸನ, ಚಿಕ್ಕಮಗಳೂರು, ಶಿವಮೊಗ್ಗಗಳು ಈ ಸಲದ ಭಾರತ ಬಂದ್‌ನ್ನು ಯಶಸ್ವಿಗೊಳಿಸಿರುವುದು ರಾಜ್ಯದಲ್ಲಿ ಕೇಂದ್ರ ಸರ್ಕಾರದ ಜನ ವಿರೋಧಿ ಧೋರಣೆಗಳ ವಿರುದ್ಧ ಹೋರಾಡಲು ಕರ್ನಾಟಕದ ಬಹುಸಂಖ್ಯಾತ ಜನತೆ ಮುಂದಾಗಿದ್ದಾರೆಂಬುದನ್ನು ಇದು ತೋರಿಸಿಕೊಡುತ್ತದೆಂದರೆ ತಪ್ಪಾಗಲಾರದು.

ಬೆಂಗಳೂರಿನಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರೂ, ಅಧಿಕಾರಿಗಳೂ ಮುಷ್ಕರ ಹೂಡಿದ್ದಾರೆ. ಇತರ ಕೈಗಾರಿಕೆಗಳೆಲ್ಲ ಬಂದಾಗಿದ್ದವು. ಕೆ.ಎಸ್.ಆರ್.ಟಿ.ಸಿ., ಬಿಟಿಎಸ್. ಆಟೋಗಳೆಲ್ಲಾ ಬೀದಿಗಿಳಿಯಲಿಲ್ಲ. ಆಂಧ್ರ, ಕೇರಳ, ತಮಿಳುನಾಡು ಮೊದಲಾದ ರಾಜ್ಯಗಳ ಅಂತರರಾಜ್ಯ ಬಸ್‌ಗಳು ತಾವು ನಿಂತ ಸ್ಥಳಗಳಿಂದ ಚಲಿಸಲಿಲ್ಲವೆಂಬುದು ಗಮನಾರ್ಹ.

ಬೆಂಗಳೂರು ನಗರದಲ್ಲಿ ಈ ಸಲ ಅತ್ಯಂತ ಪ್ರಭಾವಶಾಲೀ ರೀತಿಯಲ್ಲಿ ಸಾರ್ವತ್ರಿಕ ಕ್ಷೇತ್ರದ ಕೈಗಾರಿಕೆಗಳು, ಯಶವಂತಪುರ, ಕೆ.ಆರ್.ಪುರ ಮೊದಲಾದ ಕಾರ್ಮಿಕ ಕೇಂದ್ರಗಳು ಸ್ಪಂದಿಸಿವೆ. ಬಿ.ಟಿ.ಎಸ್., ಕೆ.ಎಸ್.ಆರ್.ಟಿ.ಸಿ. ನೌಕರರು ಕೂಡ ಬೆಂಬಲ ನೀಡಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ಬಲದಂಡೆ ಕಾಲುವೆಗಾಗಿ ನಡೆದ ಐಕ್ಯ ಚಳುವಳಿ ಆ ಪ್ರದೇಶದ ತಾಲೂಕುಗಳಲ್ಲಿ ಹಾಗೂ ಗ್ರಾಮಗಳಲ್ಲಿ ಬಂದ್ ನಡೆಸಲು ಸಹಾಯವಾಗಿರುವುದನ್ನು ಗಮನಿಸಬೇಕು. ಹಾಗೆಯೇ ಆ ಜಿಲ್ಲೆಯ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾರ್ಥಿ ಯುವಜನತೆಯ ಸಂಘಟನೆಗಳು ಬೆಳೆದು ಬಂದಿರುವುದರಿಂದ ಬಂದ್ ಯಶಸ್ವಿಗೊಳಿಸಲು ಸಾಧ್ಯವಾಗಿದೆ.

ಈ ಸಲ ಸಿಪಿಐ(ಎಂ) ಮಾತ್ರವಲ್ಲ ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಎಸ್. ಎಫ್.ಐ. ಡಿ.ವೈ.ಎಫ್.ಐಗಳು ಬಂದ್ ಕಾರ್ಯಕ್ರಮದ ಯಶಸ್ವಿಗಾಗಿ ದುಡಿದಿವೆ. ಇದರ ಜೊತೆಯಲ್ಲಿ ಹೆಚ್ಚಿನ ಕಡೆಗಳಲ್ಲಿ ಸಿಪಿಐ, ಎ.ಐ.ಟಿ.ಯು.ಸಿ., ಎ.ಐ.ಎಸ್.ಎಫ್.ಗಳೂ, ಕೆಲವು ಜಿಲ್ಲೆಗಳಲ್ಲಿ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿಗಳು ಹೆಚ್ಚಿನ ಉತ್ಸಾಹದಿಂದ ಬಂದ್ ಯಶಸ್ವಿಗಾಗಿ ದುಡಿದಿದ್ದಾರೆ. ಜನತಾದಳ ಸಮಾಜವಾದಿ ಜನತಾದಳಗಳು ವಿಲೀನಗೊಳ್ಳುವ ಕಾರ್ಯಕ್ರಮದಲ್ಲಿ ತೊಡಗಿರುವುದರಿಂದ ಪ್ರಾರಂಭದಿಂದಲೇ ಬಂದ್‌ಗಾಗಿ ಕೆಲಸ ಮಾಡಲು ಸಾಧ್ಯವಾಗಿಲ್ಲ. ಸೆಪ್ಟೆಂಬರ್ ಮೊದಲನೇವಾರದಲ್ಲಿ ದೇವೆಗೌಡರು ಎಲ್ಲಾ ಜಿಲ್ಲೆಗಳಿಗೆ ಪತ್ರ ಮತ್ತು ಟೆಲಿಗ್ರಾಂ ಕಳುಹಿಸಿ ಬಂದ್ ಯಶಸ್ವಿಗೊಳಿಸಬೇಕೆಂದು ತಿಳಿಸಿದ್ದರಿಂದ ಜನತಾದಳದವರು ಹೆಚ್ಚಿನ ರೀತಿಯಲ್ಲಿ ಬಂದ್ ಯಶಸ್ವಿಗೆ ಪ್ರಯತ್ನ ಮಾಡಿದ್ದಾರೆ. ಪ್ರಾರಂಭದಿಂದಲೇ ಜನತಾದಳದವರು ಭಾಗವಹಿಸಿದ್ದರೆ ಬಂದ್ ಇನ್ನೂ ಹೆಚ್ಚು ಪರಿಣಾಮಕಾರಿಯಾಗಬಹುದಿತ್ತೇನೋ.

ಬಂಡವಾಳಶಾಹಿ ಪತ್ರಿಕೆಗಳೂ, ಟಿ.ವಿ., ರೇಡಿಯೋಗಳೆಲ್ಲಾ ಬಂದ್ ಯಶಸ್ವಿಯಾಗಿಲ್ಲ ಎಂದು ಸಾಕಷ್ಟು ಪ್ರಚಾರ ಮಾಡಿವೆ. ಆದರೆ ವಾಸ್ತವ ಪರಿಸ್ಥಿತಿ ತದ್ವಿರುದ್ಧವಾಗಿದೆ. ಈ ಮುಂಚೆ ಎಷ್ಟೋ ಸಲ ಬಂದ್ ನಡೆದಿವೆ. ಆದರೆ ಈ ಸಲದ ಭಾರತ್ ಬಂದ್ ಹೆಚ್ಚಿನ ವೈಶಿಷ್ಟ್ಯತೆಗಳನ್ನು ಹೊಂದಿದೆ. ಸಾರ್ವಜನಿಕ ಕ್ಷೇತ್ರದ ಅಧಿಕಾರಿಗಳ ಕಾರ್ಮಿಕರ ಪಾಲ್ಗೊಳ್ಳುವಿಕೆ, ಕೈಗಾರಿಕಾ ಕೇಂದ್ರಗಳ ಮುಚ್ಚುವಿಕೆ, ಕೆ.ಎಸ್.ಆರ್.ಟಿ.ಸಿ., ಬಿಟಿಎಸ್. ಆಟೋಗಳ ಓಡಾಟದಲ್ಲಿ ಸ್ಥಗಿತತೆ, ಅಂತರಾಜ್ಯ ಬಸ್ಸುಗಳು ಓಡದಿರುವುದು ಗ್ರಾಮಾಂತರ ಪ್ರದೇಶದ ಹೆಚ್ಚಿನ ತಾಲೂಕ ಕೇಂದ್ರಗಳಲ್ಲಿ ಬಂದ್ ಯಶಸ್ವಿಯಾಗಿರುವುದು ಈ ಸಲದ ಭಾರತ ಬಂದ್‌ನ ವಿಶೇಷ. ನರಸಿಂಹರಾವ್ ಸರಕಾರದ ಆರ್ಥಿಕ ನೀತಿ ಹಾಗೂ ಕೋಮುವಾದದದೊಂದಿಗೆ ರಾಜಿ ಮಾಡಿಕೊಂಡಿರುವುದು ಜನಸಾಮಾನ್ಯರ ಮೇಲೆ ಎಷ್ಟು ಪರಿಣಾಮ ಬೀರಿದೆ ಎಂಬ ಅಂಶ ಈ ಬಂದ್‌ನಿಂದ ಕಂಡುಬರುತ್ತದೆ.

ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿಯವರು ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಮಸೂದೆಯ ವಿರುದ್ಧ ಜನಾಭಿಪ್ರಾಯ ಮೂಡಿಸಲು "ಜನಾದೇಶ" ಯಾತ್ರೆಯ ಮೂಲಕ ಪ್ರಚಾರ ನಡೆಸುತ್ತಿರುವಾಗ ಸಿಪಿಐ(ಎಂ), ಸಿಪಿಐ, ಜನತಾದಳಗಳು ಭಾರತ್ ಬಂದ್ ಸಮಯದಲ್ಲಿ ನರಸಿಂಹರಾವ್ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ, ಮತೀಯವಾದದ ವಿರುದ್ಧ ಮೂಡಿಬಂದ ಜನಾಭಿಪ್ರಾಯವನ್ನು ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಕೇಂದ್ರ-ರಾಜ್ಯ ಜನವಿರೋಧಿ ನೀತಿಗಳ ವಿರುದ್ಧ ಚಳುವಳಿಗೆ ಉಪಯೋಗಿಸುವ ಕಾರ್ಯಕ್ರಮ ರೂಪಿಸಿಕೊಳ್ಳುವುದು ಅತ್ಯಗತ್ಯ. ಕರ್ನಾಟಕದಲ್ಲಿ ಭಾರತ್ ಬಂದ್ ಪುರೋಗಾಮಿ ಶಕ್ತಿಗಳಿಗೆ, ಎಡ ಪಕ್ಷಗಳಿಗೆ, ಜನತಾದಳಕ್ಕೆ ಒಳ್ಳೆ ಅವಕಾಶ ಕಲ್ಪಿಸಿದೆ. ಮುಂಬರುವ ಜಿಲ್ಲಾ ಪಂಚಾಯ್ತಿ, ಮಂಡಲ ಪಂಚಾಯತಿ ಚುನಾವಣೆಗಳಲ್ಲಿ ಭಾರತ ಬಂದ್‌ನಲ್ಲಿ ಜನಸಾಮಾನ್ಯರ ಭಾಗವಹಿಸುವಿಕೆಯ ಕ್ರೋಢೀಕರಿಸಲು ಎಡ ಪಕ್ಷಗಳೂ, ಜನತಾದಳವೂ ಮುಂದಾಗಲಿ. ಕಾಂಗ್ರೆ ಮತ್ತು ಬಿಜೆಪಿಯನ್ನು ಸೋಲಿಸಲು ಅದು ಸಹಾಯವಾಗಲಿ.

ಭಾರತ್ ಬಂದ್- ರಾಜ್ಯದ ವಿವಿಧೆಡೆಗಳಲ್ಲಿ ಯಶಸ್ವಿ

ನರಸಿಂಹರಾವ್ ಸರಕಾರದ ಆರ್ಥಿಕ ನೀತಿ ಹಾಗೂ ಕೋಮುವಾದವನ್ನು ಎದುರಿಸಲು ದೇಶದ 54 ಸಾಮೂಹಿಕ ಸಂಘಟನೆಗಳು ಕರೆ ಕೊಟ್ಟಿದ್ದ ಸೆಪ್ಟೆಂಬರ್ 9 , 1993 ರ ಭಾರತ್ ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಅನೇಕ ಕಡೆ ಸ್ವಯಂ ಸ್ಫೂರ್ತಿಯಿಂದ ಜನರು ಈ ಬಂದ್ ಕರೆಗೆ ಓಗೊಟ್ಟು ಯಶಸ್ವಿ ಮಾಡಿದ್ದಾರೆ. ಹಿಂದಿನ ಅನೇಕ ಬಂದ್‌ಗಳಿಗಿಂತ ಈ ಬಂದ್ ಸಂಪೂರ್ಣ ಭಿನ್ನವಾಗಿದ್ದುದು ಅನೇಕರ ಗಮನಕ್ಕೆ ಬಂದಿದೆ. ಅನೇಕ ದಿನಪತ್ರಿಕೆಗಳು ಕಂಡಂತೆ ಜನರ ಅತೃಪ್ತಿಯಾಗಿ ಈ ಬಂದ್ ಮಾರ್ಪಟದ್ದುದು ಒಂದು ವಿಶೇಷ. ಆ ದೃಷ್ಟಿಯನ್ನು ಕೇಂದ್ರ ಸರಕಾರ ತಳ್ಳಿ ಹಾಕುವಂತಹದ್ದಲ್ಲ ಎನ್ನುವುದು ಕೆಲವು ದಿನಪತ್ರಿಕೆಗಳ ಸಂಪಾದಕೀಯಗಳು ಹೇಳಿವೆ. ಕೋಮುವಾದಿಗಳ ಹೆಚ್ಚುತ್ತಿರುವ ಪ್ರಚಾರ, ಬೆಳವಣಿಗೆ ಕಡೆಗಣಿಸಿ ಈ ಬಂದ್ ಯಶಸ್ವಿಯಾಗಿದೆ. ನಮಗೆ ತಲುಪಿರುವ ವರದಿಗಳಲ್ಲಿ ರಾಜ್ಯದೆಲ್ಲೆಡೆ ಈ ಬಂದ್ ಅತ್ಯಂತ ಯಶಸ್ವಿಯಾಗಿದೆ. ನರಸಿಂಹರಾವ್ ಸರಕಾರದ ನಿಷ್ಕ್ರಿಯತೆಯನ್ನು, ಹೊಸ ಆರ್ಥಿಕ ಧೋರಣೆಯಿಂದ ನಮಗೇನೂ ಲಾಭವಾಗದು ಎಂದು ಜನತೆ ತೋರಿಸಿಕೊಟ್ಟಿದ್ದಾರೆ.

ನಮಗೆ ತಲುಪಿರುವ ಕೆಲವು ವರದಿಗಳು ಇಲ್ಲಿವೆ.

ಮೈಸೂರು : ಹೊಸ ಆರ್ಥಿಕ ನೀತಿ ಮತ್ತು ಕೋಮುವಾದದ ವಿರುದ್ಧ ಮೈಸೂರು ನಗರದಲ್ಲಿ ಬಂದ್ ಯಶಸ್ವಿಯಾಗಿತ್ತು. ಸಿಪಿಐ ಮತ್ತು ಸಿಪಿಐ(ಎಂ) ಕಾರ್ಯಕರ್ತರು ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಜನ ವಿರೋಧಿ ನೀತಿಗಳ ಬಗ್ಗೆ ಆಗಸ್ಟ್ ತಿಂಗಳ ಪ್ರಾರಂಭದಿಂದಲೂ ಪ್ರಚಾರದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಜೈಲ್ ಭರೋ ಮತ್ತು ಭಾರತ್ ಬಂದ್‌ಗಳನ್ನು ಯಶಸ್ಸುಗೊಳಿಸುವ ಉದ್ದೇಶದಿಂದ ಮೈಸೂರು ಜಿಲ್ಲಾ ಸಿಐಟಿಯು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಮೈಸೂರು ನಗರದ ಬಹುತೇಕ ಜನನಿಬಿಡ ಕೇಂದ್ರಗಳಲ್ಲಿ 15 ದಿನಗಳ ಕಾಲ 25 ಬೀದಿ ಬದಿ ಸಭೆಗಳನ್ನು ನಡೆಸಲಾಗಿತ್ತು.

ಎಲ್ಲ ಪಕ್ಷಗಳವರೂ ಒಂದಾಗಿ ಸಿನಿಮಾ, ಹೋಟೆಲ್, ವಾಣಿಜ್ಯ ಸಾರಿಗೆ ಸಂಪರ್ಕ ಇತ್ಯಾದಿ ಸಂಘ ಸಂಸ್ಥೆಗಳ ಮುಖಂಡರನ್ನು ಸಂಪರ್ಕಿಸಿ ಅವರ ಸಹಕಾರವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. (ಬಿಜೆಪಿ. ಕಾಂಗ್ರೆ ಹೊರತುಪಡಿಸಿ)

ಅಂದು ಟೌನ್ ಹಾಲ್‌ನಿಂದ ಬಂ[illegible] ಬೃಹತ್ ಮೆರವಣಿಗೆಯನ್ನು ತೆಗೆಯಲು ಪ್ರಯತ್ನಿಸಿ ಪೋಲೀಸರಿಗೆ ದಾರಿ ತಪ್ಪಿಸಿ ಕೃಷ್ಣರಾಜ ವೃತ್ತದಲ್ಲಿ ಕಾರ್ಯಕರ್ತರು ಸೇರಿ ರಸ್ತೆ ತಡೆಯನ್ನು ನಡೆಸಿದಾಗ ಪೋಲೀಸರು ನೂರಾರು ಜನರನ್ನು ಬಂಧಿಸಿ ಸಂಜೆವೇಳೆಗೆ ಬಂಧಿತರ ಮೇಲೆ ಕಟ್ಟಳೆಗಳನ್ನು ಹಾಕಿ ನ್ಯಾಯಾಲಯದಲ್ಲಿ ಸೂಕ್ತ ಜಾಮೀನಿನ ಮೇಲೆ ಬಂಧಿತರು ಬಿಡುಗಡೆಯಾದರು.

ಮೈಸೂರು ನಗರದಲ್ಲೇ ಅಲ್ಲದೆ ವಿವಿಧ ತಾಲ್ಲೂಕು ಕೇಂದ್ರಗಳಲ್ಲೂ ಬಂದ್ ಯಶಸ್ವಿಯಾಗಿದೆ. ಚಾಮರಾಜನಗರ, ಹುಣಸೂರು, ನಂಜನಗೂಡು, ಹೆಗ್ಗಡದೇವನ ಕೋಟೆ, ಪಿರಿಯಾ ಪಟ್ಟಣ ಮತ್ತು ಕೆ.ಆರ್. ನಗರಗಳಲ್ಲೂ ಸಿಪಿಐ(ಎಂ) ಜನತಾದಳ, ಪ್ರಾಂತ ರೈತ ಸಂಘ, ಎಸ್.ಎಫ್.ಐ. ಕಾರ್ಯಕರ್ತರು ಈ ಸ್ಥಳಗಳಲ್ಲಿ ಬಂದ್ ಅನ್ನು ಯಶಸ್ವಿಗೊಳಿಸುವಲ್ಲಿ ಕೆಲಸ ಮಾಡಿದ್ದಾರೆ.

ಬಂದ್ ಅನ್ನು ಯಶಸ್ವಿಗೊಳಿಸಿ ಪಕ್ಷದ ಕಾರ್ಯಕರ್ತರಿಗೆ ಹಾಗೂ ಹಿತೈಷಿಗಳಿಗೆ ಮೈಸೂರು ಪ್ರದೇಶ ಸಮಿತಿಯು ಅಭಾರಿಯಾಗಿದೆ.

ದಾಂಡೇಲಿ: ಸೆಪ್ಟೆಂಬರ್ 9, 1993 ರಂದು 'ದಾಂಡೇಲಿ ಸಂಪೂರ್ಣ ಸ್ತಬ್ಧವಾಗಿತ್ತು. ಅನೇಕ ಕಾರ್ಮಿಕ ಮುಖಂಡರನ್ನು ಬಂಧಿಸಿದರೂ ಕೂಡಾ, ಪೇಪರ್ ಮಿಲ್, ಪ್ಲಾಯ್ ವುಡ್ ಹಾಗೂ ಡಿ.ಎಫ್.ಐ. ಕಾರ್ಖಾನೆಗಳು ಬಂದ್ ಆಯಿತು. 9 ರಂದು ಬೆಳಿಗ್ಗೆ 6 ಗಂಟೆಗೆ ಪೇಪರ್ ಮಿಲ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಕಾರ್ಯಕರ್ತರು ಪೇಪರ್ ಮಿಲ್ ಗೇಟಿಗೆ ಹೋಗಲೆತ್ನಿಸಿದಾಗ ಪೋಲೀಸರು ಬಹು ಪ್ರಯಾಸದಿದ ಕಾರ್ಮಿಕರನ್ನು ಬಂಧಿಸಿದರು. ಅಂದು ಅಂಗಡಿ ಮುಂಗಟ್ಟುಗಳು ಬಂದ್ ಆಗಿ ಭಾರತ್ ಬಂದನ್ನು ಬೆಂಬಲಿಸಿದ್ದರು.

ತೀರ್ಥಹಳ್ಳಿ : ಭಾರತ್ ಬಂದ್ ಇಲ್ಲಿ ಸಂಪೂರ್ಣ ಯಶಸ್ವಿಯಾಯಿತು. ಎಲ್ಲಾ ವಾಣಿಜ್ಯ ಸಂಸ್ಥೆಗಳು, ಸಿನಿಮಾ, ಶಿಕ್ಷಣ ಸಂಸ್ಥೆಗಳು, ಬ್ಯಾಂಕ್, ಜೀವವಿಮಾನಿಗಮ ಅಂದು ಮುಚ್ಚಿದ್ದವು. ಈ ಬಂದ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಜನರನ್ನು ಹಾಗೂ ಬಂದ್ ಸಮಯದಲ್ಲಿ ಸಹಕರಿಸಿದ ರಕ್ಷಣಾ ಇಲಾಖೆಯವರಿಗೂ ಸಾಮೂಹಿಕ ಸಂಘಟನೆಗಳ ವೇದಿಕೆ ಅಭಿನಂದನೆ ಸಲ್ಲಿಸಿದೆ.

ಹೊಸ ಪೇಟೆ: ಭಾರತ್ ಬಂದ್‌ನ ಕರೆಗೆ ಅಭೂತಪೂರ್ವ ಬೆಂಬಲ ದೊರೆತಿದೆ. ನಗರದ ಎಲ್ಲಾ ಸರ್ಕಾರಿ ಕಛೇರಿಗಳು, ಹಣಕಾಸು ಸಂಸ್ಥೆಗಳು, ಶಾಲ-ಕಾಲೇಜು, ಸಾರಿಗೆ ಸಂಪೂರ್ಣವಾಗಿ ನಿಂತಿದ್ದವು. ಬೆಳಿಗ್ಗೆಯಿಂದಲೇ ಬೀದಿಗಿಳಿದ ಕಾರ್ಯಕರ್ತರ ತಂಡಗಳು ಜನರ ಮನ ಒಲಿಸಿದವು. ಬಳಿಕ ಸುಮಾರು 800 ಕ್ಕೂ ಅಧಿಕ ಜನರ ಭಾರೀ ಮೆರವಣಿಗೆ ನಡೆದು ಸಭೆ ಜರುಗಿತು. ಡಿ.ವೈ.ಎಫ್.ಐ., ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್, ಎಂ. ಜಂಬಯ್ಯ ನಾಯಕ್, ಚಂದ್ರಲಾಲ್, ಕೌಶಿಂ ಆಲಿ, ಭರ್ಮಪ್ಪ ಮುಂತಾದವರು ಮಾತನಾಡಿದರು.

ಕುರುಗೋಡು : ಅಂದು ಕುರುಗೋಡು ಸಂಪೂರ್ಣವಾಗಿ ಸ್ತಬ್ಧವಾಗಿ ಭಾರತ್ ಬಂದ್‌ನ್ನು ಆಚರಿಸಿದರು. ಅಂದು ಏರ್ಪಡಿಸಿದ್ದ ಸಭೆಯಲ್ಲಿ ಸಿಪಿಐ(ಎಂ) ಮುಖಂಡ ವಿ. ಎಸ್. ಶಿವಶಂಕರ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ಕೆ. ಗಾದಿ ಲಿಂಗಪ್ಪ, ಎಸ್. ದಿವಾಕರಪ್ಪ, ಡಿ.ಎಸ್.ಎಸ್.ನ ಲಕ್ಷ್ಮಣ, ಅಂಬೇಡ್ಕರ್ ಸಂಘದ ಮುಖಂಡ ಟಿ. ಸಿದ್ದಪ್ಪ ಮುಂತಾದವರು ಮಾತನಾಡಿದರು. ಆನಂತರ ನಡೆದ ಮೆರವಣಿಗೆಯ ನೇತೃತ್ವವನ್ನು ಹಮಾಲಿ ಸಂಘದ ಅಧ್ಯಕ್ಷರಾದ ಎಂ. ಆರ್. ತಿಮ್ಮಪ್ಪ, ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಕೆ. ರಾಮಣ್ಣ, ಡಿ.ವೈ.ಎಫ್.ಐ ಮುಖಂಡರಾದ ಟಿ. ರಾಮಣ್ಣ, ಕಾರ್ಯದರ್ಶಿ ಇಮಾಂ ಸಾಬ್ ವಹಿಸಿದ್ದರು.

ಹರಿಹರ : ಭಾರತ್ ಬಂದ್ ಯಶಸ್ವಿಯಾಗಿ ನಡೆಯಿತು. ಅಂದು ಅಂಗಡಿ ಮುಂಗಟ್ಟುಗಳು, ರಸ್ತೆ ಸಂಚಾರ, ಬ್ಯಾಂಕ್, ಎಲ್.ಐ.ಸಿ. ಎಲ್ಲಾ ಮುಚ್ಚಿ ಬಂದ್ ಯಶಸ್ವಿಗೆ ಸಹಕಾರ ನೀಡಿದವು.

ಇಲ್ಲಿನ ಕಿರ್ಲೋಸ್ಕರ್ ಎಂಪ್ಲಾಯಿಸ್ ಅಸೋಸಿಯೇಶನ್ ಅಂದು ಬೆಳಿಗ್ಗೆ ಕಾರ್ಖಾನೆಗೆ ಹೋಗಲು ತಯಾರಿ ನಡೆಸುತ್ತಿದ್ದ ಬಿ.ಎಂ.ಎಸ್.ನ ಕೆಲವೇ ಕೆಲವು ಜನರನ್ನು ತಡೆದು ಕಾರ್ಖಾನೆಯನ್ನು ಸಂಪೂರ್ಣ ಬಂದ್ ಮಾಡಿದರು. ಬಿ.ಎಂ.ಎಸ್. ನವರು ಈ ಬಂದ್ ಆಚರಿಸಬಾರದೆಂದು ಕರಪತ್ರದ ಮೂಲಕ ಮನವಿ ಮಾಡಿದ್ದರೂ ಜನರು ಅವರ ಮನವಿಯನ್ನು ತಿರಸ್ಕರಿಸಿದರು. ನಂತರ ನಡೆದ ಮೆರವಣಿಗೆಯ ನೇತೃತ್ವವನ್ನು ಸಿಐಟಿಯುವಿನ ರಾಜ್ಯ ಮಂಡಳಿ ಸದಸ್ಯರಾದ ಬಿ.ಎಸ್. ಪ್ರಕಾಶ್, ಅಮಿನಾಬಿ ಮತ್ತು ಡಿ.ಬಿ. ಜೋಷಿ, ಆರ್.ಬಿ. ಅಂಗಡಿ, ಸಿ.ಎಂ. ಜಯಾನಂದ, ಜಕಣಾಚಾರಿ, ಪಿ.ಜಿ. ಗೌಡರ್, ಜಿ. ಪರಮೇಶ್ವರಪ್ಪ, ಚೌಡಪ್ಪ, ಕರಿಲಿಂಗಪ್ಪ, ಹೆಚ್.ಎಂ.ಮುರಳಿ ಸಿದ್ದಯ್ಯ, ಪಿ.ವೈ. ಪಾಟೀಲ್ ಮುಂತಾದವರು ಹಾಗೂ ಎ.ಐ.ಟಿ.ಯು. ಸಿ.ನಾಯಕರಾದ ಜಿ.ಎಂ. ಹನುಮಂತಪ್ಪ, ಜಬ್ಬಾರ್ ಮುಂತಾದವರು ಹಾಗೂ ಜನತಾದಳ ಅಧ್ಯಕ್ಷ ಬಸವನ ಗೌಡ, ಸುರೇಶ್ ಗೌಡ ಮುಂತಾದವರು ವಹಿಸಿದ್ದರು.

ಇಲ್ಲಿನ ಹೆಚ್.ಪಿ. ಎಫ್. ಮತ್ತು ಗ್ರಾಸಲೀನ್ ಕಾರ್ಖಾನೆಯವರು ಬಂದ್‌ಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಇಲ್ಲಿನ ಕಾರ್ಮಿಕರ ಸಂಘದಲ್ಲಿ ಎ.ಐ.ಟಿ.ಯು.ಸಿ. ನಾಯಕರಾದ ಪಂಪಾವತಿಯವರು ಅಧ್ಯಕ್ಷರಾಗಿದ್ದರೂ ಕೂಡ.

ಮುಂಡಗೋಡ : ಸೆಪ್ಟೆಂಬರ್ 9 ರಂದು ಎಲ್ಲಾ ಶಾಲಾ ಕಾಲೇಜುಗಳು ವ್ಯಾಪಾರ ಮಳಿಗೆಗಳು, ಕೈಗಾರಿಕಾ ಕೇಂದ್ರಗಳು ಸಂಪೂರ್ಣ ಬಂದ್ ಆಚರಿಸಿ ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದವನ್ನು ವಿರೋಧಿಸಲು ನಡೆಯುವ ಎಲ್ಲಾ ಹೋರಾಟಗಳನ್ನು ಬೆಂಬಲಿಸುವುದಾಗಿ ಸಾರಿದರು.

ಈ ಬಂದ್‌ಗೆ. ತಯಾರಿಯಾಗಿ ವಿದ್ಯಾರ್ಥಿ ಯುವಜನ ನಾಯಕರು, ಕಾರ್ಯಕರ್ತರು, ಸಾರ್ವಜನಿಕರಲ್ಲಿ ಸಹಾಯ ಸಹಕಾರ ಕೋರಿ ಬಂದ್ ವಿಷಯದ ಬಗ್ಗೆ ಸ್ಫೂರ್ತಿ ತುಂಬಿ ಬಂದ್‌ನ್ನು ಯಶಸ್ವಿಗೊಳಿಸಲು ಸಂಪೂರ್ಣ ಸಫಲರಾದರು.

ಪುಟ 6 ನೋಡಿ

ಮಾರ್ಕ್ಸ್‌ವಾದಕ್ಕೆ ಭವಿಷ್ಯವಿಲ್ಲ, ಕಮ್ಯುನಿಸಂ ಸತ್ತಿದೆ ಎಂದು ಗೊಂದಲ ಹುಟ್ಟಿಸುವ ಸಾಮ್ರಾಜ್ಯಶಾಹಿಗಳ ಪ್ರಯತ್ನಕ್ಕೆ ಕಲ್ಕತ್ತೆಯಲ್ಲಿ ಇದೇ ವರ್ಷ ಮೇ 5-7 ರಂದು ಸಿಪಿಐ(ಎಂ) ಏರ್ಪಡಿಸಿದ್ದ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣ ಒಂದು ದೊಡ್ಡ ಸವಾಲು ಹಾಕಿತು. ಈ ಪ್ರಕ್ರಿಯೆ ವಿಶ್ವದ ಹಲವೆಡೆ ಮುಂದುವರೆದಿದೆ. ಕಮ್ಯುನಿಸ್ಟ್ ಆಂದೋಲನದ ಮುನ್ನಡೆ ಮತ್ತೆ ಆರಂಭವಾಗಿದೆ ಎಂದಿದ್ದಾರೆ ಇತ್ತೀಚೆಗೆ ಜುಲೈ 21-24 ರವರೆಗೆ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ನಡೆದ 'ಸುವೋ ಪೋಲೋ ವೇದಿಕೆಯ ನಾಲ್ಕನೇ ಅಧಿವೇಶನದಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಹಲವು ದೇಶಗಳಿಗೆ ಭೇಟಿ ನೀಡಿ ಬಂದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್.

ಸುವೋ ಪಾಲೋ ಬ್ರೆಝಿಲ್ ದೇಶದ ರಾಜಧಾನಿ. ಮೂರು ವರ್ಷಗಳ ಹಿಂದೆ 1990 ರಲ್ಲಿ ಇಲ್ಲಿ ಲ್ಯಾಟಿನ ಅಮೇರಿಕಾ ದೇಶಗಳ ಪ್ರತಿನಿಧಿಗಳು ಸೇರಿ ತಮ್ಮ ಪ್ರದೇಶದ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಆದ್ದರಿಂದ ಇದಕ್ಕೆ 'ಸುವೋ ಪಾಲೋ ವೇದಿಕೆ' ಎಂಬ ಹೆಸರು ಬಂತು. ನಂತರ ಪ್ರತೀವರ್ಷ ಲ್ಯಾಟಿನ್ ಅಮೇರಿಕಾದ ಬೇರೆ ಬೇರೆ ನಗರಗಳಲ್ಲಿ ಈ ವೇದಿಕೆಯ ಅಧಿವೇಶನಗಳು ನಡೆದಿವೆ. ಎರಡನೇ ಅಧಿವೇಶನ ಮೆಕ್ಸಿಕೋದಲ್ಲಿ ಮೂರನೇ ಅಧಿವೇಶನ ನಿಕಾರಗುವಾದ ಮನಾಗುವಾದಲ್ಲಿ ನಡೆಯಿತು. ಈ ನಾಲ್ಕನೇ ಅಧಿವೇಶನದಲ್ಲಿ 112 ಕಮ್ಯುನಿಸ್ಟ್, ಸೋಶಲಿಸ್ಟ್, ಎಡಪಂಥೀಯ ಪಕ್ಷಗಳು ಭಾಗವಹಿಸಿದ್ದವು. ಈ ಅಧಿವೇಶನದ ಬಗ್ಗೆ ಹಾಗೂ ಮಾರ್ಗದಲ್ಲಿ ತಾನು ಇತರ ದೇಶಗಳ ಕಮ್ಯುನಿಸ್ಟ್ ಮುಖಂಡರೊಡನೆ ನಡೆಸಿದ ಮಾತುಕತೆಗಳ ಬಗ್ಗೆ ಕಾಂ ಸುರ್ಜಿತ್ ಇಲ್ಲಿ ಬರೆದಿದ್ದಾರೆ.

ಮತ್ತೆ ಮುನ್ನಡೆಯಲು ಸಜ್ಜಾಗುತ್ತಿರುವ ಕಮ್ಯುನಿಸ್ಟ್ ಆಂದೋಲನ

-- ಕಾಂ. ಸುರ್ಜಿತ್

ಮಾನವ ವಿಕಾಸದಲ್ಲಿ ಬಂಡವಾಳಶಾಹಿ ಬಹುಶಃ ಕೊನೆಯ ಹಂತ ಎಂದು ನಂಬಿಸುವ ಬಂಡವಾಳಶಾಹಿ ವಕ್ತಾರರ ಪ್ರಯತ್ನಗಳಿಗೆ ಬಂಡವಾಳಶಾಹೀ ದೇಶಗಳಲ್ಲಿ ಕಳೆದ ಹಲವು ವರ್ಷಗಳಲ್ಲಿ ನಿರಂತರವಾಗಿ ನಡೆದಿರುವ ಆರ್ಥಿಕ ಹಿಂಜರಿತ ದೊಡ್ಡ ಏಟು ಹಾಕಿದೆ. ಬಂಡವಾಳಶಾಹಿ ಶಾಶ್ವತವಲ್ಲ ಎಂಬ ಭಾವನೆ ಹರಡುತ್ತಿದೆ. ಕಮ್ಯುನಿಸ್ಟ್ ಆಂದೋಲನಕ್ಕಾದ ತೀವ್ರ ಸೋಲಿನ ಹಿನ್ನೆಲೆಯಲ್ಲಿ ಉತ್ಸಾಹ ಕಳಕೊಂಡು ನಿಷ್ಕ್ರಿಯರಾದವರು ಈಗ ಮತ್ತೆ ತಮ್ಮ ಚಟುವಟಿಕೆಗಳನ್ನು ಆರಂಭಿಸಿದ್ದಾರೆ. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ತ್ಯಜಿಸಿ ತಂತಮ್ಮ ಪಕ್ಷಗಳನ್ನು ವಿಸರ್ಜಿಸಬೇಕೆಂದವರು ಕೂಡಾ ಈಗ ತಮ್ಮ ತಮ್ಮ ಪಕ್ಷಗಳನ್ನು ಅಣಿನೆರೆಸಲಾರಂಭಿಸಿದ್ದಾರೆ. ಏಕೆಂದರೆ ಹಲವು ದೇಶಗಳಲ್ಲಿ ಕಾರ್ಮಿಕ ವರ್ಗ ಮತ್ತು ಬಂಡವಾಳಶಾಹಿಗಳ ನಡುವೆ ಸಂಘರ್ಷ ಹೆಚ್ಚುತ್ತಿದೆ. ಕಮ್ಯುನಿಸ್ಟ್ ಪಕ್ಷಗಳು ಮತ್ತೆ ಆತ್ಮವಿಶ್ವಾಸದಿಂದ ತಮ್ಮ ಚಟುವಟಿಕೆಗಳನ್ನು ಆರಂಭಿಸಿ ಮುನ್ನಡೆ ಆರಂಭಿಸಿವೆ.

ಜೂನ್-ಜುಲೈ ತಿಂಗಳಲ್ಲಿ ತನ್ನ ವಿದೇಶಿ ಪ್ರವಾಸದ ವೇಳೆಯಲ್ಲಿ ನನಗೆ ವಿವಿಧ ಕಮ್ಯುನಿಸ್ಟ್ ಪಕ್ಷಗಳ ಮುಖಂಡರನ್ನೂ ಭೇಟಿಯಾಗುವ ಅವಕಾಶ ದೊರೆಯಿತು. ಆಗ ನಾನು ಇದನ್ನು ಗಮನಿಸಿದೆ.

ಬ್ರಿಟನ್ನಿನಲ್ಲಿ ಜೂನ್ ತಿಂಗಳಲ್ಲಿ ಭಾರತೀಯ ಕಾರ್ಮಿಕ ಸಂಘ (ಗ್ರೇಟ್ ಬ್ರಿಟನ್) ದ ಯಶಸ್ವೀ ಸಮ್ಮೇಳನ ನಡೆಯಿತು. ಅದರ ನಂತರ ನಾನು ಬ್ರಿಟನ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳನ್ನು ಭೇಟಿಯಾಗಿ ಚರ್ಚಿಸುವ ಅವಕಾಶ ಸಿಕ್ಕಿತು. ಅವರು ಸಿಪಿಐ(ಎಂ) ಏರ್ಪಡಿಸಿದ್ದ ವಿಚಾರ ಸಂಕಿರಣದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರೊಬ್ಬರು ಕಲ್ಕತ್ತಾ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

ಗಸ್‌ಹಾಲ್‌ರೊಡನೆ ಭೇಟಿ

ಜುಲೈ 8 ರಂದು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಕಾಮ್ರೇಡ್ ಗಸ್ ಹಾಲ್ ಹಾಗೂ ಇನ್ನೊಬ್ಬ ಮುಖಂಡ ಕಾಮ್ರೇಡ್ ಜೇಮ್ಸ್ ಗೆಸ್ಟ್‌ರವರನ್ನು ಭೇಟಿಯಾಗುವ ಸಂದರ್ಭ ಒದಗಿ ಬಂತು. ವಿಚಾರ ವಿನಿಮಯಗಳನ್ನು ನಡೆಸಿದಾಗ ನಮ್ಮೆರಡು ಪಕ್ಷಗಳ ನಡುವೆ ಈಗಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಸಮಾನ ನಿಲುವು ಇರುವುದು ಕಂಡುಬಂತು. ತಮ್ಮ ಪಕ್ಷವನ್ನು ಬಿಟ್ಟು ಹೋದವರು ಅನೇಕರು ಈಗ ಮತ್ತೆ ಪಕ್ಷ ಸೇರುವ ಇಚ್ಛೆ ವ್ಯಕ್ತಪಡಿಸುತ್ತಿದ್ದಾರೆ ಎಂದು ಅವರು ಹೇಳಿದರು ತಾನು ಪಕ್ಷದ ಸಂಗಾತಿಗಳಿಗೆ ಬರೆದ ಪತ್ರವನ್ನು ತೋರಿಸಿದರು. (ಬಾಕ್ಸ್ ನೋಡಿ)

> *ಈಗ ಎಂತಹ ಕ್ಷಣವೆಂದರೆ ಎಡಶಕ್ತಿಗಳ-ಸಮರಶೀಲತೆ ಹಾಗೂ ಮುತುವರ್ಜಿ - ಎಲ್ಲಕ್ಕೂ ಮಿಗಿಲಾಗಿ ಮಾರ್ಕ್ಸ್‌ವಾದ- ಲೆನಿನ್‌ವಾದ ಹಾಗೂ ಕಮ್ಯುನಿಸ್ಟ್‌ರ ಅನುಭವಗಳನ್ನು ಆಧರಿಸಿದ ವಿಚಾರ ಹಾಗೂ ತಂತ್ರಗಳು ಬಹುಶಃ ನಿರ್ಣಾಯಕವಾಗುವ ಕ್ಷಣ........*
>
> *ಜನತಾ ಶಕ್ತಿಗಳು, ಕಾರ್ಮಿಕ ವರ್ಗ, ಜನಾಂಗೀಯವಾಗಿ ಹಾಗೂ ರಾಷ್ಟ್ರೀಯವಾಗಿ ದಮನಕ್ಕೊಳಗಾದವರು, ಮಹಿಳೆಯರು, ಯುವಜನ ಹಾಗೂ ವಯೋವೃದ್ಧರದ್ದೇ ಬಹುಸಂಖ್ಯಾತ ವಿಭಾಗ. ಇವರನ್ನೆಲ್ಲಾ ಒಂದುಗೂಡಿಸಿ ಅಣಿನೆರೆಸಿದರೆ ಒಂದು ಸ್ವತಂತ್ರ ಜನತಾ ರಾಜಕೀಯ ಶಕ್ತಿ, ಕ್ಲಿಂಟನ್ ಆಡಳಿತದ ದಿಕ್ಕನ್ನು ಬದಲಿಸಲಿಲ್ಲ ಅಷ್ಟೇ ಅಲ್ಲ, ಅಮೇರಿಕಾದ ಇತಿಹಾಸವನ್ನು ದಿಕ್ಕನ್ನು ತಕ್ಷಣವಲ್ಲದಿದ್ದರೂ ಸದ್ಯ ಭವಿಷ್ಯದಲ್ಲೇ ಬದಲಿಸಬಲ್ಲ ರಾಜಕೀಯ ಶಕ್ತಿಯನ್ನು ಬೆಳೆಸುವುದು ಸಾಧ್ಯ.*
>
> ಪಕ್ಷದ ಸಂಗಾತಿಗಳಿಗೆ
> ಅಮೇರಿಕಾ ಸಂಯುಕ್ತ ಸಂಸ್ಥಾನಗಳ
> ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಗಸ್‌ಹಾಲ್
> ಬರೆದ ಪತ್ರದಲ್ಲಿ

ಸಿಪಿಐ(ಎಂ) ಹಾಗೂ ಸಿಪಿಯುಎಸ್‌ಎ ನಡುವೆ ಸಂಬಂಧಗಳನ್ನು ಬಲಪಡಿಸುವ ಅಗತ್ಯದ ಬಗ್ಗೆ ಒತ್ತಿ ಹೇಳಿದ ಕಾಮ್ರೇಡ್ ಗಸ್‌ಹಾಲ್ ಹವಾನಾದಿಂದ ವಾಪಸು ಹೋಗುವಾಗ ನ್ಯೂಯಾರ್ಕಿಗೆ ಬಂದು ತಮ್ಮ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಭೇಟಿ ಮಾಡುವ ಆಹ್ವಾನ ನೀಡಿದರು. ಆದರೆ ಆ ವೇಳೆಗೆ ಭಾರತದಲ್ಲಿನ ಬೆಳವಣಿಗೆಗಳಿಂದಾಗಿ ತಕ್ಷಣ ಹಿಂದಿರುಗಬೇಕಾಗಿ ಬಂದುದರಿಂದ ಈ ಭೇಟಿ ಸಾಧ್ಯವಾಗಲಿಲ್ಲ.

ಕೆನಡಾದಲ್ಲಿ


ಜುಲೈ 11 ರಂದು ಕೆನಡಾ ಕಮ್ಯುನಿಸ್ಟ್ ಪಕ್ಷದ ಮುಖಂಡರನ್ನು ಭೇಟಿ ಮಾಡಿದೆ. ಅವರು ಒಂದು ಸರ್ವಸದಸ್ಯ ಸಭೆ ಏರ್ಪಡಿಸಿದ್ದರು. ಅದನ್ನುದ್ದೇಶಿಸಿ ಮಾತನಾಡಿದ ಅಂತರರಾಷ್ಟ್ರೀಯ ಸನ್ನಿವೇಶದ ಬಗ್ಗೆ ಕಮ್ಯುನಿಸ್ಟ್ ಆಂದೋಲನದ ಬಗ್ಗೆ ನಮ್ಮ ಪಕ್ಷದ ನಿಲುವುಗಳನ್ನು ತಿಳಿಸುವ ಅವಕಾಶವನ್ನು ಒದಗಿಸಿದರು. ಅವರೂ ಕಲ್ಕತ್ತಾ ವಿಚಾರ ಸಂಕಿರಣದ ಬಗ್ಗೆ ಭಾರೀ ಮೆಚ್ಚುಗೆ ವ್ಯಕ್ತಪಡಿಸಿದರು.

ಟೊರಾಂಟೋ ನಗರದಲ್ಲಿ ಈ ಪಕ್ಷದ ಪ್ರಧಾನ ಕಾರ್ಯದರ್ಶಿಯವರನ್ನು ಭೇಟಿಯಾದೆ. ಅವರೂ ಕಲ್ಕತ್ತಾ ವಿಚಾರಸಂಕಿರಣದ ಪುಸ್ತಕದ 100 ಪ್ರತಿಗಳನ್ನು ತಕ್ಷಣ ಕಳಿಸಿ ಎಂದರು. ನಮ್ಮೆರಡು ಪಕ್ಷಗಳ ನಡುವೆ ಸಂಬಂಧಗಳನ್ನು ಬಲಗೊಳಿಸುವ ಬಗ್ಗೆ ಇವರೂ ಒತ್ತಿ ಹೇಳಿದರು.

ಹವಾನದಲ್ಲಿ

ಈ ನಗರದಲ್ಲಿ ನಾಲ್ಕು ದಿನಗಳ ಕಾಲ ನಡೆದ ವಿಚಾರ ವಿನಿಮಯಗಳು ನಿಜವಾಗಿಯೂ ಒಂದು ಗಮನಾರ್ಹ ಘಟನೆ. ಲ್ಯಾಟಿನ್ ಅಮೇರಿಕಾ ಹಾಗೂ ಕೆರೇಬಿಯನ್ ಪ್ರದೇಶದ ರಾಜಕೀಯ ಶಕ್ತಿಗಳಲ್ಲದೆ ಏಶಿಯಾ, ಯುರೋಪು ಹಾಗೂ ಆಫ್ರಿಕಾದ 45 ಪಕ್ಷಗಳ ಪ್ರತಿನಿಧಿಗಳೂ ಇದರಲ್ಲಿ ಭಾಗವಹಿಸಿದ್ದರು. ಈ ಅಧಿವೇಶನದಲ್ಲಿ ಪಾಲುಗೊಂಡ ಪಕ್ಷಗಳಲ್ಲಿ ಹಲವು ಕಲ್ಕತ್ತಾ ವಿಚಾರಸಂಕಿರಣಕ್ಕೂ ಬಂದಿದ್ದವು. ಪೋರ್ಚ್‌ಗೀಸ್, ಬ್ರೆಝಿಲ್, ಮೊದಲಾದ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಮುಖಪತ್ರಿಕೆಗಳ ಮೂಲಕ ಈ ವಿಚಾರ ಸಂಕಿರಮದ ಬಗ್ಗೆ ತಿಳಿದ ಚಿಲಿ, ಅರ್ಜೆಂಟೈನಾ, ಕೋಲಂಬಿಯಾ, ಎಲ್‌ಸಾಲ್ವಡೊರ್, ಗ್ವಾಟೆಮಾಲಾ ಇತ್ಯಾದಿ ದೇಶಗಳ ಪಕ್ಷಗಳ ಮುಖಂಡರು ನಮ್ಮ ಪಕ್ಷದೊಡನೆ ಸಂಪರ್ಕ ಬೆಳೆಸುವ ಆಸಕ್ತಿ ತೋರಿದರು. ಈ ಹಲವು ಪಕ್ಷಗಳ ಮುಖಂಡರೊಂದಿಗೆ ಮಾತುಕತೆ ನಡೆಸುವ ಅವಕಾಶವೂ ಒದಗಿಬಂತು.

ಹೊಸ ಸನ್ನಿವೇಶದಲ್ಲಿ ಹೊಸ ತಂತ್ರ



ಕಾಂ. ಸುರ್ಜಿತ್, ಕಾಂ. ಗಸ್‌ಹಾಲ್‌ರೊಡನೆ

ಕೋಮುವಾದ ಹಾಗೂ ಹೊಸ ಆರ್ಥಿಕ ನೀತಿಯ ಸನ್ನಿವೇಶದಲ್ಲಿ ದಲಿತರ ಸಮಸ್ಯೆಗಳು -- ವಿಚಾರ ಸಂಕಿರಣ

"ಟಿಕ್-20 ಮತ್ತು ಫಾಲಿಡಾಲ್ ಬೆರೆಸಿ ಕುಡಿಸಿದಂತ ಸ್ಥಿತಿ"

ಅಪಾಯಕಾರಿಯಾಗಿ ಬೆಳೆಯುತ್ತಿರುವ ಕೋಮುವಾದ, ತನ್ನ ರಾಕ್ಷಸೀರೂಪ ತೋರಿಸಲಾರಂಭಿಸಿರುವ ಹೊಸ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ದಲಿತರ ಸಮಸ್ಯೆಯನ್ನು ಹೀಗೆಂದು ಬಣ್ಣಿಸಿದವರು ಒಬ್ಬ ಭಾಷಣಕಾರರು. ಅವರ ಮಾತು ವಿಚಾರ ಸಂಕಿರಣದ ಒಟ್ಟು ಆಶಯವನ್ನು ಪರಿಣಾಮಕಾರಿಯಾಗಿ ಹೇಳುವಂತಹದ್ದಾಗಿತ್ತು.

ಸಂದರ್ಭ- 'ಐಕ್ಯರಂಗ' ಮತ್ತು 'ಕರ್ನಾಟಕ ದಲಿತ ಸಂಘರ್ಷ' ಸಮಿತಿ ಜಂಟಿಯಾಗಿ ದಲಿತ ಸಮಸ್ಯೆಗಳ ಬಗ್ಗೆ ಏರ್ಪಡಿಸಿದ್ದ ವಿಚಾರ ಸಂಕಿರಣ.

ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ನಡೆದ ಹಲವು ವಿಚಾರ ಸಂಕಿರಗಳಲ್ಲಿ ಇದು ಒಂದಾಗಿತ್ತು. ಮಿಥಿಕ್ ಸೊಸೈಟಿ ವಿಚಾರ ಸಂಕಿರಣದ ನಡೆದ 21 ಆಗಸ್ಟ್ ರಂದು ಕಿಕ್ಕಿರಿದು ತುಂಬಿತ್ತು. ಬೆಂಗಳೂರು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಿಪಿಐ(ಎಂ) ಕೇಂದ್ರ ಸಮಿತಿಯ ಮೂವರು ಸದಸ್ಯರು ಕಾಂ. ಬಿನೋಯ್ ಕೃಷ್ಣ ಚೌಧರಿ, ಪ್ರಕಾಶ್ ಕಾರತ್, ನೂರುಲ್ ಹುದಾ ಭಾಗವಹಿಸಿದ್ದು ವಿಚಾರ ಸಂಕಿರಣದ ವಿಶೇಷವಾಗಿತ್ತು.

ದಲಿತ ಕಲಾಮಂಡಳಿಯ ಸದಸ್ಯರ ಸ್ಫೂರ್ತಿದಾಯಕ ಹಾಡಿನಿಂದ ಆರಂಭವಾದ ವಿಚಾರ ಸಂಕಿರಣದ ವಿಷಯದ ಪ್ರಸ್ತಾವನೆಯನ್ನು ಕಾಂ. ಜಿ.ಎನ್. ನಾಗರಾಜ್ ಮಂಡಿಸಿದರು. ಹಾಗೂ ಆರಂಭದಲ್ಲಿ ಮಾತನಾಡಿದ ಕಾಂ. ಬಿನೋಯ್ ಕೃಷ್ಣ ಚೌಧುರಿ ಪಶ್ಚಿಮ ಬಂಗಾಳದ 'ಭೂಸುಧಾರಣ ಮಂತ್ರಿ' ಯಾಗಿದ್ದವರು. ಈಗ ಪಂಚಾಯತ್ ರಾಜ್ಯ ಮಂತ್ರಿಯಾಗಿರುವವರು. ಅವರನ್ನು ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಪ್ರೋ ರವಿವರ್ಮಕುಮಾರ್ ಭಾರತದ 'ಭೂಸುಧಾರಣಾ ಮಂತ್ರಿ' ಎಂದು ಬಣ್ಣಿಸಿದ್ದರು. ಏಕೆಂದರೆ ಭಾರತದಲ್ಲಿ ಭೂ ಹೀನರಿಗೆ ಭೂ ಹಂಚಿಕೆಯ ಸಿಂಹಪಾಲು ಪಶ್ಚಿಮಬಂಗಾಳದ್ದು. ಇಡೀ ದೇಶಕ್ಕೆ ಮಾದರಿಯಾಗುವಂತಹದ್ದು. ಕಾಂ. ಚೌಧುರಿಯವರು ತಮ್ಮ ಭಾಷಣದಲ್ಲಿ ದಲಿತರ ಸಮಸ್ಯೆಗಳ ಪರಿಹಾರಕ್ಕೆ ಮೀಸಲಾತಿ ಅಗತ್ಯಕ್ರಮವಾದರೂ, ಬರಿ ಅದರಿದ ಪರಿಹಾರ ಸಾಧ್ಯವಿಲ್ಲ, ಭೂ ಸುಧಾರಣೆಯ ಮೂಲಕ ಭೂ ಹೀನರಿಗೆ ಹೆಚ್ಚುವರಿ ಭೂಮಿ ಹಂಚಿಕೆ ದಲಿತರ ಸಮಸ್ಯೆಗಳಿಗೆ ಪರಿಹಾರ- ಏಕೆಂದರೆ ಶೇಕಡಾ 75 ರಿಂದ 80 ರಷ್ಟು ದಲಿತರು ಭೂ ಹೀನ ಕೃಷಿ ಕೂಲಿಕಾರರು, ಸಣ್ಣ ರೈತರು. ಹಿಂದುಳಿದ ಜಾತಿಗಳಿಗೆ ಮೀಸಲಾತಿ ಬಗ್ಗೆ ನೇಮಿಸಲಾದ ಮಂಡಲ್ ಕಮೀಶನ್ ವರದಿ ಸಹ ಹಿಂದುಳಿದ ವರ್ಗಗಳ ಸಮಸ್ಯೆಗಳ ಪರಿಹಾರಕ್ಕೆ ಭೂ ಸುಧಾರಣೆ ಅತ್ಯಗತ್ಯ ಎಂದು ಹೇಳಿದೆ ಎಂದು ಕಾಂ. ಚೌಧುರಿ ನೆನಪಿಸಿದರು.

ಆದರೆ ಭೂ ಸುಧಾರಣೆ ಬರಿಯ ಕಾನೂನುಗಳಿಂದ ಸಾಧ್ಯವಿಲ್ಲ. ಕಾನೂನಿನ ಜತೆಗೆ ಪ್ರಬಲವಾದ ಜನತಾ ಚಳುವಳಿ ಅಗತ್ಯ ಎಂದರು. ಅದೇ ರೀತಿ ದಲಿತರಿಗೆ ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಭಾಗವಹಿಸುವುದು- ಇದನ್ನು ಸಾಧ್ಯವಾಗಿಸಲು ಶೇಕಡಾ 28

ಮಾಡಲಾಗಿದೆ ಎಂದು ಕಾಂ. ಚೌಧುರಿ ಹೇಳಿದರು.

ಬಿಜೆಪಿ ಬರಿಯ ಇನ್ನೊಂದು ಪಕ್ಷವಲ್ಲ

ಆಮೇಲೆ ಮಾತನಾಡಿದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರತ್ ದಲಿತ ಚಳುವಳಿ ಕರ್ನಾಟಕದಲ್ಲಿ ಗಮನಾರ್ಹ ಸೃಜನಾತ್ಮಕ ಸಂಘಟನಾ ಪ್ರಯತ್ನಗಳನ್ನು ಮಾಡಿದೆ, ದಲಿತರನ್ನು ಅಣಿ ನೆರೆಸುವುದರಲ್ಲಿ ದೊಡ್ಡ ಪಾತ್ರ ವಹಿಸಿದೆ ಎಂದರು. ಸಾಮಾಜಿಕ ನ್ಯಾಯಕ್ಕಾಗಿ ಈಗ ಉತ್ತರ ಭಾರತದಲ್ಲಿ ನಡೆಯುತ್ತಿರುವ ದೊಡ್ಡ ಹೋರಾಟದ ಭಾಗ ದಲಿತ ಚಳುವಳಿ. ಇದು ನಮ್ಮ ಸಮಾಜದ ಸ್ಥಾಪಿತ ಹಿತಾಸಕ್ತಿಗಳ ಬುಡಕ್ಕೆ ಕೊಡಲಿ ಏಟು ಹಾಕುವ ಚಳುವಳಿ. ಮಂಡಲ್ ವರದಿಯ ಸಂದರ್ಭದಲ್ಲಿ ನಡೆಯುತ್ತಿದ್ದ ಸಾಮಾಜಿಕ ನ್ಯಾಯದ ಹೋರಾಟಕ್ಕೆ ಪ್ರತಿಕ್ರಿಯೆಯಾಗಿ ಪಟ್ಟಭದ್ರ ಹಿತಾಸಕ್ತಿಗಳು ಮಂದಿರ-ಮಸೀದಿ ವಿವಾದವನ್ನು ಉಲ್ಬಣಗೊಳಿಸಿದನ್ನು ನೆನಪಿಸಿದರು. 'ಹಿಂದುತ್ವ' ಈ ಹಿತಾಸಕ್ತಿಗಳ ಆಯುಧ. ದಲಿತ ಶೋಷಿತ ಜನಸಮುದಾಯಗಳಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಮೂಡುತ್ತಿರುವ ಎಚ್ಚರವನ್ನು ಹಾಳುಗೆಡಹುವ, ಅದರ ಐಕ್ಯತೆ ಮುರಿಯುವ ಪ್ರಯತ್ನ ಇದು. ಸಂಘ ಪರಿವಾರದ

…ಷ್ಟ್ರೀಯ ರಂಗದಲ್ಲಾದ ಹಿನ್ನಡೆಯ …ಪರಿಣಾಮಗಳಿಂದ ಲ್ಯಾಟಿನ್ ಅಮೇ…ದ ದೇಶಗಳು ಈಗ ಚೇತರಿಸಿ…ಮ್ಮ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿ-ವಿ…ರಾಟವನ್ನು ತೀವ್ರಗೊಳಿಸಲು ಸಜ್ಜಾಗು…ಸುವ್ಪೋಪಾಲೋ ವೇದಿಕೆಯ ಚರ್ಚೆ…ಯಿತು. ಕ್ಯೂಬಾದ ಜನಗಳ ಧೀರ…ಗೆ ಸ್ಫೂರ್ತಿ ನೀಡಿತೆಂಬುದನ್ನು ಪ್ರತ್ಯೇ…ದೇಕಾಗಿಲ್ಲ. ಬದಲಾದ ವಿಶ್ವ ಸನ್ನಿ…ಮ್ರಾಜ್ಯಶಾಹಿ-ವಿರೋಧಿ ಹೋರಾಟ…ಜಿಕ ಕ್ರಾಂತಿಯ ಹೋರಾಟದಲ್ಲಿ ಈ…ಸ ತಂತ್ರಗಳನ್ನು ವಿಕಾಸಗೊಳಿಸುತ್ತಿವೆ. …ಗುರಿಸಾಧನೆಗಾಗಿ ಸಶಸ್ತ್ರ ಹೋರಾಟ…ವರಿಸುವುದು ಈಗಿನ ಸನ್ನಿವೇಶದಲ್ಲಿ…ಲ್ಲಿ. ಆದ್ದರಿಂದ ವಿಶಾಲ ಜನವಿಭಾಗ

> …ಹೋರಾಟ ಸಮಾಜದಲ್ಲಿ ಒಂದು …ಕ ಬದಲಾವಣೆಯೆತ್ತ ಒಯ್ಯುತ್ತದೆ …ಮಾರ್ಕ್ಸ್-ಎಂಗೆಲ್ಸ್ ಪ್ರತಿಪಾದಿಸಿದ …ವರ ಕಾಲದಂತೆ ಈಗಲೂ ಅಷ್ಟೇ …ಮ್ಮ ಹಿನ್ನಡೆ, ಸೋಲುಗಳಿಂದ ಸರಿ…ಠ ಕಲಿತು ಕಮ್ಯುನಿಸ್ಟ್ ಆಂದೋ…ಬೆಳೆದೇ ಬೆಳೆಯುತ್ತದೆ, ಏಕೆಂದರೆ …ಶಗಳು ಒಂದು ಶೋಷಣಾರಹಿತ …ವ್ಯವಸ್ಥೆ ನಿರ್ಮಿಸಲು ಸಾಧ್ಯವಾದಾ…ತಿಯನ್ನು ನೆಲೆಗೊಳಿಸಲು ಸಾಧ್ಯ.

…ನ್ನು ಅಣಿನೆರೆಸಿ ತಾವು ದೀರ್ಘ ಸಶಸ್ತ್ರ …ಂದಗಳಿಸಿದುದನ್ನು ರಕ್ಷಿಸಿ, ಕ್ರೋಢಿಕ…ಕ ಕ್ರಾಂತಿಯ ಗುರಿಸಾಧನೆಗೆ ಮುನ್ನ…ಕೂಲವಾಗುವ ರೀತಿಯಲ್ಲಿ ತಂತಮ್ಮ…ವ ಪಕ್ಷಗಳೊಡನೆ ಚೌಕಾಸಿ ನಡೆಸು…

…ಲ್ವಡೋರ್ ಸರಕಾರ ಹಾಗೂ ಎಮ್. …ನ್. ನಡುವೆ ನಡೆದ ಒಪ್ಪಂದ ಇದ…ಹರಣೆ ಈ ಒಪ್ಪಂದ ಜಾರಿಯಾಗಿ…ನ ಸಾಧನೆಗಳು ಸುರಕ್ಷಿತವಾಗಿರು…ಳ್ಳಲು ನಿರಂತವಾಗಿ ಜನಗಳನ್ನು …, ಸದಾ ಜಾಗರೂಕರಾಗಿರುವುದು …ಎಂದು ಎಮ್.ಎಲ್ಎಲ್.ಎನ್.ನ…ನೆ ಮಾತುಕತೆ ನಡೆಸಿದಾಗ ಕಂಡು…ದಲ್ಲಿ ಕ್ರಾಂತಿಕಾರಿ ಹೋರಾಟದಲ್ಲಿ …ದೇಶದ ಹಲವು ಭಾಗಗಳಲ್ಲಿ ಭೂಮಿ…ಗಿ ವಶಪಡಿಸಿಕೊಂಡು ಹಂಚಿತ್ತು. …ತ್ತುಕೊಳ್ಳಲು ಭೂಮಾಲಿಕರು ಕಾತು…ಹಿನ್ನೆಲೆಯಲ್ಲಿ ಈ ಹೀಗೆ ಹಂಚಿತ್ತು …ನೀಡುವ ಅಂಶ ಎಲ್ ಸಾಲ್ವ…ಡೋರ್ ಸರಕಾರದೊಡನೆ ಆಗಿರುವ ಒಪ್ಪಂದದಲ್ಲಿ ಇದೆ. ಅಮೇರಿಕಾದ ಸಾಮ್ರಾಜ್ಯಶಾಹಿ ಮಧ್ಯಪ್ರವೇಶದ ಬಗ್ಗೆ ಸಾಲ್ವಡೋರ್ ಜನಗಳಲ್ಲಿ ಹೆಚ್ಚುತ್ತಿರುವ ಆತಂಕ ಹಾಗೂ ಶಾಂತಿಯ ಬಯಕೆ ತಮ್ಮ ಪರವಾಗಿ ಇರುವ ಸಕಾರಾತ್ಮಕ ಅಂಶಗಳು ಎಂದು ಈ ರಂಗದ ಮುಖಂಡರು ಹೇಳಿದರು.

ಕೊಲಂಬಿಯಾದಲ್ಲಿಯೂ ದೊಡ್ಡ ಹೋರಾಟ ನಡೆದಿದೆ. ಸಶಸ್ತ್ರ ಹೋರಾಟದಲ್ಲಿ ತೊಡಗಿದವರು ಎಲ್ ಸಾಲ್ವಡೋರ್‌ನಂತೆ ಆಳುವ ಪಕ್ಷದೊಡನೆ ಒಂದು ಒಪ್ಪಂದಕ್ಕೆ ಬರಲು ಸಿದ್ಧರಾಗಿದ್ದರೂ ಆಳುವ ಪಕ್ಷ ಅವರನ್ನು ಸಂಪೂರ್ಣ ಚಚ್ಚಿ ಹಾಕಲು ಸರ್ವ ಪ್ರಯತ್ನ ನಡೆಸಿದೆ. ಹೋರಾಟ ನಿರತ ಶಕ್ತಿಗಳು ಕೋಲಂಬಿಯಾದ ಒಳಗೆ ಹಾಗೂ ಹೊರಗೆ ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸಿ ದೇಶದಲ್ಲಿ ಶಾಂತಿಯನ್ನು ನೆಲೆಸಲು ಒಂದು ಇತ್ಯರ್ಥಕ್ಕೆ ಬರುವಂತೆ ಒತ್ತಡ ತರುತ್ತಿದ್ದಾರೆ.

ಸಾಮ್ರಾಜ್ಯಶಾಹಿ ಖಿನ್ನಗೊಂಡಿದೆ

ಲ್ಯಾಟಿನ್ ಅಮೇರಿಕಾ ಮತ್ತು ಕೆರೇಬಿಯನ್ ಜನಗಳು ಆರ್ಥಿಕ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಮುನ್ನಡೆಗಾಗಿ ಹಾತೊರೆಯುತ್ತಿದ್ದಾರೆ. ಅಮೇರಿಕನ್ ಸಾಮ್ರಾಜ್ಯಶಾಹಿಗೆ ತನ್ನ ನಿರ್ದೇಶನಗಳನ್ನು ಹೇರುವುದು ಈಗ ಹಿಂದಿನಷ್ಟು ಸುಲಭವಾಗಿ ಆಗುತ್ತಿಲ್ಲ ಎಂದು ಈ ಪ್ರದೇಶದ ವಿವಿಧ ಪಕ್ಷಗಳ ಮುಖಂಡರೊಡನೆ ನಡೆಸಿದ ಮಾತುಕತೆಗಳಿಂದ ತಿಳಿದುಬಂತು. ಅಮೇರಿಕಾದ ಸಾಮ್ರಾಜ್ಯಶಾಹಿಗಳ ಸ್ಥಿತಿ ಎಂತಹ ಮಟ್ಟಕ್ಕೆ ಬಂದಿದೆಯೆಂದರೆ ಕ್ಯೂಬಾವನ್ನು ಆ ಪ್ರದೇಶದ ಎಲ್ಲಾ ದೇಶಗಳಿಂದ ದೂರ ಮಾಡುವ ಅವರ ಎಲ್ಲಾ ಪ್ರಯತ್ನಗಳೂ ಶೋಚನೀಯ ಸೋಲು ಕಂಡವು. ಅವರ ಅಪೇಕ್ಷೆಗೆ ವಿರುದ್ಧವಾಗಿ ಕ್ಯೂಬಾ ಈಗ ಈ ಪ್ರದೇಶದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿ ಹಾಗೂ ಅವರ ಬಾಲಬಡುಕರ ವಿರುದ್ಧ ಈ ಪ್ರದೇಶದ ಜನಗಳನ್ನು ಜಾಗೃತಿಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.

ಇದು ಸಾಮ್ರಾಜ್ಯಶಾಹಿಗಳನ್ನು ಖಿನ್ನಗೊಳಿಸಿದೆ. ವಾಸ್ತವ ಸನ್ನಿವೇಶ ಕಮ್ಯುನಿಸ್ಟ್ ಆಂದೋಲನವನ್ನು ಸದೆಬಡೆಯುವ ಅವರ ಪ್ರಯತ್ನಗಳನ್ನು ವಿಫಲಗೊಳಿಸಿದೆ. ಏಕೆಂದರೆ ವಿಶ್ವದ ಯಾವುದೇ ಮೂಲೆಯಲ್ಲಿ ಒಂದು ಶೋಷಕ ವ್ಯವಸ್ಥೆಯಲ್ಲಿನ ವರ್ಗ ಹೋರಾಟದ ನಿಯಮಗಳನ್ನು ಉಪೇಕ್ಷಿಸುವುದು ಸಾಧ್ಯವಾಗುವುದಿಲ್ಲ. ವರ್ಗ ಹೋರಾಟ ಸಮಾಜದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಯೆತ್ತ ಒಯ್ಯುತ್ತದೆ ಎಂದು ಮಾರ್ಕ್ಸ್-ಎಂಗೆಲ್ಸ್ ಪ್ರತಿಪಾದಿಸಿದ ಸಿದ್ಧಾಂತ ಅವರ ಕಾಲದಂತೆ ಈಗಲೂ ಅಷ್ಟೇ ಪ್ರಸ್ತುತ. ತಮ್ಮ ಹಿನ್ನಡೆ, ಸೋಲುಗಳಿಂದ ಸರಿಯಾದ ಪಾಠ ಕಲಿತು ಕಮ್ಯುನಿಸ್ಟ್ ಆಂದೋಲನ ಮತ್ತೆ ಬೆಳೆದೇ ಬೆಳೆಯುತ್ತದೆ, ಏಕೆಂದರೆ ವಿವಿಧ ದೇಶಗಳು ಒಂದು ಶೋಷಣಾರಹಿತ ಸಾಮಾಜಿಕ ವ್ಯವಸ್ಥೆ ನಿರ್ಮಿಸಲು ಸಾಧ್ಯವಾದಾಗಲೇ ಶಾಂತಿಯನ್ನು ನೆಲೆಗೊಳಿಸಲು ಸಾಧ್ಯ.

…ಮಾಡಿದ್ದು ಅದು. ತನ್ನ ನೆಲೆ ವ್ಯಾಪ…ತ್ವದ ಅಂಗವಾಗಿ ಅದು ಅಂಬೇ…ಚಳುವಳಿಯನ್ನು ಒಳಗೊಳ್ಳಲು …ರ್ಯದಲ್ಲಿ ನಂಬಿಕೆ ಇಟ್ಟಿರುವ ಬಿಜೆ…ತ ಕೆಳದರ್ಜೆಯ ದಲಿತರ ಬಗ್ಗೆ …ಎಂದು ದಲಿತರು ಅರ್ಥಮಾಡಿ… ಅಪಾಯ ಎದುರಿಸಲು ದಲಿತ …ಇತರ ಜಾತ್ಯಾತೀತ ಶಕ್ತಿಗಳ ಐಕ್ಯ…ಂದರು.

…ಮಾಡಿದ ಅಸ್ಪೃಶ್ಯತೆ"

…ಕ ನೀತಿ ಸರಕಾರಿ ಹಾಗೂ …ನಿಕ ಕ್ಷೇತ್ರದ ಉದ್ಯೋಗಗಳನ್ನು …ದಾರೀಕರಣದ ಹೆಸರಿನಲ್ಲಿ ನಾಶ…ಜನೆಗೆ ದಲಿತರಿಗೆ ಸ್ವಲ್ಪವಾದರೂ … ಮೀಸಲಾತಿ ಉದ್ಯೋಗಗ…ತ್ತಿದೆ. ಇದು ಸಾಮಾಜಿಕ ನ್ಯಾಯ…ರುವ ದಲಿತ ಚಳುವಳಿಗೆ ಒಡ್ಡಿದ …ಮೀಸಲಾತಿಯನ್ನು ಅರ್ಥಹೀನ…ನೀತಿಯ ವಿರುದ್ಧ ದಲಿತ ಚಳು…ನ್ನು ಎತ್ತಿಕೊಳ್ಳಬೇಕು ಎಂದರು. …ಸಮಿತಿಯ ಶ್ರೀಧರ ಕಲಿವೀರ. …ಮೂಲಿಕ ದಲಿತರ ಮೀಸಲಾತಿಗೆ …ಡೆ. ಆದರೆ ದಲಿತ ಚಳುವಳಿ ವಳಿ ಮುಂದುವರಿಸಬೇಕು. ಹೊಸ ಆರ್ಥಿಕ ನೀತಿ ದೇಶದ ಸಾರ್ವಭೌಮತೆಗೆ ಎಷ್ಟು ಅರ್ಥಹೀನವಾಗಿದೆಯೆಂದರೆ, ಒಂದು ರೀತಿಯ ಆಮದು ಮಾಡಿದ ಅಸ್ಪೃಶ್ಯತೆ ಆರಂಭ ಆಗಿದೆ, ಮನಮೋಹನಸಿಂಗ್ ಆಧುನಿಕ ಮನುಸ್ಮೃತಿಯ ಹರಿಕಾರ ಎಂದರು.

ಶ್ರೀಧರ ಕಲಿವೀರ ಅವರೇ ದಲಿತರ ಸಮಸ್ಯೆಯು 'ಟಿಕ್-20 + ಫಾಲಿಡಾಲ್' ಎಂದು ಬಣ್ಣಿಸಿದ್ದು. ದಲಿತ ಚಳುವಳಿಗೂ ಮೀಸಲಾತಿ ಶಾಶ್ವತವಾಗಿ ಬೇಡ. ಎಲ್ಲರಿಗೂ ಉದ್ಯೋಗ, ಸಾಮಾಜಿಕ ಆರ್ಥಿಕ ಸಮಾನತೆ ತರುವ ವ್ಯವಸ್ಥೆಗಾಗಿ ಹೋರಾಡಬೇಕು ಎನ್ನುತ್ತಾ ಅವರು ಶೋಷಿತರ ನಡುವೆ ಐಕ್ಯತೆ ಬಗ್ಗೆ ಒತ್ತಿ ಹೇಳಿದರು.

ಕಾ.ನೂರುಲ್ ಹುಡಾ ಧರ್ಮ ಒಂದು ಪ್ರಭುತ್ವದ ನೆಲೆಯಾಗಲು ಸಾಧ್ಯವಿಲ್ಲ ಎಂದು ಪಾಕಿಸ್ತಾನ ಮುಂತಾದ ಹಲವಾರು ದೇಶಗಳು ಪದೇ ಪದೇ ಸಿದ್ಧಪಡಿಸಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ವರ್ಮಾ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ ಒಂದೇ ನಾಣ್ಯದ ಎರಡು ಮುಖಗಳು, ಮೀಸಲಾತಿ ಸಾಮಾಜಿಕ ನ್ಯಾಯದ ಕನಿಷ್ಠ ಕಾರ್ಯಕ್ರಮದಂತೆ ಎಂದರು. ಅಲ್ಲದೆ ಜಾತ್ಯಾತೀತ ಪಕ್ಷಗಳ ಐಕ್ಯತೆ ಬಗ್ಗೆ ಒತ್ತಿ ಹೇಳಿದರು.

ಕಾಂ. ಜಿ.ಎಸ್. ನಾಗರಾಜ್ ವಿಚಾರ ಸಂಕಿರಣದಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಆಧಾರದ ಮೇಲೆ ರೂಪಿಸಿದ ನಿರ್ಣಯಗಳನ್ನು ಮಂಡಿಸಿದರು.

ಊರು ಕೊಳ್ಳೆಹೋದ ನಂತರ ಕೋಟೆ ಬಾಗಿಲು ಹಾಕುವವರು

ಜಿ.ಎಸ್.ಮಣಿ



ಹಣಕಾಸು ವಲಯದ ಸುಧಾರಣೆಗಳ ಹರಿಕಾರ ನರಸಿಂಹಮ್ ಎಂಬ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ಮಹಾಶಯರು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಹೆಚ್ಚಿನ ಸ್ವಾಯತ್ತತೆ ನೀಡುವ ಬಗ್ಗೆ ಮಾತನಾಡುತ್ತಿದ್ದಾರೆ. ಶೇರು ಹಗರಣದಂತಹ ಹಗರಣ ನಡೆದು ದೇಶದ ಹಣಕಾಸು ವಲಯದ ಸ್ಥಿತಿಯೇ ಅಲ್ಲೋಲ ಕಲ್ಲೋಲವಾಗಿ ಜನಸಾಮಾನ್ಯರ ಹಣವನ್ನು ಕೆಲವೇ ಕೆಲವರು ಕೊಳ್ಳೆ ಹೊಡೆದ ನಂತರ ಈ ಮಾತು ಬಂದಿದೆ.

ದೇಶದ ಅರ್ಥವ್ಯವಸ್ಥೆಯ ಸಮತೋಲ ಕಾಯ್ದುಕೊಳ್ಳುವಲ್ಲಿ ಮಹತ್ತರ ಪಾತ್ರವಹಿಸಬೇಕಾದ ಕೇಂದ್ರೀಯ ಬ್ಯಾಂಕ್‌ಗೆ ಸ್ವಾಯತ್ತತೆ ಮತ್ತು ಹೆಚ್ಚಿನ ಅಧಿಕಾರಗಳು ಇರಬೇಕಾದ್ದು ಅತ್ಯವಶ್ಯ. ಆದರೆ ಉದಾರೀಕರಣ ನಿರ್ಮಿಸುವ ಆರ್ಥಿಕ ಅರಾಜಕತೆಯ ನಡುವೆ ಈ ಕೇಂದ್ರೀಯ ಬ್ಯಾಂಕ್‌ಗೆ ನೀಡುವ ಸ್ವಾಯತ್ತತೆ ಮತ್ತು ಅಧಿಕಾರ ಎರಡೂ ಬಂಡವಾಳಿಗರ ಬೆಂಬಲಕ್ಕೆ ಬರುವ ಸಾಧ್ಯತೆಯೇ ಹೆಚ್ಚು. ಆದ್ದರಿಂದಲೇ ಮೇಲಿನ ಮಾತುಗಳ ಪ್ರಾಮಾಣಿಕತೆಯನ್ನು ನಂಬುವುದು ಕಷ್ಟ.

ಉದಾರೀಕರಣದ ದುರ್ಬೀಜ ದುಷ್ಟ ಬೆಳೆಯನ್ನೇ ಬೆಳೆಯಲಿದೆ.

ಉದಾರೀಕರಣ ನಿರುದ್ಯೋಗದ ಸುರಿಮಳೆಗೈಯ್ಯಲಿದೆ

ಈ ಮಾತುಗಳನ್ನು ಉದಾರೀಕರಣದ ವಿರೋಧಿಗಳು ಹೇಳಿದ್ದಲ್ಲ. ಯೋಜನಾ ಆಯೋಗದ ಉಪಾಧ್ಯಕ್ಷ ಮತ್ತು ಕೇಂದ್ರ ವಾಣಿಜ್ಯ ಮಂತ್ರಿ ಪ್ರಣವ್ ಮುಖರ್ಜಿ ಈ ಮಾತು ಹೇಳಿದ್ದಾರೆ. ಅವರ ಪ್ರಕಾರ ಎಂಟನೇ ಯೋಜನೆಯ ಅಂತ್ಯದ ವೇಳೆಗೆ ಉದಾರೀಕರಣದ ಕ್ರಮವಾಗಿ ಕನಿಷ್ಠ ಹತ್ತು ಕೋಟಿ ಜನ ನಿರುದ್ಯೋಗಿಗಳಾಗಲಿದ್ದಾರೆ.

ಯೋಜನಾ ಆಯೋಗದ ಮುಖ್ಯಸ್ಥರೇ ಈ ಸಂಖ್ಯೆ ನೀಡುವಾಗ ಈ ಸಂಖ್ಯೆ ವಾಸ್ತವದಲ್ಲಿ ಇನ್ನೆಷ್ಟು ದೊಡ್ಡದಿರುತ್ತೋ ಯಾರು ಬಲ್ಲರು? ಆಹಾ ಭಾರತದ (ದುರ) ಅದೃಷ್ಟವೆ!!

ದೇಶದ ಬೆನ್ನೆಲುಬನ್ನೇ ಮುರಿಯಲಿರುವ ರಸಗೊಬ್ಬರ ನೀತಿ

ಸರ್ಕಾರ ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಷರತ್ತುಗಳನ್ನು ಶಿರಸಾವಹಿಸಿ ಪಾಲಿಸುತ್ತ ಹೊಸ ರಸಗೊಬ್ಬರ ನೀತಿ ತಂದಿತು. ರಸಗೊಬ್ಬರಗಳ ಮೇಲಿನ ಸಹಾಯ ಧನದಲ್ಲಿ ತೀವ್ರ ಕಡಿತ ಮಾಡಿದ್ದರಿಂದ ರಸಗೊಬ್ಬರಗಳ ಬೆಲೆ ತೀವ್ರವಾಗಿ ಏರಿತು. ಅದರ ಪರಿಣಾಮದ ಸೂಚನೆಗಳು ಈಗ ದೊರೆಯುತ್ತಿವೆ. ರಸಗೊಬ್ಬರಗಳ ಬಳಕೆಯಲ್ಲಿ 30-40 ಲಕ್ಷಟನ್ನುಗಳಷ್ಟು ಕಡಿಮೆಯಾಗಿದೆಯಂತೆ. ಅಂದರೆ ಈ ಸಾಲಿನಲ್ಲಿ ದವಸ ಧಾನ್ಯಗಳ ಉತ್ಪಾದನೆ ತೀವ್ರ ಕಡಿಮೆಯಾಗಬಹುದು.

ಉತ್ಪಾದನೆ ಕಡಿಮೆಯಾದರೆ ಆಹಾರಧಾನ್ಯಗಳ ಬೆಲೆ ಹೆಚ್ಚಾಗುತ್ತದೆ. ಹಣದುಬ್ಬರ ಹೆಚ್ಚುತ್ತದೆ. ಮತ್ತೆ ಬಡವರು ಇನ್ನೂ ಬಡವರಾಗುತ್ತಾರೆ. ಈ ಬಡತನ ಅವರನ್ನು ಶ್ರೀಮಂತರ ಶೋಷಣೆಗೆ ಹೆಚ್ಚು ಹೆಚ್ಚು ತಳ್ಳುತ್ತದೆ.

ಎಂಟನೇ ಯೋಜನೆಯ ಕೊನೆಯ ವೇಳೆಗೆ 20 ಮಿಲಿಯ ಟನ್ನುಗಳಷ್ಟು ರಸಗೊಬ್ಬರ ಬಳಕೆ ಸಾಧಿಸಬೇಕಾಗಿರುವ ನಾವು ಕೇವಲ 12.7 ಮಿಲಿಯಟನ್ನುಗಳಷ್ಟು ಬಳಕೆ ಸಾಧಿಸಿದ್ದೇವೆ. ಈ ಬಳಕೆ ಇಳಿಮುಖವಾದರೆ ಮುಂದೆ ಗತಿ?

ಇದಲ್ಲದೆ ಅಮೇರಿಕನ್ ಸಾಮ್ರಾಜ್ಯಶಾಹಿ ಈಗ ರಸಗೊಬ್ಬರ ತಂತ್ರಜ್ಞಾನವನ್ನೇ ಭಾರತಕ್ಕೆ ಹಸ್ತಾಂತರಿಸದಂತೆ ನಿರ್ಬಂಧ ಹೇರಿದೆ. ರಕ್ಷಣಾ ವ್ಯವಸ್ಥೆ ಮತ್ತು ಜಾಗತಿಕ ಶಾಂತಿಯ ಹೆಸರಿನಲ್ಲಿ ಇದನ್ನು ಮಾಡುತ್ತಿರುವ ಸರ್ಕಾರ ಮುರಿಯುತ್ತಿರುವ ದೇಶದ ಬೆನ್ನಲುಬಿಗೆ ಹೊಡೆತ ಹಾಕುತ್ತಿದೆ. ಸ್ವಾವಲಂಬನೆ ಎನ್ನುವುದು ಭಾರತಕ್ಕೆ ಮರೀಚಿಕೆಯಾಗಿ ಭಾರತ ಸಾಮ್ರಾಜ್ಯಶಾಹಿಗಳೆದುರು ಬಿಕ್ಷಾ ಪಾತ್ರೆ ಹಿಡಿದು ನಿಲ್ಲಬೇಕಾಗುತ್ತದೆ.

ಇದೇ ಉದಾರೀಕರಣ!!

'ಬೌದ್ಧಿಕ ಆಸ್ತಿ ಹಕ್ಕುಗಳು: ಗುಲಾಮಗಿರಿಯೇ ಗತಿ'

ಡಂಕೆಲ್ ಪ್ರಸ್ತಾವಗಳ ಭಾಗವಾಗಿ ಬಂದಿರುವ ಬೌದ್ಧಿಕ ಆಸ್ತಿ ಹಕ್ಕುಗಳ ವಿಷಯದಲ್ಲಿ ಭಾರತ ಸರ್ಕಾರ ತಲೆ ಬಾಗುತ್ತದೆ ಎಂಬ ಸೂಚನೆಯನ್ನು ಕೇಂದ್ರ ಹಣಕಾಸು ಸಚಿವ ಮನಮೋಹನಸಿಂಗ್‌ರು ಹೇಳಿದ್ದಾರೆ. ಉದಾರೀಕರಣದ ಬಿಸಿ ತಟ್ಟಿ ಈಗ ತಿರುಗಿ ನಿಂತಿರುವ ಕೆಲವು ಬಂಡವಾಳಿಗರನ್ನು ಎದುರಿಸಬೇಕಾಗಿರುವ ಈ ಅರ್ಥ ತಜ್ಞ ಮಹಾಶಯರು ತಮ್ಮ ಕ್ರಮಗಳನ್ನು ಸಮರ್ಥಿಸಿಕೊಳ್ಳುವ ಎಲ್ಲ ಪ್ರಯತ್ನ ಮಾಡುತ್ತಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಈಗ ತಾನು ಬುದ್ಧಿವಂತ ಮತ್ತು ಸ್ವಾತಂತ್ರ್ಯ ಪ್ರೇಮಿ, ದೇಶದ ಸಾರ್ವಭೌಮತೆಯ ರಕ್ಷಕ ಎಂದೂ ತೋರಿಸಿಕೊಳ್ಳಬೇಕು. ಜೊತೆಗೆ ಬ್ಯಾಂಕ್ ಫಂಡ್ ಧಣಿಗಳ ಎದುರಿಗೆ ತಲೆಯನ್ನೂ ಬಾಗಿಸಿ ಶಹಬಾಸ್‌ಗಿರಿ ಪಡೆಯಬೇಕು. ಈ ವೈರುಧ್ಯದ ಫಲಗಳನ್ನು ಆಗಲೇ ಸರ್ಕಾರ ಉಣ್ಣುತ್ತಿದೆ. ಸೆಪ್ಟೆಂಬರ್ 9ರ ಭಾರತ್ ಬಂದ್ ಅಂತಹ ಒಂದು ಊಟ.

ಇನ್ನು ಈ ಸರ್ಕಾರಕ್ಕೆ ಎಂತಹ ದಿನಗಳು ಕಾದಿವೆಯೋ?

ತೈಲ ಮತ್ತು ನೈಸರ್ಗಿಕ ಅನಿಲ ಉದ್ಯಮ ರಕ್ಷಿಸಲು ಸಂಘಟನೆಗಳ ಜಂಟಿ ಕಾರ್ಯಕ್ರಮ

ತೈಲ ಮತ್ತು ಅನಿಲ ಅತ್ಯಂತ ಮುಖ್ಯ ಶಕ್ತಿ ಮೂಲಗಳು. ಇವಿಲ್ಲದೆ ಆಧುನಿಕ ಜೀವನ ನಡೆಯುವುದೇ ಇಲ್ಲ. ರೈಲುಗಳ, ವಿಮಾನಗಳ ಓಡಾಟವೇ ಇಲ್ಲದಂತಹ ಸನ್ನಿವೇಶ ಊಹಿಸಿಕೊಳ್ಳಿ, ಬದುಕು ಬಹಳ ಕಷ್ಟಮಯವಾಗಿ ಬಿಡುತ್ತದೆ. ಆದರೆ ಇಂತಹ ದಿನ ಬರುವ ಲಕ್ಷಣಗಳು ಕಾಣಿಸುತ್ತಿವೆ. ಹೊಸ ಆರ್ಥಿಕ ನೀತಿ ತೆರೆದ ಬಾಗಿಲುಗಳಲ್ಲಿ ಈ ಕಷ್ಟಗಳು ತೂರಿ ಬರಲು ಅವಕಾಶವಿದೆ.

ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ, ಅಂದರೆ 1973 ರಲ್ಲಿ ತೈಲ ಬಿಕ್ಕಟ್ಟು ಉದ್ಭವವಾಗಿ ದೇಶ ಅಂತಹ ಕಷ್ಟಕರ ಪರಿಸ್ಥಿತಿ ಅನುಭವಿಸಿತು. ಆದರೆ ಮುಂಬೈಯ ಹತ್ತಿರ ತೈಲ ಶೋಧದಿಂದ ಈ ಬಿಕ್ಕಟ್ಟನ್ನು ಎದುರಿಸುವುದು ಸಾಧ್ಯವಾಯಿತು. ಈ ಶೋಧ ಸತತ ಪರಿಶ್ರಮದಿಂದ ಸಾಧ್ಯವಾಯಿತು. ಆದರೆ ಇಂದು ಅಂತಹ ಶೋಧನ ಕಾರ್ಯವನ್ನೇ ನಾವು ಬಿಟ್ಟುಕೊಟ್ಟಿದ್ದೇವೆ. ಈಗ ಬಹುರಾಷ್ಟ್ರೀಯ ಕಂಪನಿಗಳಿಗೆ ಈ ಕೆಲಸವನ್ನು ಬಿಟ್ಟಿದ್ದೇವೆ. ಅಂದರೆ ಅವರ ದಯೆಯಿದ್ದರೆ ನಮಗೆ ತೈಲ ಇಲ್ಲದಿದ್ದರೆ ಇಲ್ಲ.

ಈ ಹಿನ್ನೆಲೆಯಲ್ಲಿ ತೈಲ ಮತ್ತು ನೈಸರ್ಗಿಕ ಅನಿಲದಲ್ಲಿ ಸ್ವಾವಲಂಬನೆ ಸಾಧಿಸುವ ಕುರಿತು ನವದೆಹಲಿಯಲ್ಲಿ ವಿಚಾರ ಸಂಕಿರಣವೊಂದು ನಡೆಯಿತು. ಸಿಐಟಿಯು, ಇಂಟಕ್, ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್., ಎನ್.ಸಿ.ಓ.ಎ ಮತ್ತು ಅಖಿಲ ಭಾರತ ಜನ ವಿಜ್ಞಾನ ಚಳುವಳಿಗಳ ಜಾಲ ಈ ವಿಚಾರ ಸಂಕಿರಣವನ್ನು ಸಂಘಟಿಸಿದ್ದವು. ಇದರಲ್ಲಿ ವಿವಿಧ ತೈಲ ಸಂಸ್ಥೆಗಳ ಕೆಲಸಗಾರರು, ವಿಜ್ಞಾನಿಗಳು, ಭೂ ವಿಜ್ಞಾನಿಗಳು ಮತ್ತು ತಂತ್ರಜ್ಞರು ಭಾಗವಹಿಸಿದರು. ತೈಲ ಕ್ಷೇತ್ರದ, ಕಾರ್ಮಿಕರು, ವಿಜ್ಞಾನಿಗಳು ಅಧಿಕಾರಿಗಳು ಇವರೆಲ್ಲ ಭಾಗವಹಿಸಿದ ಅನನ್ಯ ವಿಚಾರ ಸಂಕಿರಣ ಇದು.

ಇಂಡಿಯನ್ ಆಯಿಲ್‌ನ ಅಧ್ಯಕ್ಷರು ಈ ಸಂಕಿರಣವನ್ನು ಉದ್ಘಾಟಿಸಿದರು. ಡಾ. ಎಂ.ಕೆ. ಘಂದೆ, ರಾಜಾಕುಲಕರ್ಣಿ, ಗೋಪೆಶ್ವರ್, ವೈ.ಡಿ. ಶರ್ಮಾ, ಡಾ. ವ್ಯಾಸ್, ಚಿಮಣಬಾಯಿ ಮೆಹ್ತ, ಡಾ. ಅಶೋಕ್ ರಾವ್, ಡಾ. ಜಿ.ಎಸ್. ಆನಂದ್, ಇವರೆಲ್ಲ ಸಂಕಿರಣದಲ್ಲಿ ಭಾಗವಹಿಸಿದರು. ಹಲವು ತಜ್ಞರು ಮತ್ತು ಪ್ರಮುಖರು ತಮ್ಮ ವಿಚಾರಗಳನ್ನು ಮಂಡಿಸಿದರು.

1. ಒಟ್ಟಾರೆ ಎಲ್ಲರೂ ತೈಲ ಕ್ಷೇತ್ರವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದಿರುವುದನ್ನು ಖಂಡಿಸಿದರು. ತೈಲ ಶೋಧನವನ್ನು ಪೂರ್ತಿಯಾಗಿ ಅವರ ಕೈಗೆ ನೀಡಿರುವುದನ್ನು ಪ್ರತಿಗಾಮಿ ಕ್ರಮವೆಂದು ಹೇಳಿದರು.


2. ನಮ್ಮ ಶುದ್ಧೀಕರಣ ಘಟಕಗಳಲ್ಲಿ ಸರಿಯಾದ ತಂತ್ರಜ್ಞಾನ ಅಳವಡಿಸದೇ ಇರುವುದನ್ನು ಅವರು ಖಂಡಿಸಿದರು.

3. ತೈಲ ಮಾರಾಟವನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟಿದ್ದನ್ನು ಅವರು ಖಂಡಿಸಿದರು.

4. ದೇಶೀಯ ಬಿ.ಹೆಚ್.ಇ.ಎಲ್.ನಂತಹ ಸಂಸ್ಥೆ ಇರುವಾಗ ಯಂತ್ರೋಪಕರಣ ಆಮದು ಮಾಡುವ ನಿರ್ಧಾರವನ್ನು ಅವರು ಖಂಡಿಸಿದರು.

ಹಲವು ಸೂಚನೆ ಶಿಫಾರಸ್ಸುಗಳನ್ನು ನೀಡಲಾಯಿತು. ತಂತ್ರಜ್ಞಾನ, ಸುಧಾರಣೆ ಸಂಶೋಧನೆ, ಶೋಧನ ಕೆಲಸ ಇತ್ಯಾದಿಗಳ ಬಗ್ಗೆ ಸೂಚನೆಗಳನ್ನು ನೀಡಿದರು.

ಈ ವಿಚಾರ ಸಂಕಿರಣ ದೇಶದ ತೈಲ ಉದ್ಯಮ ರಕ್ಷಣೆಯತ್ತ ಮೊದಲ ಸಂಘಟಿತ ಪ್ರಯತ್ನ. ಬಹುರಾಷ್ಟ್ರೀಯ ಕಂಪನಿಗಳನ್ನು ಈ ಕ್ಷೇತ್ರದಿಂದ ಹೊರಗಿಡುವ ಪ್ರಯತ್ನ ಇದು. ಡಾ. ಎಂ.ಕೆ. ಘಂದೆ, ರಾಜಾ ಕುಲಕರ್ಣಿ ವೈ.ಡಿ. ಶರ್ಮಾ ಮತ್ತು ನಾರಾಯಣ ಸ್ವಾಮಿ, ಈ ಕಾರ್ಯ ಸಾಧನೆಗೆ ನಿರ್ದಿಷ್ಟ ಕಾರ್ಯಕ್ರಮ ರೂಪಿಸಬೇಕೆಂಬ ತೀರ್ಮಾನವನ್ನು ಕೈಗೊಳ್ಳಲಾಯಿತು.



ತ್ರಿಪುರಾ: ಶಾಂತಿಯುತ ಪ್ರಜಾಪ್ರಭುತ್ವ ವಾತಾವರಣ ನಿರ್ಮಿಸುವ ಎಡರಂಗದ ಪ್ರಯತ್ನಕ್ಕೆ ಮೊದಲ ಯಶಸ್ಸು

ಆಸ್ಸಾಂ-ಅಗರ್ತಲಾ ಹೆದ್ದಾರಿಯ ಪಕ್ಕ ಗುಡ್ಡದ ಮೇಲಿನ ಒಂದು ಸಣ್ಣ ಆಟದ ಮೈದಾನ. ಒಬ್ಬ ಸೇನಾ ಉಡುಪಿನಲ್ಲಿದ್ದ ಯುವಕ ಮುಖ್ಯಮಂತ್ರಿ ದಶರಥ ದೇಬ್‌ರವರಿಗೆ ಸೆಲ್ಯೂಟ್ ಹೊಡೆದು ತನ್ನ ಭಯಾನಕ ಬಂದೂಕನ್ನು ಅವರಿಗೆ ಸಮರ್ಪಿಸಿದ. ಹೀಗೆ ಆರಂಭವಾಯಿತು ಶಾಂತಿಯ ಒಂದು ಹೊಸ ಯುಗ. ಅಖಿಲ ತ್ರಿಪುರಾ ಬುಡಕಟ್ಟು ಪಡೆ (ಎ.ಟಿ.ಟಿ.ಎಫ್.)ನ ಒಟ್ಟು 739 ಉಗ್ರಗಾಮಿಗಳು ಸೆಪ್ಟೆಂಬರ್ 6 ರಂದು ಮುಖ್ಯಮಂತ್ರಿಗಳ ಸಮ್ಮುಖ ಶರಣಾಗತರಾದರು. ಇನ್ನೂ 300 ಎ.ಟಿ.ಟಿ.ಎಫ್. ಸದಸ್ಯರು ಶರಣಾಗತರಾಗುವ ನಿರೀಕ್ಷೆಯಿದೆ.

ತ್ರಿಪುರಾ ಎಡರಂಗ ಸರ್ಕಾರ ಬಹಳ ಪ್ರಯತ್ನ ನಡೆಸಿದನಂತರ ಬುಡಕಟ್ಟು ಉಗ್ರಗಾಮಿಗಳ ಒಂದು ದೊಡ್ಡ ವಿಭಾಗ ಸರಕಾರದ ಶಾಂತಿ ಪ್ರಯತ್ನಗಳಿಗೆ ಓಗೊಟ್ಟಿತು. ಶಸ್ತ್ರ ತ್ಯಜಿಸಿ, ಹಿಂಸಾಚಾರ ಕೈಬಿಡಲು ಒಪ್ಪಿತು. ಇತರ ಉಗ್ರಗಾಮಿ ಸಂಘಟನೆಗಳೂ ತಮ್ಮ ತಪ್ಪನ್ನು ಅರಿತು ಈ ಶಾಂತಿ ಪ್ರಯತ್ನಗಳಿಗೆ ಎಡರಂಗ ಸರ್ಕಾರದ ಆಹ್ವಾನಕ್ಕೆ ಸ್ಪಂದಿಸುತ್ತಾರೆ ಎಂದು ಮುಖ್ಯಮಂತ್ರಿ ಆಶಿಸಿದರು.

ಎ.ಟಿ.ಟಿ.ಎಫ್. ಉಗ್ರಗಾಮಿಗಳು ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಒಪ್ಪಿಸಿದರು.

ಮುಖ್ಯಮಂತ್ರಿಗಳಲ್ಲದೆ ರಾಜ್ಯ ಪಿ.ಡಬ್ಲ್ಯುಡಿ. ಮಂತ್ರಿ ಬೈದ್ಯನಾಥ್ ಮಜುಂದಾರ್, ಬುಡಕಟ್ಟು ಕಲ್ಯಾಣ ಮಂತ್ರಿ ಅಘೋರ ದೇಬ್ ಬರ್ಮಾ, ಆರೋಗ್ಯ ಮಂತ್ರಿ ಕೇಶವ್ ಮಜುಂದಾರ್, ಕೃಷಿ ಮಂತ್ರಿ ಬಾಜೂಬನ್ ರಿಯಾಂಗ್ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಮುಖ್ಯ ಕಾರ್ಯದರ್ಶಿ ಪೋಲೀಸ್ ಮಹಾನಿರ್ದೇಶಕ ಹಾಗೂ ಇತರ ಅಧಿಕಾರಿಗಳೂ ಹಾಜರಿದ್ದರು. ನೂರಾರು ಸ್ಥಳೀಯ ಜನರು ಬುಡಕಟ್ಟು ಜನರು ಹಾಗೂ ಇತರರೂ ಎ.ಟಿ.ಟಿ.ಎಫ್ ಯುವಕರು ಒಬ್ಬೊಬ್ಬರಾಗಿ ಶಸ್ತ್ರ ಸಮರ್ಪಿಸುತ್ತಿದ್ದಾಗ ಅವರನ್ನು ಹರ್ಷದಿಂದ ಅಭಿನಂದಿಸಿದರು.

ಕಳೆದ ಐದು ವರ್ಷಗಳ ಕಾಂಗ್ರೆ - ಟಿ.ಯು.ಜೆ.ಎಸ್. ಆಳ್ವಿಕೆಯಲ್ಲಿ ರಾಜ್ಯದಲ್ಲಿ ಪ್ರಜಾಪ್ರಭುತ್ವವಿರಲಿಲ್ಲ. ಆದರೆ ಎಡರಂಗ ಸರಕಾರ ಈಗ ರಾಜ್ಯದ ಹಿಂದುಳಿದ ಬುಡಕಟ್ಟು ಜನಗಳ ಹಿತಾಸಕ್ತಿಗಳನ್ನು ಕಾಪಾಡುತ್ತಾರೆ ಎಂದು ಎ.ಟಿ.ಟಿ.ಎಫ್ ಮುಖಂಡರಾದ ಲಲಿತ್ ದೇಬ್ ಬರ್ಮಾ ಹಾಗೂ ರಾಮೇಂದ್ರ ರಿಯಾಂಗ್ ಆಶಿಸಿದರು.

ಮುಖ್ಯಮಂತ್ರಿ ದಶರಥ್ ದೇಬ್ ಮಾತನಾಡುತ್ತಾ ಎಲ್ಲ ಜನಗಳೂ ಸರಕಾರದ ಶಾಂತಿ ಪ್ರಯತ್ನಗಳಿಗೆ ಬೆಂಬಲನೀಡಬೇಕೆಂದು ಕರೆ ನೀಡಿದರು. ಎ.ಟಿ.ಟಿ.ಎಫ್.ನೊಂದಿಗೆ ಆದ ಒಪ್ಪಂದವನ್ನು ವಿವರಿಸಿದರು. ಶರಣಾದವರಿಗೆಲ್ಲಾ ಪುನರ್ವಸತಿ ಕಲ್ಪಿಸಲಾಗುವುದು, ಅವರಿಗೆ ನೀಡಿದ ಭರವಸೆಗಳನ್ನು ಜ್ಯಾರಿಗೊಳಿಸಲಾಗುವುದು ಎಂದು ದಶರಥ್ ದೇಬ್ ಘೋಷಿಸಿದರು. ಪ್ರತಿಯೊಬ್ಬರೂ ಹಿಂದಿನ ಕಹಿಯನ್ನು ಮರೆತು ಬುಡಕಟ್ಟು ಜನಗಳು ಹಾಗೂ ಬುಡಕಟ್ಟೇತರ ಜನಗಳು ರಾಜ್ಯದಲ್ಲಿ ಒಂದು ಶಾಂತಿಯುತ ಪ್ರಜಾಪ್ರಭುತ್ವ ವಾತಾವರಣದಲ್ಲಿ ಒಂದಾಗಿ ಕೆಲಸ ಮಾಡೋಣ ಎಂದರು. ಇನ್ನೂ ಹಿಂಸಾಚಾರ ಬಿಡಲೊಲ್ಲದ ಉಗ್ರಗಾಮಿಗಳೊಂದಿಗೆ ದೃಢವಾಗಿ ವರ್ತಿಸಲಾಗುವುದು ಎಂದೂ ಅವರು ಎಚ್ಚರಿಸಿದರು.

ಉಪ್ಪ ತಯಾರಿಸಲು ವಿದೇಶಿ ಕಂಪನಿಗೆ ಕೊಡುಗೆ

ಕಾಂಡ್ಲಾ ಗುಜರಾತ್ ರಾಜ್ಯದ ಒಂದು ಪಟ್ಟಣ. ಅಲ್ಲಿ ಸೆಪ್ಟೆಂಬರ್ 6 ರಂದು 700 ಕ್ಕೂ ಹೆಚ್ಚು ಸಿಪಿಐ(ಎಂ) ಹಾಗೂ ಸಿಪಿಐ ಕಾರ್ಯಕರ್ತರು ವಿದೇಶೀ ಬಹುರಾಷ್ಟ್ರೀಯ ಸಂಸ್ಥೆ ಕಾರ್ಗಿಲ್ ಸೌತ್ ಈಸ್ಟ್ ಏಶಿಯಾ ಲಿಮಿಟೆಡ್ ಭಾರತದಲ್ಲಿ ಉಪ್ಪು ತಯಾರಿಸಲು 16 ಸಾವಿರ ಎಕ್ರೆ ಪ್ರದೇಶವನ್ನು ವಹಿಸಿಕೊಡುವ ಯೋಜನೆಯನ್ನು ಪ್ರತಿಭಟಿಸಿ ಬಂಧನಕ್ಕೆ ಒಳಗಾದರು.

ಕಾಂಡ್ಲಾ ಬಂದರು ಮಂಡಳಿಯ ಅತ್ಯಂತ ಬೆಲೆಬಾಳುವ ಪ್ರದೇಶವನ್ನು ವಹಿಸಿಕೊಡುವ ಬಗ್ಗೆ ಸ್ಥಳೀಯ ಜನಗಳಲ್ಲಿ ಭಾರೀ ಸಿಟ್ಟಿದೆ. ಬಂದರು ಮಂಡಳಿ ಅಧಿಕಾರಿಗಳು ಈ ಜಮೀನನ್ನು ಬಿಟ್ಟುಕೊಡಲು ವಿರೋಧಿಸಿದ್ದರೂ ಪ್ರಧಾನ ಮಂತ್ರಿಗಳ ಕಚೇರಿ ಹಾಗೂ ನೆಲ ಸಾರಿಗೆ ಸಚಿವಾಲಯ ಆ ವಿದೇಶಿ ಕಂಪೆನಿ ಪರವಾಗಿ ಮಧ್ಯಪ್ರವೇಶಿದವು! ಅರಬ್ಬೀ ಸಮುದ್ರ ಕರಾವಳಿಯಲ್ಲಿ ಗುಜರಾತದ ಕಚ್ ಜಿಲ್ಲೆಯಲ್ಲಿರುವ ಈ ಕಾಂಡ್ಲಾ ಪ್ರದೇಶ ಉಪ್ಪು ತಯಾರಿಕೆಗೆ ದೇಶದಲ್ಲೇ ಅತ್ಯುತ್ತಮ ಪ್ರದೇಶ. ದೇಶದ 65 ಶೇ. ಉಪ್ಪು ಇಲ್ಲೇ ಉತ್ಪಾದನೆಯಾಗುತ್ತದೆ.

ಸ್ಥಳೀಯ ರೈತರು ವ್ಯಾಪಾರಸ್ಥರು, ಸಣ್ಣ ಪ್ರಮಾಣದ ಉಪ್ಪು ತಯಾರಕರು ಎಲ್ಲರಲ್ಲೂ ಸರಕಾರದ ಈ ನಿರ್ಣಯದ ಬಗ್ಗೆ ತೀವ್ರ ಕ್ರೋಧವಿದೆ. ಬಂಧನಕ್ಕೆ ಒಳಗಾಗುವ ಮೊದಲು ಡಿ.ವೈ.ಎಫ್.ಐ ಮುಖಂಡ ಮಹಮದ್ ಸಲೀಂ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸುಭೋದ್ ಮೆಹ್ತಾ ಕಾಂಡ್ಲಾದ ಈ ಮಾರಾಟ ನರಸಿಂಹರಾವ್ ಸರಕಾರದ ವಿನಾಶಕಾರೀ ಆರ್ಥಿಕ ನೀತಿಗಳಿಗೆ ಹಾಗೂ ದೇಶದ ಸ್ವಾವಲಂಬನೆಯನ್ನು ಬಲಿಕೊಟ್ಟು ಐ.ಎಂ.ಎಫ್. ಬಹುರಾಷ್ಟ್ರೀಯ ಕಂಪೆನಿಗಳಿಗೆ ಶರಣಾಗುವ ನೀತಿಗಳಿಗೆ ಒಂದು ಉದಾಹರಣೆಯಷ್ಟೇ ಎಂದರು.

ಮುಂಬೈ- ಕಾಂಡ್ಲಾ ಪ್ರತಿಭಟನಾ ಜಾಥಾ

ಅಂದು ಸಂಜೆ ಗಾಂಧೀಧಾಮದಲ್ಲಿ ಮತ್ತೆ ಒಂದು ಸಾರ್ವಜನಿಕ ಸಭೆ ನಡೆಯಿತು. ಈ 16 ಸಾವಿರ ಎಕ್ರೆ ಜಮೀನನ್ನು ವಿದೇಶೀ ಕಂಪೆನಿಗೆ ವಹಿಸುವುದರ ವಿರುದ್ಧ ಮಾತ್ರವಷ್ಟೇ ಅಲ್ಲ ಇದಕ್ಕೆ ಅವಕಾಶ ಮಾಡಿಕೊಡುವ ಸಂಪೂರ್ಣ ಹೊಸ ಆರ್ಥಿಕ ನೀತಿಗೆ ತಮ್ಮ ವಿರೋಧವಿದೆ ಎಂದು ಸಿಪಿಐ(ಎಂ) ಹಾಗೂ ಸಿಪಿಐ ನಾಯಕರು ವಿವರಿಸಿದರು.

10 ಎಡ-ಜಾತ್ಯಾತೀತ ವಿದ್ಯಾರ್ಥಿ ಹಾಗೂ ಯುವ ಸಂಘಟನೆಗಳು ಈ ತಿಂಗಳು ಮುಂಬೈಯಿಂದ ಕಾಂಡ್ಲಾಗೆ ಒಂದು ಜಾಥಾ ನಡೆಸುವುದಾಗಿ ಡಿ.ವೈ.ಎಫ್.ಐ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಸಲೀಂ ತಿಳಿಸಿದರು. ಭಗತ್ ಸಿಂಗ್‌ರವರ ಜನ್ಮದಿನ ಸೆಪ್ಟೆಂಬರ್ 27 ರಂದು ಮುಂಬೈಯ ಗೇಟ್‌ವೇ ಆಫ್ ಇಂಡಿಯಾದಿಂದ ಆರಂಭವಾಗುವ ಜಾಥಾ ಅಕ್ಟೋಬರ್ 2 ರಂದು ಗಾಂಧೀ ಜಯಂತಿಯ ದಿನ ಕಾಂಡ್ಲಾ ತಲುಪುತ್ತದೆ. ಭಿವಂಡಿ, ಠಾಣೆ, ದಾದ್ರಾ, ನಗರ್‌ಹವೇಲಿ, ಸೂರತ್, ಬರೋಡಾ, ಅಹಮ್ಮದಾಬಾದ್, ಬಾವನಗರ್, ಗಾಂಧೀಧಾಮದ ಮೂಲಕ ಕಾಂಡ್ಲಾ ತಲುಪುತ್ತದೆ. ಇತ್ತೀಚೆಗೆ ಬಹಳಷ್ಟು ಕೋಮುಗಲಭೆ ಪೀಡಿತವಾದ ಪ್ರದೇಶಗಳನ್ನು ಹಾದುಹೋಗುವ ಈ ಜಾಥಾದಲ್ಲಿ ವಿದ್ಯಾರ್ಥಿ-ಯುವಜನರು ಸರಕಾರದ ಆರ್ಥಿಕ ನೀತಿಗಳು ಹಾಗೂ ಕೋಮುವಾದಿಗಳ ವಿಚ್ಛಿದ್ರಕಾರಿ ನೀತಿಗಳ ಮೇಲೆ ಗಮನ ಕೇಂದ್ರೀಕರಿಸುತ್ತಾರೆ.

ಗುಜರಾತ್‌ನ ಪ್ರಮುಖ ನಗರ ಅಹಮ್ಮದಾಬಾದ್‌ನಲ್ಲೂ ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಇತ್ತೀಚೆಗೆ ಅತ್ಯಂತ ಭಯಾನಕ ಕೋಮು ಹಿಂಸಾಚಾರ ಕಂಡ ನಗರದ ಕೇಂದ್ರ ಭಾಗದಲ್ಲಿ ಈ ಪ್ರತಿಭಟನಾ ಸಭೆ ನಡೆದಿರುವುದು ಗಮನಾರ್ಹ.

ರಾಜಸ್ಥಾನದ ಗಂಗಾ ನಗರ ಪ್ರದೇಶದ ಪ್ರವಾಹ ಪೀಡಿತ ರೈತರಿಗೂ ಹರ್ಯಾಣದ ರೈತರಿಗೆ ಕೊಡುವಷ್ಟು ಪರಿಹಾರ ಕೊಡಬೇಕು ಎಂದು ಒತ್ತಾಯಿಸಿ ಹಿರಿಯ ಸಿಪಿಐ(ಎಂ) ಮುಖಂಡ ಹಾಗೂ ಮಾಜಿ ಸಂಸತ್ ಸದಸ್ಯ ಶಿವಪತ್ ಸಿಂಗ್ ತಾವು ಕೈಗೊಂಡಿದ್ದ ಉಪವಾಸ ಸತ್ಯಾಗ್ರಹವನ್ನು ಇಂತಹ ಪರಿಹಾರ ಕೊಡಲಾಗುವುದು ಎಂದ ಭರವಸೆ ಪಡೆದ ಮೇಲೆ ಅಂತ್ಯಗೊಳಿಸಿದ್ದಾರೆ. ದಿಲ್ಲಿಗೆ ಬಂದಿದ್ದ ರಾಜಸ್ಥಾನದ ರಾಜ್ಯಪಾಲರನ್ನು ಭೇಟಿ ಮಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪರಿಹಾರವನ್ನು ಘೋಷಿಸಬೇಕೆಂದು ಆಗ್ರಹ ಪಡಿಸಿದರು. ಎಕ್ರೆಗೆ 400 ರೂಪಾಯಿಯಂತೆ ಪ್ರವಾಹದಿಂದ ಅತ್ಯಂತ ಹೆಚ್ಚು ನಷ್ಟ ಅನುಭವಿಸಿದ ರೈತರಿಗೆ ನೀಡಲಾಗುವುದು. ಇತರರಿಗೂ ಅದೇ ಅನುಪಾತದಲ್ಲಿ ಪರಿಹಾರ ನೀಡಲಾಗುವುದು ಎಂದು ರಾಜ್ಯಪಾಲರಿಂದ ಪಡೆದ ಭರವಸೆಯನ್ನು ಸ್ಥಳೀಯ ಕಲೆಕ್ಟರ್‌ಗೆ ತಿಳಿಸಿದಾಗ ಶಿವಪತ್ ಸಿಂಗ್ ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿದರು.

ಇತರ ಕಿಸಾನ್ ಮುಖಂಡರೂ ಭಾಗವಹಿಸಿದ್ದ ಈ ಸತ್ಯಾಗ್ರಹಕ್ಕೆ ರ್‍ಯಾಲಿಗಳು, ಸಭೆಗಳ ಮೂಲಕ ಸುತ್ತಮುತ್ತಲ ಪ್ರದೇಶಗಳಿಂದ ಭಾರೀ ಬೆಂಬಲ ಮೂಡಿ ಬಂತು. ಉಪವಾಸ ಸತ್ಯಾಗ್ರಹ ಕೈಗೊಂಡ ಮುಖಂಡರ ನ್ಯಾಯಯುತ ಬೇಡಿಕೆಯನ್ನು ಈಡೇರಿಸಬೇಕೆಂದು ಸರಕಾರದ ಮೇಲೆ ಒತ್ತಾಯಗಳು ಬಂದವು.

ಪ್ರವಾಹದಿಂದ ಪೀಡಿತರಾದ ರೈತರಿಗೆ ಪರಿಹಾರವಲ್ಲದೆ ಇನ್ನೂ ಕೆಲವು ದೀರ್ಘಕಾಲದ ಬೇಡಿಕೆಗಳನ್ನು ಶಿವಪತ್ ಸಿಂಗ್ ಎತ್ತಿದ್ದರು. ಪ್ರವಾಹಕ್ಕೆ ಕಾರಣವಾಗುವ ಘಗ್ಗರ್ ನದಿಯ ನೀರನ್ನು ನಿಯಂತ್ರಿಸಿ ಅದನ್ನು ಬಳಸುವ ಒಂದು ಖಾಯಂ ವ್ಯವಸ್ಥೆ, ಪ್ರವಾಹ ಪೀಡಿತ ಕೊಳವೆ ಬಾವಿಗಳ ವಿದ್ಯುತ್ ಶುಲ್ಕ ಆರುತಿಂಗಳಿಗೆ ಮಾಫಿ, ಪ್ರವಾಹ ಪೀಡಿತ ರೈತರಿಂದ ಸರಕಾರದ, ಸಹಕಾರಿ ಸಂಘಗಳ ಸಾಲ ವಸೂಲಾತಿಗೆ ತಡೆ, ಅವರ ಮೇಲೆ ಹಾಕಿರುವ ನೀರಾವರಿ ಅಧಿಕ ಶುಲ್ಕ ವಾಪಸಾತಿ ಈ ಪ್ರದೇಶದ ಹಳ್ಳಿಗಳ ರಕ್ಷಣೆಗಾಗಿ ರಕ್ಷಣಾ ಕಟ್ಟೆಗಳ ರಚನೆ ಇತ್ಯಾದಿ ಬೇಡಿಕೆಗಳನ್ನು ಅವರು ಮುಂದಿಟ್ಟರು.

ಮುರ್ಶಿದಾಬಾದ್‌ನಲ್ಲಿ ಸಿಪಿಐ(ಎಂ) ಮುಖಂಡರ ಕೊಲೆ

ಸಿಪಿಐ(ಎಂ) ಮುಖಂಡ ಹಾಗೂ ಪಶ್ಚಿಮಬಂಗಾಳದ ಮುರ್ಶಿದಾಬಾದ್ ಜಿಲ್ಲೆಯ ಸಮಿತಿಯ ಸದಸ್ಯ ಕಾಂ. ಮಹಮ್ಮದ್ ಅಲ್ಲಾರಖಾ ಸೆಪ್ಟೆಂಬರ್ 7 ರಂದು ಕೊಲೆಗೀಡಾದರು. ಭಾನುವಾರ ಅಲ್ಲಾರಖಾ ಹಾಗೂ ಇನ್ನೊಬ್ಬ ಪಕ್ಷದ ಕಾರ್ಯಕರ್ತ ಮಹಮ್ಮದ್ ಘಿಯಾಸುದ್ದೀನ್ ಸೈಕಲ್‌ನಲ್ಲಿ ಹೋಗುತ್ತಿದ್ದಾಗ ಕಾಂಗ್ರೆಸ್ ಸಮಾಜಘಾತುಕರು ಹಲ್ಲೆ ಮಾಡಿದರು. ಅಲ್ಲಾರಖಾರನ್ನು ಕೊಚ್ಚಿ ಹಾಕಿದರು. ಅವರು ಸ್ಥಳದಲ್ಲೇ ಮೃತಪಟ್ಟರು. ಘಿಯಾಸುದ್ದೀನ್ ಚಿಂತಾಜನಕ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿದ್ದಾರೆ.

ಕಾಂ. ಅಲ್ಲಾರಖಾ ಜಿಲ್ಲಾ ಮಂಡಳಿಯ ಒಬ್ಬ ಕಾರ್ಯಕಾರಿ ಸದಸ್ಯರಾಗಿಯೂ, ಸ್ಥಳೀಯ ಪಂಚಾಯತ್ ಸಮಿತಿಯ ಅಧ್ಯಕ್ಷರಾಗಿಯೂ ದುಡಿದಿದ್ದರು. ವೃತ್ತಿಯಲ್ಲಿ ಅವರು ಶಾಲಾ ಅಧ್ಯಾಪಕರಾಗಿದ್ದರು. ಸಿಪಿಐ(ಎಂ) ಮುರ್ಶಿದಾಬಾದ್ ಜಿಲ್ಲಾ ಸಮಿತಿ ಈ ಕೊಲೆಯನ್ನು ಖಂಡಿಸಿ ತಪ್ಪಿತಸ್ಥರನ್ನು ಕೂಡಲೇ ಹಿಡಿಯಬೇಕೆಂದು ಒತ್ತಾಯಿಸಿದೆ.

ಸಿಟ್ಟಿಗೆದ್ದ ವಿದ್ಯಾರ್ಥಿನಿಯರ ಬೃಹತ್ ಪ್ರತಿಭಟನೆ

ದಿಲ್ಲಿಯಲ್ಲಿ ಹೆಚ್ಚುತ್ತಿರುವ ಲೈಂಗಿಕ ... ಹಾಗೂ ಕಿರುಕುಳವನ್ನು ಪ್ರತಿಭಟಿಸಿ ಸೆ... ಬರ್ 7 ರಂದು ಒಂದು ಬೃಹತ್, ... ಹಾಗೂ ಕ್ರೋಧತಪ್ತ ಕಾರ್ಯಾಚರಣೆ ನ... ಯಿತು. ದಿಲ್ಲಿಯ ಮೂರು ಮಹಿಳಾ ಕಾ... ಜುಗಳ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾ... ರ್ಥಿನಿಯರು ಜನವಾದಿ ಮಹಿಳಾ ಸಂಘ... ನೆಯ ನೇತೃತ್ವದಲ್ಲಿ ಮಿರಾಂಡಾ ಹೌಸ್ ಕಾ... ಜಿನಿಂದ ಉಪರಾಜ್ಯಪಾಲರ ಕಚೇರಿಯ ವರ... ಮೆರವಣಿಗೆ ನಡೆಸಿದರು. ಒಂದು ವಾರ ... ಮೂರು ಕಾಲೇಜುಗಳಲ್ಲಿ ನಡೆಸಿದ ಪ್ರಚಾ... ರದ ನಂತರ ಈ ಮೆರವಣಿಗೆ ವಿದ್ಯಾರ್ಥಿನಿ... ರಿಂದ ಅಭೂತ ಪೂರ್ವ ಸ್ಪಂದನ ದೊರೆಯಿತು... ಮಹಿಳೆಯರನ್ನು ಹೆಚ್ಚೆಚ್ಚಾಗಿ ಮಾರಾಟದ ಸ... ವ್ವಾಗಿ ಮಾಡುವುದರ ವಿರುದ್ಧ, ಲೈಂಗಿಕ ಕಿರು... ಳದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ... ಬೃಹತ್ ಮೆರವಣಿಗೆ ವಿಶ್ವವಿದ್ಯಾಲಯ ರಸ್ತೆಗ... ಮೂಲಕ ಸಾಗಿದ್ದಾಗ ವಾಹನ ಸಂಚಾರ ಸ್ತ... ಗೊಂಡಿತು.

ಉಪರಾಜ್ಯಪಾಲರ ಕಚೇರಿಯ ಮುಂ... ದ್ದ ಪೋಲೀಸ್ ಬಂದೋಬಸ್ತು ಮುರಿ... ವಣಿಗೆ ಮುಂದೊತ್ತಿ ಕಚೇರಿಯ ಮುಖ್ಯದ್ವಾ... ರದವರೆಗೂ ಹೋಯಿತು. ಅಲ್ಲಿ ನಡೆ... ಬೃಹತ್ ಸಭೆಯನ್ನು ಉದ್ದೇಶಿಸಿ ಬೃಂದಾ... ಕಾರಾತ್ ಹಾಗೂ ಇಂದ್ರಾಣಿ ಮಜುಂದಾ... ಮಾತನಾಡಿದರು ಕಳೆದ ತಿಂಗಳು ಅಮಾ... ನುಷ ಹಲ್ಲೆ ಎದುರಿಸಿದ ಕೆನ್ಯಾದ ವಿದ್ಯಾರ್ಥಿ... ಮೇರಿ ಕೂಡಾ ಮಾತನಾಡಿದರು. ಮೂ... ಕಾಲೇಜುಗಳ ವಿದ್ಯಾರ್ಥಿನಿಯರೂ ಮಾತನಾ... ಡಿದರು. ವಿದ್ಯಾರ್ಥಿನಿಯರ ಬೇಡಿಕೆಗ... "ನ್ಯಜವಾದದ್ದು, ಒಪ್ಪಿಕೊಳ್ಳಬೇಕಾದ್ದು" ಎಂ... ಮನವಿ ಪತ್ರವನ್ನು ಸ್ವೀಕರಿಸುತ್ತಾ ಉಪರಾಜ್ಯಪಾ... ಲರು ಹೇಳಿದರೂ ನಿರ್ದಿಷ್ಟ ಸಮಯದೊಳ... ಕ್ರಮಕ್ಕೆಗೊಳ್ಳುವ ಭರವಸೆಯನ್ನೇನೂ ಅವ... ನೀಡಲಿಲ್ಲ. ನಂತರ ಸೆಪ್ಟೆಂಬರ್ 18 ರಂದು ... ಮತ್ತೆ ಸಭೆ ಸೇರಿ ಲೈಂಗಿಕ ಹಲ್ಲೆಗಳ ವಿರು... ಹೋರಾಟ ಹಾಗೂ ದಿಲ್ಲಿ ನಗರವನ್ನು ಸ್ತ್ರೀ... ಯರು ಹಾಗೂ ಹೆಣ್ಣು ಮಕ್ಕಳು ಸುರಕ್ಷಿತವಾ... ಬದುಕಬಲ್ಲ ಪ್ರದೇಶವನ್ನಾಗಿ ಮಾಡುವ ಬ... ಮುಂದಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾ... ಗುವುದು ಎಂದು ಜನವಾದಿ ಮಹಿಳಾ ಸಮಿ... ಹೇಳಿದೆ.

ರಾಜ್ಯದಲ್ಲಿ ಭಾರತ್ ಬಂದ್......

ಪುಟ 3ರಿಂದ

ಈ ಬಂದ್‌ಗೆ ಸಹಕಾರ ನೀಡಿದ ಎಲ್ಲಾ ಸಾರ್ವಜನಿಕರಿಗೂ ವ್ಯಾಪಾರಸ್ಥರಿಗೂ, ಕಾರ್ಮಿಕ, ವಿದ್ಯಾರ್ಥಿ ಯುವಜನರಿಗೆ ಎಸ್.ಎಫ್.ಐನ ಮುಂಡಗೋಡ ಘಟಕದ ಕಾರ್ಯದರ್ಶಿ ಯುವರಾಜ ಕಂಬಾಳಿಮಠ, ಹಾಗೂ ಯುವ ಜನತಾದಳದಿಂದ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ತುಮಿನ್ಕಟ್ಟಿ: ಭಾರತ್ ಬಂದ್ ಯಶಸ್ವಿಯಾಗಿ ನಡೆಯಿತು. ಅಂದು ಕೈಮಗ್ಗ ನೇಕಾರರ ಕಾರ್ಮಿಕರ ಸಮನ್ವಯ ಸಮಿತಿಯ ಕಾರ್ಯಕರ್ತರು, ರೈತರು, ಕೂಲಿಕಾರರು ಅಲ್ಲಿನ ಓಣಿ ಓಣಿಯಲ್ಲಿ ಮೆರವಣಿಗೆ ನಡೆಸಿದರು. ಸಂಚಾರ ನಿಂತು, ಶಾಲಾ [illegible]ಲೇಜು ಮುಚ್ಚಿದವು.

[illegible] ನಡೆದ ಬಹಿರಂಗ ಸಭೆಯಲ್ಲಿ [illegible] ಸರಕಾರ ಹೊಸ [illegible] ಪರಿಣಾಮಗಳನ್ನು [illegible] ಗಿಯವರು ವಿವರಿಸುತ್ತಾ ನೇಕಾರರಿಗೆ ಹೇಗೆ ಈ ಹೊಸ ಆರ್ಥಿಕ ನೀತಿ ಮಾರಕವಾಗುತ್ತದೆ ಎಂದು ವಿವರಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ರಾಮಪ್ಪ ಶೇಪೂರ ವಹಿಸಿದ್ದರು.

ಕೋಲಾರ : ಇಡೀ ಜಿಲ್ಲೆಯಾದ್ಯಂತ ಭಾರತ್ ಬಂದ್ ಕರೆಗೆ ಅದ್ಭುತ ಸ್ಪಂದನೆ ದೊರೆತಿದೆ. ಜಿಲ್ಲೆಯ ಎಲ್ಲಾ 11 ತಾಲೂಕುಗಳು ಈ ಭಾರತ್ ಬಂದ್‌ನಲ್ಲಿ ಭಾಗವಹಿಸಿ ಸಂಚಾರವನ್ನು ಅಸ್ತವ್ಯಸ್ತಗೊಳಿಸಿ, ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ, ಶಾಲಾ ಕಾಲೇಜುಗಳನ್ನು ಬಂದ್ ಮಾಡಲಾಗಿತ್ತು. ಜಿಲ್ಲೆಯ ಬಹುತೇಕ ಹಳ್ಳಿಗಳೂ ಈ ಬಂದ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಶಾಂತಿಯುತವಾಗಿ ಭಾರತ್ ಬಂದನ್ನು ಜಿಲ್ಲೆಯ 15 ಸಾವಿರಕ್ಕೂ ಹೆಚ್ಚು ಜನ ಈ ಸರಕಾರದ ಆರ್ಥಿಕ ನೀತಿಗೆ ತಮ್ಮ ವಿ[illegible]ಅತೃಪ್ತಿಯನ್ನು ಹೊರ ಹಾಕಿದ್ದಾರೆ. ಕೆ.ಜಿ.ಎಫ್‌ನ ಬಿ.ಇ.ಎಂ.ಎಲ್.ನಲ್ಲಿ ಕಾರ್ಮಿಕರು ಕೆಲಸಕ್ಕೆ ಹಾಜರಾಗದೆ ಬಂದ್‌ನಲ್ಲಿ ಪಾಲ್ಗೊಂಡರು. ಬಿಜಿಎಂಎಲ್‌ನಲ್ಲಿ ಶೇ. 80 ರಷ್ಟು ಕಾರ್ಮಿಕರು ಬಂದ್‌ನಲ್ಲಿ ಪಾಲ್ಗೊಂಡು ಕೈಗಾರಿಕಾ ಮುಷ್ಕರಕ್ಕೆ ತಮ್ಮ ಬೆಂಬಲ ಸೂಚಿಸಿದರು. ಜಿಲ್ಲೆಯ ಬಹುತೇಕ ಶಾಲಾ ಕಾಲೇಜುಗಳು ಮುಚ್ಚಿದ್ದವು. ಸಂಚಾರ ವ್ಯವಸ್ಥೆ ನಿಲುಗಡೆಯಾಗಿತ್ತು. ಸೆಪ್ಟೆಂಬರ್ 8 ರಂದು ನಡೆಸಿದ ಮೆರವಣಿಗೆ ಬಂದನ್ನು ಆಚರಿಸಲು ಸಾರ್ವಜನಿಕರಿಗೆ ಮನವಿ ಮಾಡಲಾಯಿತು. ಸೆ. 9ರಂದು ಒಂದು ಮೆರವಣಿಗೆಯನ್ನು ನಡೆಸಿ ಬಂದ್ ಯಶಸ್ವಿಯಾಗಿ ಆಚರಿಸಿದರು.

ಕೋಲಾರ ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಯಶಸ್ವೀ ಬಂದ್ ಆಚರಿಸಲಾಗಿದೆ. ಇಲ್ಲಿನ ನಾಗರಿಕರು ಸಕ್ರಿಯವಾಗಿ ಪಾಲ್ಗೊಂಡಿದ್ದುದು ಒಂದು ವಿಶೇಷ ಎಂದು ಕೋಲಾರ ಜಿಲ್ಲಾ ಪಕ್ಷದ ಕಾರ್ಯದರ್ಶಿಯಾದ ಶ್ರೀ ರಾಮರೆಡ್ಡಿ "ಐಕ್ಯರಂಗ"ಕ್ಕೆ ತಿಳಿಸಿದ್ದಾರೆ.

ಸಿಂಧನೂರು : ಭಾರತ್ ಬಂದ್ ಕರೆಯನ್ನು ಮನ್ನಿಸಿ ನಗರದ ಎಲ್ಲಾ ವ್ಯಾಪಾರ ವಹಿವಾಟುಗಳು ಸ್ಥಗಿತಗೊಂಡವು. ಶಾಲಾ-ಕಾಲೇಜುಗಳು, ಬ್ಯಾಂಕ್‌ಗಳು, ನೌಕರರ ಕಾರ್ಯಾಲಯ (ವಿಮಾ) ಮುಚ್ಚಿದ್ದವು. ಬಸ್ಸುಗಳು ರಸ್ತೆಯಲ್ಲಿ ಸಂಚರಿಸಲಿಲ್ಲ. ಸಣ್ಣ-ಪುಟ್ಟ ವಹಿವಾಟುಗಳ ಸಮೇತವಾಗಿ ಪೂರ್ತಿಯಾಗಿ ಬಂದ್‌ನಲ್ಲಿ ಭಾಗವಹಿಸಿದ್ದವು. ಚಿತ್ರಮಂದಿರಗಳು ಮತ್ತು ರೈಸ್ ಮಿಲ್‌ಗಳೂ ಸಹಿತ ಸಂಪೂರ್ಣವಾಗಿ ಬಂದಾಗಿದ್ದವು.

ಭಾರತ್ ಬಂದ್‌ಗೆ ಪೂರ್ವಭಾವಿಯಾಗಿ 10 ಸಾವಿರ ಕರಪತ್ರಗಳನ್ನು ಮುದ್ರಿಸಲಾಗಿತ್ತು. ಸೆಪ್ಟೆಂಬರ್ 9, 1993ರ ರಾತ್ರಿ 7-30ಕ್ಕೆ ಪಂಜಿನ ಮೆರವಣಿಗೆಯನ್ನು ಮಾಡಲಾಯಿತು. ಪಂಜಿನ ಮೆರವಣಿಗೆಯ ನಂತರ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಮುಖಂಡರಾದ ಕಾಂ. ಜಿ.ಎನ್. ನಾಗರಾಜ್ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸೆಪ್ಟೆಂಬರ್ 8, 1993 ರಂದು ಪುರಸಭೆಯ ಅಧ್ಯಕ್ಷರಾದ ಕೆ. ನಾಗಪ್ಪ, ಜನತಾದಳದ ಅಧ್ಯಕ್ಷರಾದ ಕನ್ನಾರಿ ದೊಡ್ಡನಗೌಡರ ಹಾಗೂ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯಾದ ಕಾಂ. ಬಿ. ಲಿಂಗಪ್ಪ ಇವರ ನೇತೃತ್ವದ... ಬಂದ್ ಮಾಡಲು ವಿನಂತಿಸಿ ಪಾದಯಾ... ಯನ್ನು ಕೈಗೊಳ್ಳಲಾಯಿತು.

ಬಂದ್‌ನ್ನು ಯಶಸ್ವಿಗೊಳಿಸಿದ ನ... ರದ ವ್ಯಾಪಾರಸ್ಥರು, ನಾಗರಿಕರು, ವಿದ್ಯಾ... ಯುವಜನರಿಗೆ, ಜನತಾದಳದ ಅ... ರಾದ ದೊಡ್ಡನಗೌಡರು, ಹಾಗೂ ಯು... ಜನತಾದಳದ ಖಲಿಗಣನಾಥ ಖ... ಮಠ, ಪುರಸಭಾಧ್ಯಕ್ಷ ಕೆ.ನಾಗಪ್ಪ, ಸಿಐ... ಯುನ ಶೇಷಾದ್ರಿ, ಎಲ್.ಐ.ಸಿ.ಯ ಸು... ಮಣ್ಯಂ, ದೇಶಪಾಂಡೆ, ಕೆಎಸ್.ಆರ್... ಸಿ. ಸ್ಟಾಫ್ ಅಂಡ್ ವರ್ಕರ್ಸ್ ಯು... ಯನ್ನಿನ ಶಾಂತಮೂರ್ತಿ. ಎಸ್.ಎಫ್.ಐ... ಚಿದಾನಂದ ಡಿ.ವೈ.ಎಫ್.ಐನ ಸುಭಾ... ಟೇಲರ್, ಜನವಾದಿ ಮಹಿಳಾ ಸಂಘ... ನೆಯ ಗಂಗೂಬಾಯಿ, ಸಮುದಾಯದ... ಬಸವರಾಜ್, ಇವರುಗಳು ಅಭಿನಂದಿಸಿ... ದ್ದಾರೆ. ನಾಗರಿಕರು ಯಶಸ್ವಿಗೊಳಿಸಿದ ಭಾರತ್ ಬಂದ್ ಪ್ರಜಾಸತ್ತಾತ್ಮಕ ಮ... ಶಾಂತಿ ಕೋಮು ಸೌಹಾರ್ದತೆಗಳ ಮೇ... ಗೈಯನ್ನು ಎತ್ತಿ ತೋರಿಸುತ್ತದೆ.



ಪ್ಯಾಲೆಸ್ತೀನ್ ವಿಮೋಚನಾ ಸಂಘಟನೆ ಮತ್ತು ಇಸ್ರೇಲ್ ನಡುವೆ ಗುಪ್ತ ಮಾತುಕತೆಗಳ ಫಲವಾಗಿ ಪರಸ್ಪರ ಮಾನ್ಯತೆ ನೀಡುವ ಹಾಗೂ ಪ್ಯಾಲೆಸ್ತೀನ್‌ರಿಗೆ ಸೀಮಿತ ಸ್ವಯಮಾಡಳಿತ ಬಗ್ಗೆ ಒಪ್ಪಂದೆ. ಪಾಶ್ಚಿಮಾತ್ಯ ಸುದ್ದಿ ಮಾಧ್ಯಮಗಳು ಇದನ್ನು 'ಚಾರಿತ್ರಿಕ', 'ಮಧ್ಯ ಏಶ್ಯಾದಲ್ಲಿ ಶಾಂತಿಯ ಹರಿಕಾರ' ಎಂದು ಹಾಡಿ ಹೊಗಳುತ್ತಿದ್ದರೆ ಪ್ಯಾಲೆಸ್ತೀನ್ ವಿಮೋಚನಾ ಸಂಘಟನೆ (ಪಿ.ಎಲ್.ಓ) ಯ ಒಳಗೆ ಇದಕ್ಕೆ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. 'ಇಸ್ರೇಲ್‌ಗೆ ಪ್ಯಾಲೆಸ್ತೀನ್ ಸ್ವಾತಂತ್ರ್ಯದ ಪರಿಕಲ್ಪನೆಯು ಶರಣಾಗತಿ' ಎಂದು ಟೀಕಾಕಾರರು ವರ್ಣಿಸಿದ್ದಾರೆ.

ಚೀಣಾದ ಸಾಗಾಣಿಕೆ ಹಡಗೊಂದನ್ನು ಅದು ರಾಸಾಯನಿಕ ಶಸ್ತ್ರಾಸ್ತ್ರಕ್ಕೆ ಬೇಕಾದ ಸಾಮಗ್ರಿಗಳನ್ನು ಇರಾನ್‌ಗೆ ಒಯ್ಯುತ್ತಿದೆ ಎಂಬ ಆಪಾದನೆ ಮೇಲೆ ಹಡಗುಗಳು ಹಾಗೂ ವಿಮಾನಗಳು 6 ವಾರಗಳ ಕಾಲ ಅದನ್ನು ಹಿಂಬಾಲಿಸಿದವು. ಅದರ ಸುಗಮದಾರಿಗೆ ಅಡ್ಡಗಾಲು ಹಾಕಿದವು. ಅಮೇರಿಕದ ಒತ್ತಾಯದ ಮೇರೆಗೆ ಪರೀಕ್ಷೆ ನಡೆಸಿದಾಗ ಅಂತಹ ಯಾವುದೇ ರಾಸಾಯನಿಕಗಳಿಲ್ಲದೆ ಅಮೇರಿಕಕ್ಕೆ ತೀವ್ರ ಮುಖಭಂಗವಾಗಿದೆ. ಈ ಹೇಯಕೃತ್ಯದ ವಿರುದ್ಧ ತೀವ್ರವಾಗಿ ಪ್ರತಿಭಟಿಸಿ ಅಮೇರಿಕ ಈ ಬಗ್ಗೆ ಕ್ಷಮಾಪಣೆ ಕೋರಬೇಕು ಹಾಗೂ 1.3 ಕೋಟಿ ಡಾಲರು ಪರಿಹಾರ ಕೊಡಬೇಕೆಂದು ಚೀಣಾ ಒತ್ತಾಯಿಸಿದೆ.

ಸೋಮಾಲಿಯಾ ದಲ್ಲಿ ಅಮೇರಿಕನ್ ಪಡೆಗಳು ತಮ್ಮ ಶಾಂತಿಭಂಗ ಕಾರ್ಯಕ್ರಮ ಮುಂದುವರೆಸಿವೆ. ಅಮೇರಿಕನ್ ಹೆಲಿಕಾಪ್ಟರುಗಳು ಸೋಮಾಲಿಯಾ ನಾಗರಿಕರ ಗುಂಪಿನ ಮೇಲೆ ನಡೆಸಿದ ಗುಂಡುದಾಳಿಯಲ್ಲಿ ಕನಿಷ್ಠ 150 ಜನ ಸತ್ತಿದ್ದಾರೆ. ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಯ ಹೆಸರಿನಲ್ಲಿ ಈ ನರಮೇಧದ ಬಗ್ಗೆ ಅಮೇರಿಕದ ಒಳಗೆ ಜನತೆ ಮಾತ್ರವಲ್ಲ ಹಲವಾರು ಸೆನೆಟ್ ಸದಸ್ಯರು ಆತಂಕ, ಕಳವಳ ವ್ಯಕ್ತಪಡಿಸಿದ್ದಾರೆ.

ಪಿ.ಎಲ್.ಓ- ಇಸ್ರೇಲ್ ಒಪ್ಪಂದ

ಸ್ವತಂತ್ರ ಪ್ಯಾಲೆಸ್ತೀನತ್ತ ಮೊದಲ ಹೆಜ್ಜೆಯೋ?

-- ಶರತ್ ಚಂದ್ರ

ಪ್ಯಾಲೆಸ್ತೀನ್ ವಿಮೋಚನಾ ಸಂಘಟನೆ (ಪಿ.ಎಲ್.ಓ) ಮತ್ತು ಇಸ್ರೇಲ್ ಸರಕಾರ ಶಾಂತಿ ಒಪ್ಪಂದಕ್ಕೆ ವಾಶಿಂಗಟನ್‌ನಲ್ಲಿ ಸಹಿ ಹಾಕಿದವು. ಪಿ.ಎಲ್.ಓ ಅಧ್ಯಕ್ಷ ಯಾಸೆಲ್ ಅರಾಫತ್ ಹಾಗೂ ಇಸ್ರೇಲ್ ಪ್ರಧಾನಿ ಮಂತ್ರಿ ರಬಿನ್ ಅವರ ಸಮಕ್ಷಮದಲ್ಲಿ, ಅನುಕ್ರಮವಾಗಿ ಪಿ.ಎಲ್.ಓನ ಮಹಮದ್ ಅಬ್ಬಾಸ್ ಹಾಗೂ ಇಸ್ರೇಲ್ ವಿದೇಶ ಮಂತ್ರಿ ಶಿಮಾನ್ ಪೆರೆಸ್ ಒಪ್ಪಂದಕ್ಕೆ ಸಹಿ ಹಾಕಿದರು. ಒಪ್ಪಂದಕ್ಕೆ ಸಹಿ ಹಾಕುವ ಸಮಾರಂಭ ಅಮೇರಿಕದ ರಾಜಧಾನಿ ವಾಶಿಂಗಟ್‌ನಲ್ಲಿ ನಡೆಯಿತು. ಈ ಒಪ್ಪಂದ ಸುಮಾರು 50 ವರ್ಷಗಳ ಪ್ಯಾಲೆಸ್ತೀನ್-ಇಸ್ರೇಲ್ ಸಂಘರ್ಷ ಕೊನೆಗೊಳ್ಳಬಹುದೆಂಬ ಆಸೆ (ಭ್ರಮೆಯೋ?) ಮೂಡಿಸಿದೆ. ಇದು ಮಧ್ಯ ಏಶ್ಯಾದಲ್ಲಿ ಮಾತ್ರವಲ್ಲ ಜಗತ್ತಿನಲ್ಲೇ ಅತೀ ದೀರ್ಘವಾದ ಸಂಘರ್ಷವೆನ್ನಬಹುದು.

ಇಸ್ರೇಲ್ ಹಾಗೂ ಪಿ.ಎಲ್.ಓ ಗುಪ್ತವಾಗಿ ನಾರ್ವೆಯ ಹೋಟೆಲ್ ಒಂದರಲ್ಲಿ ಹಲವು ತಿಂಗಳುಗಳಿಂದ ನಡೆಸಿದ ಮಾತುಕತೆಗಳ ಫಲ ಈ ಒಪ್ಪಂದ ಪ್ಯಾಲೆಸ್ತೀನ್ ಜನರ ಸ್ವಾತಂತ್ರ್ಯದ ಕನಸು ನನಸು ಮಾಡುವತ್ತ ದೊಡ್ಡ ಹೆಜ್ಜೆ ಎಂದೆಲ್ಲಾ ಪಾಶ್ಚಿಮಾತ್ಯ ಸುದ್ದಿಮಾಧ್ಯಮಗಳು ಹೇಳುತ್ತಿವೆ. ಒಪ್ಪಂದದ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

- ಗಾಜಾಪಟ್ಟಿ ಹಾಗೂ ಜೆರಿಕೊ ಎಂಬ ಪಶ್ಚಿಮ ದಂಡೆಯ ಪಟ್ಟಣದಲ್ಲಿ ಪ್ಯಾಲೆಸ್ತೀನರಿಗೆ ಸೀಮಿತ ಸ್ವಯಮಾಡಳಿತ. ಕಾನೂನು ಮತ್ತು ವ್ಯವಸ್ಥೆ ಪ್ಯಾಲೆಸ್ತೀನ್ ಪೋಲೀಸ್‌ಗೆ.
- ಈ ಭಾಗದಲ್ಲಿ ಮುಖ್ಯ ಜನಸಾಂದ್ರ ಪ್ರದೇಶಗಳಿಂದ ಇಸ್ರೇಲಿ ಸೈನ್ಯ ಹೊರಹೋಗುವುದು. ಆದರೆ ಈ ಸ್ವಯಮಾಡಳಿತ ಪ್ರದೇಶದ ಮುಖ್ಯ ಪ್ರದೇಶ ಸ್ಥಾನಗಳನ್ನು ಇಸ್ರೇಲಿ ಸೈನ್ಯ ಕಾಯುವುದು.
- ಯೆಹೂದಿಗಳು ನೆಲೆಸಿರುವ ಪ್ರದೇಶಗಳನ್ನು ಇಸ್ರೇಲಿ ಸೈನ್ಯ ಕಾಯುವುದು.
- ಮೂರು ವರ್ಷದಿಂದ ಐದು ವರ್ಷದೊಳಗೆ ಉಳಿದ ಇಸ್ರೇಲ್ ಆಕ್ರಮಿತ ಪ್ರದೇಶಗಳ ಭವಿಷ್ಯದ ಬಗ್ಗೆ ಮಾತುಕತೆ ನಡೆಸುವುದು.

ಈ ಒಪ್ಪಂದದ ಪ್ರಕಾರ ಪ್ಯಾಲೆಸ್ತೀನ್ ಸ್ವಯಮಾಡಳತಕ್ಕೆ ಬರುವ ಪ್ರದೇಶಗಳು ಒಟ್ಟು ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ಶೇಕಡಾ 5 ರಷ್ಟು ಮಾತ್ರ ಎಂದು ಒಪ್ಪಂದದ ವಿರೋಧಿಗಳು ನೆನಪಿಸುತ್ತಾರೆ.

ಅಲ್ಲದೆ ಉಳಿದ ಶೇಕಡಾ 95 ಆಕ್ರಮಿತ ಪ್ರದೇಶಗಳು ಪ್ಯಾಲೆಸ್ತೀನ್ ಸ್ವಯಂಮಾಡಳಿತಕ್ಕೊಳಪಡುತ್ತವೆ ಎಂಬ ಗ್ಯಾರಂಟಿ ಇಲ್ಲ. ಈ ಬಗ್ಗೆ ಮಾತುಕತೆಗಳ ಬಗ್ಗೆ ಮಾತ್ರ ಆಶ್ವಾಸನೆ ಇದೆ. ಅತ್ಯಂತ ವಿವಾದಾಸ್ಪದ ವಿಷಯವಾದ ಜೆರೊಸಲೆಂ ಬಗ್ಗೆ ಸುದ್ದಿಯೇ ಇಲ್ಲ. 1967 ರ ಅರಬ್-ಇಸ್ರೇಲಿ ಯುದ್ಧದಲ್ಲಿ ನಿರಾಶ್ರಿತರಾಗಿ ನೆರೆದೇಶಗಳಿಗೆ ಹೋದ 2 ಲಕ್ಷಕ್ಕೂ ಹೆಚ್ಚು ಪ್ಯಾಲೆಸ್ತೀನ್ ನಿರಾಶ್ರಿತರು ತಾಯ್ನಾಡಿಗೆ ಮರಳುವ ಬಗೆಗೂ ಯಾವುದೇ ಸುದ್ದಿ ಇಲ್ಲ. ಪ್ಯಾಲೆಸ್ತೀನ್ ಸಮಸ್ಯೆ ಪರಿಹಾರಕ್ಕೆ ವಿಶ್ವಸಂಸ್ಥೆ ಕೈಗೊಂಡ ನಿರ್ಣಯ 242 ಮತ್ತು 338ಗಳ ಜಾರಿ ಬಗ್ಗೆ ಚಕಾರವಿಲ್ಲ.

ಆದ್ದರಿಂದ ಈ ಒಪ್ಪಂದಕ್ಕೆ ಪಿ.ಎಲ್.ಓನ ಒಳಗಿನಿಂದಲೇ ತೀವ್ರ ವಿರೋಧ ವ್ಯಕ್ತಪಟ್ಟಿದೆ. ಪಿ.ಎಲ್.ಓ ದ ಕಾರ್ಯಕಾರಿ ಸಮಿತಿಯಲ್ಲಿ ಅಲ್ಪ ಬಹುಮತದಿಂದ ಒಪ್ಪಂದಕ್ಕೆ ಅಸ್ತು ಸಿಕ್ಕಿತು. ಈ ನಿರ್ಣಯದ ವಿರುದ್ಧ ಪ್ರತಿಭಟಿಸಿ 5 ಜನ ಕಾರ್ಯಕಾರಿ ಸಮಿತಿ ಸದಸ್ಯರು ರಾಜೀನಾಮೆ ಕೊಟ್ಟಿದ್ದಾರೆ. ಪಿ.ಎಲ್.ಓದ ಭಾಗವಾಗಿರುವ ಪಿಎಫ್‌ಎಲ್‌ಪಿ ಎಂಬ ಎಡಪಂಥೀಯ ಬಣ ಈ ಒಪ್ಪಂದವನ್ನು ಟೀಕಿಸಿದೆ. ಗಾಜಾಪಟ್ಟಿ ಹಾಗೂ ಪಶ್ಚಿಮ ದಂಡೆಯ ಜೆರಿಕೊ ಪ್ರದೇಶದಲ್ಲೇ ಹಲವಾರು ಪ್ರತಿಭಟನಾ ಪ್ರದರ್ಶನಗಳು ನಡೆದಿವೆ. ಜೋರ್ಡಾನ್, ಲೆಬನಾನ್ ಪ್ಯಾಲೆಸ್ತೀನ್‌ನ ನಿರಾಶ್ರಿತ ಕ್ಯಾಂಪ್‌ಗಳಲ್ಲಂತೂ ಸಾವಿರಾರು ಪ್ಯಾಲೆಸ್ತೀನಿಯನ್ನರು ಪ್ರದರ್ಶನ ನಡೆಸಿದರು. ಒಪ್ಪಂದವನ್ನು 'ಹಾಮಾ' ಎಂಬ ಪ್ಯಾಲೆಸ್ತೀನಿಯನ್ ಮುಸ್ಲಿಂ ಮೂಲಭೂತವಾದಿ ಗುಂಪುಗಳು ಹಾಗೂ ಇಸ್ರೇಲ್ ಬಲಪಂಥೀಯ ಗುಂಪುಗಳು ವಿರೋಧಿಸುತ್ತಿವೆ.

'ಯಿನ್-ಹೇ'

ಅಮೇರಿಕನ್ ಉದ್ಧಟತನಕ್ಕೆ ಚೀನಾ ಪ್ರತಿಭಟನೆ

ಅಮೇರಿಕದ ಇತ್ತೀಚಿನ ಉದ್ಧಟತನದ ಬಗ್ಗೆ ಚೀನಾ ತೀವ್ರವಾಗಿ ಪ್ರತಿಭಟಿಸಿದೆ. ಸಂದರ್ಭ- ಚೀನಾದ ಹಡಗು 'ಯಿನ್ ಹೇ' ಇರಾನ್‌ಗೆ ರಾಸಾಯನಿಕ ಶಸ್ತ್ರಗಳನ್ನು ತಯಾರಿಸಲು ಬೇಕಾದ ರಾಸಾಯನಿಕಗಳನ್ನು ಸಾಗಿಸುತ್ತಿದೆ ಎಂದು ಅಮೇರಿಕನ್ ಬೇಹುಗಾರಿಕಾ ವರದಿಯ ಆಧಾರದ ಮೇಲೆ ಅಮೇರಿಕನ್ ಪಡೆಗಳು ಹಡಗನ್ನು ಹಿಂಬಾಲಿಸಿದ್ದು. ಈ ಆಧಾರದ ಮೇಲೆ ಅಮೇರಿಕ ಮಧ್ಯ ಏಶ್ಯಾ ಕೊಲ್ಲಿಯಲ್ಲಿ ಎಲ್ಲಾ ದೇಶಗಳು ಆ ಹಡಗಿಗೆ ಯಾವುದೇ ಬಂದರಿನಲ್ಲಿ ತಂಗಲು ಅನುಮತಿ ನೀಡಲಿಲ್ಲ. ಇದರಿಂದ ಆರು ವಾರಗಳ ಕಾಲ 'ಯಿನ್-ಹೇ'ಕೊಲ್ಲಿಯಲ್ಲಿ ಸುತ್ತದೇಕಾಯಿತು. ಹಡಗಿನ ಸಿಬ್ಬಂದಿ ಬಾರಿ ಅಪಾಯಕ್ಕೆ ತುತ್ತಾಗಿದ್ದರು. ಚೀನಾದ ಹಡಗು ಕಂಪನಿಗೆ ಭಾರಿ ನಷ್ಟವಾಯಿತು.

ಚೀನಾದ ಪ್ರತಿಭಟನೆ, ಒತ್ತಾಯದ ಮೇರೆಗೆ ಕೊನೆಗೆ ಅದನ್ನು ಸೌದಿ ಅರೇಬಿಯಾದ ಬಂದರೊಂದರಲ್ಲಿ ತಂಗಲು ಅನುಮತಿ ನೀಡಲಾಯಿತು. ಸೌದಿ ಅರೇಬಿಯಾದ ಪರೀಕ್ಷಕರು ಅಮೇರಿಕನ್ ವೀಕ್ಷಕರ ಸಮ್ಮುಖದಲ್ಲಿ ಇಡೀ ಹಡಗಿನ ತಪಾಸಣೆ ನಡೆಸಿವರು. ಅಮೇರಿಕನ್ ಬೇಹುಗಾರಿಕೆ ವರದಿಯ ಪ್ರಕಾರ ನಿಷೇಧಿತ ರಾಸಾಯನಿಕಗವೆಯೇ ಎಂಬುದನ್ನು ಪರೀಕ್ಷಿಸಿದರು. ಅವರಿಗೆ ಏನೂ ಸಿಗಲಿಲ್ಲ. ಈ ಹಡಗು ಕುವೈತ್‌ಗೆ ಹೋಗುತ್ತಿದ್ದುದು ಇರಾನ್‌ಗಲ್ಲ ಎಂದೂ ಚೀನಾ ತಿಳಿಸಿದೆ. ಈ ಪರೀಕ್ಷಣೆಗೆ 10 ದಿನಗಳು ತಗುಲಿತು. ಹಡಗಿನ ಎಲ್ಲಾ 700 ಪೆಟ್ಟಿಗೆಗಳನ್ನು ತೆರೆಯಲಾಯಿತು. ಆಮೇಲೆ ಹಡಗನ್ನು ಮುಂದೆ ಹೋಗಲು ಬಿಡಲಾಯಿತು.

ಈ ಉದ್ಧಟತನದ ವಿರುದ್ಧ ಚೀನಾ ತೀವ್ರವಾಗಿ ಪ್ರತಿಭಟಿಸಿದೆ ಹಾಗೂ 13 ದಶಲಕ್ಷ ಡಾಲರುಗಳ ಪರಿಹಾರ ಕೇಳಿದೆ. ಅರೆಬರೆ ತಪ್ಪು ತಪ್ಪು ಬೇಹುಗಾರಿಕಾ ವರದಿಯ ಆಧಾರದ ಮೇಲೆ ಬೇರೆ ಬೇರೆ ದೇಶಗಳ ಸಾರ್ವಭೌಮತ್ವವನ್ನು ಉಲ್ಲಂಘಿಸುವ ವಿಶ್ವ ಪೋಲೀಸ್ ನೀತಿ ಬಿಡಬೇಕು. ಇಂತಹ ಘಟನೆಗಳು ಪುನಃ ಆಗದಂತೆ ನೋಡಿಕೊಳ್ಳಬೇಕು ಎಚ್ಚರಿಕೆ ನೀಡಿದೆ.

ರಶ್ಯನ್ ಉಪಾಧ್ಯಕ್ಷ, ಉಪಪ್ರಧಾನಿ ವಜಾ

ಒಂದು ಸುಗ್ರೀವಾಜ್ಞೆಯ ಮೂಲಕ ರಶ್ಯನ್ ಅಧ್ಯಕ್ಷ ಬೋರಿಸ್ ಯೆಲ್ಟ್ಸಿನ್ ತಮ್ಮ ಉಪಾಧ್ಯಕ್ಷ ಅಲೆಕ್ಸಾಂಡರ್ ರುತ್‌ಸ್ಕೊಯ್ ಹಾಗೂ ಉಪಪ್ರಧಾನಿ ವ್ಲಾಡಿಮಿರ್ ಶುಮೆಕೊ ಅವರನ್ನು ವಜಾಮಾಡಿದ್ದಾರೆ. ಅವರ ಮೇಲೆ ತಾವು ಭ್ರಷ್ಟಚಾರದ ಆಪಾದನೆಗಳನ್ನು ಹೊರಿಸಲಾಗಿದೆ. ಇವರಿಬ್ಬರಿಗೂ ಯೆಲ್ಟ್ಸಿನ್ ಲಂಗುಲಂಗಾಮಿಲ್ಲದ ಆರ್ಥಿಕ ಧೋರಣೆಗೆ ಪ್ರತಿರೋಧ ಒಡ್ಡಿದ್ದರು. ಅದಕ್ಕೆ ಈ ಪ್ರತಿಫಲ. ತಮ್ಮ ರಾಜಕೀಯ ವಿರೋಧಿಗಳನ್ನು ಮಟ್ಟಹಾಕಲು ಯೆಲ್ಟ್ಸಿನ್‌ರ ಈ ಹೊಸ ರಾಜಕೀಯ.

ಸುದ್ದಿಗಳು

ಶಿಕ್ಷಕರಿಗಾಗಿ ಆಗ್ರಹ

ಬಳ್ಳಾರಿ ತಾಲೂಕಿನ ಕುರುಗೋಡು ಗ್ರಾಮದ ಪದವಿ ಪೂರ್ವ ಕಾಲೇಜ್‌ನಲ್ಲಿ ಶಾಲೆಯು ಪ್ರಾರಂಭವಾಗಿ 3 ತಿಂಗಳು ಕಳೆದರೂ, ಇದುವರೆವಿಗೂ ಶಿಕ್ಷಕರೇ ಬಂದಿಲ್ಲಾ. ಕೂಡಲೇ ಸರ್ಕಾರವು ಮಧ್ಯಪ್ರವೇಶಮಾಡಿ ವಿದ್ಯಾರ್ಥಿಗಳಿಗೆ, ಶಿಕ್ಷಕರನ್ನು ಒದಗಿಸಬೇಕೆಂದು ಸಿಪಿಐ(ಎಂ) ಕಾರ್ಯದರ್ಶಿ ವಿ.ಎಸ್. ಶಿವಶಂಕರ್ ಸರ್ಕಾರಕ್ಕೆ ಮನವಿ ಸಲ್ಲಿಸಿ ಆಗ್ರಹ ಪಡಿಸಿದ್ದಾರೆ.

ಕನಿಷ್ಠ ಸೌಲಭ್ಯಕ್ಕಾಗಿ ಸರದಿ ಉಪವಾಸ ಸತ್ಯಾಗ್ರಹ

ಹೊನಗನಹಳ್ಳಿ : ಬಿಜಾಪೂರ ತಾಲೂಕಿನ ಹೊನಗನಹಳ್ಳಿಯ ಡಿ.ವೈ.ಎಫ್.ಐ ಹಾಗೂ ಕರ್ನಾಟಿಕ ಪ್ರಾಂತ ರೈತ ಸಂಘಟನೆಗಳು ಹೊನಗನಹಳ್ಳಿ ಗ್ರಾಮಕ್ಕೆ ನಾಗರೀಕರ ಕನಿಷ್ಠ ಸೌಲಭ್ಯಗಳಿಗಾಗಿ ಒತ್ತಾಯಿಸಿ ಆಗಸ್ಟ್ 14 ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ. ಈ ಗ್ರಾಮದ ಬೇಡಿಕೆಗಳನ್ನು ಶ್ರೀ ಷಣ್ಮುಖ ಒಡೆಯರ ಓದಿ ಹೇಳಿದರು. ಮಾನ್ಯ ತಹಶೀಲ್ದಾರರಿಗೆ ಶ್ರೀ ರೇವಣ್ಣ ಸಿದ್ದಪ್ಪಾ ಗುಳೇಕಾರ ಹಾಗೂ ಲಾಲ್ ಸಾಬ ನದಾಫರು ಮನವಿ ಪತ್ರವನ್ನು ತಹಶೀಲದಾರರಿಗೆ ಅರ್ಪಿಸಿದರು.

ಮಾನ್ಯ ತಹಶೀಲದಾರರು ಬೇಡಿಕೆಗಳನ್ನು ಗಮನಿಸಿ ಇವು ನಿಜಕ್ಕೂ ಈ ಗ್ರಾಮಕ್ಕೆ ಅತ್ಯಾವಶ್ಯವಾಗಿ ಬೇಕಾದ ಬೇಡಿಕೆಗಳಾಗಿರುತ್ತವೆ. ಈಗಾಗಲೇ ಈ ಗ್ರಾಮಕ್ಕೆ ಇವು ಸಿಗಬೇಕಾಗಿತ್ತು. ಆದರೆ ಇವತ್ತು ನಮ್ಮ ಗಮನಕ್ಕೆ ತಂದಿದ್ದು ಬಹಳ ಒಳ್ಳೆಯದು. ನಾನು ಈ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟವರ ಗಮನಕ್ಕೆ ತರುತ್ತೇನೆ ಮತ್ತು ನನ್ನ ವ್ಯಾಪ್ತಿಯಲ್ಲಿ ಬರುವ ಬೇಡಿಕೆಗಳನ್ನು ಕೂಡಲೇ ಈಡೇರಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟರು. ಸತ್ಯಾಗ್ರಹಿಗಳಿಗೆ ಲಿಂಬೆ ಹಣ್ಣಿನ ಶರಬತ್ ಕುಡಿಸಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುವಂತೆ ಕೇಳಿಕೊಂಡರು. ಅವರ ಕೋರಿಕೆಯಂತೆ ಸತ್ಯಾಗ್ರಹಿಗಳು ಮಾನ್ಯರ ಆಶ್ವಾಸನೆಯನ್ನು ಸ್ವೀಕರಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದವರು ಸತ್ಯಾಗ್ರಹವನ್ನು ನಾಲ್ಕನೇ ದಿವಸದಲ್ಲಿ ಅಂತ್ಯಗೊಳಿಸಿ ಸೆಪ್ಟೆಂಬರ್ 8 ರೊಳಗೆ ಬೇಡಿಕೆಗಳು ಈಡೇರದಿದ್ದರೆ ಸೆಪ್ಟೆಂಬರ್ 9 ರಂದು ಒಂದು ದಿನ ರೈಲು ತಡೆ ಮಾಡುವುದಾಗಿ ಹೇಳಿ ತಮ್ಮ ಸತ್ಯಾಗ್ರಹವನ್ನು ಹಿಂದೆ ತೆಗೆದುಕೊಂಡರು.

ಉ.ಕ. ದಲ್ಲಿ ಮೆಡಿಸಿನ್ ಮತ್ತು ಕೆಮಿಕಲ್ಸ್ ಕಾರ್ಮಿಕರ ಸಂಘಟನೆ ಉದ್ಘಾಟನೆ

ಭಟ್ಕಳ : ಉತ್ತರ ಕನ್ನಡ ಮೆಡಿಸನ್ ಮತ್ತು ಕೆಮಿಕಲ್ಸ್ ಕಾರ್ಮಿಕರ ಸಂಘಟನೆ (ಸಿ.ಐ.ಟಿ.ಯು ಸಂಯೋಜಿತ) ಉದ್ಘಾಟನಾ ಸಮಾರಂಭ ಸ್ವಾತಂತ್ರೋತ್ಸವದ ದಿನದಂದು ಶಿರಾಲಿ ಆನಂದಾಶ್ರಮ ಚಾಲಕ ಮಂದಿರದಲ್ಲಿ ಎಸ್.ಎಫ್.ಐ ರಾಜ್ಯ ಸಮಿತಿ ಸದಸ್ಯ ಸುಭಾಶ್ ಕೊಪ್ಪಿಕರ ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಯೂನಿಯನ್ ಅಧ್ಯಕ್ಷರೂ, ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿಯೂ ಆದ ಟಿ.ಎಸ್. ನಾಯ್ಕ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಶಂಕರ್ ಇವರು ಆಗಮಿಸಿ ಕಾರ್ಮಿಕ ಸಂಘಗಳ ಮಹತ್ವ ಅದರ ಧ್ಯೇಯ-ಧೋರಣೆ, ಕಾರ್ಯಕ್ರಮ ಸಂವಿಧಾನ ಮುಂತಾದ ವಿಷಯಗಳ ಕುರಿತು ವಿವರವಾಗಿ ತಿಳಿಸಿದರು.

ಇನ್ನೋರ್ವ ಮುಖ್ಯ ಅತಿಥಿ ಸ್ಥಳೀಯ ಯುವ ನ್ಯಾಯವಾದಿಗಳಾದ ಕೆ.ಎಚ್. ನಾಯ್ಕ ಯೂನಿಯನ್ ಮುಂದಿನ ದಿನಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲೆಂದು ಹಾರೈಸಿದರು.

ಪರಮೇಶ್ವರ್ ಭಟ್ ಕಾರ್ಯಕ್ರಮ ನಿರೂಪಿಸಿದರು. ಕೃಷ್ಣ ನಾಯ್ಕ ವಂದಿಸಿದರು. ಪಾಂಡುರಂಗ ಅತಿಥಿಗಳ ಪರಿಚಯ ಮಾಡಿಸಿಕೊಟ್ಟರು. ಎಂ.ಎಲ್. ನಾಯ್ಕ ಮತ್ತು ಜಯಂತ ನಾಯ್ಕ ಸಂದೋರ್ಭೋಚಿತವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ದೇವಡಿಗ ಲೆಕ್ಕಪತ್ರ ಇತರೇ ವಿವರಣೆಯನ್ನು ಸಭೆಗೆ ನೀಡಿದರು.

ಗಂಡೋರಿ ನಾಲಾ ನೀರಾವರಿ ಯೋಜನೆ ಒತ್ತಾಯಿಸಿ ಪಾದಯಾತ್ರೆ

ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ರಾಜಾಪೂರ ಗ್ರಾಮದ ಕರ್ನಾಟಕ ಪ್ರಾತ ರೈತ ಸಂಘದ ಘಟಕದ ಕಾರ್ಯಕರ್ತರು ಇತ್ತೀಚೆಗೆ ಗಂಡೋರಿ ನಾಲಾ ನೀರಾವರಿ ಯೋಜನೆಗೆ ಒತ್ತಾಯಿಸಿ ಪಾದಯಾತ್ರೆ ಕೈಗೊಂಡಿದ್ದರು. ಸುಮಾರು 15 ಹಳ್ಳಿಗಳಲ್ಲಿ ಸಂಚರಿಸಿ ನೀರಾವರಿ ಯೋಜನೆ ಬಗ್ಗೆ ಜನಜಾಗೃತಿ ಮಾಡುತ್ತಾ ಜನರನ್ನು ಸಂಘಟಿಸಿ ಮಹಾಗಾಂವದಲ್ಲಿ ನಡೆಯುವ ರೈತರ ಸಮಾವೇಶಕ್ಕೆ ಆಹ್ವಾನಿಸುತ್ತಾ ಮೂರು ದಿವಸಗಳ ನಂತರ ಮಹಾಗಾಂವ ಕ್ರಾಸ್ ತಲುಪಿದಾಗ ಭವ್ಯ ಸ್ವಾಗತದೊಂದಿಗೆ ಪಾದಯಾತ್ರೆಗಳನ್ನು ಸತ್ಕರಿಸಲಾಯಿತು. ಗ್ರಾಮ ರೈತ ಸಂಘದ ಮುಖಂಡ ಜಗನ್ನಾಥ ರಾವ್ ಪಾಟೀಲ ನೇತೃತ್ವದಲ್ಲಿ ವಯೋವೃದ್ಧ ರಾಯರೆಡ್ಡಿ ಕೌಳಸ, ಅಣ್ಣಾರಾವ್ ಪೆದ್ದಿ ಗಂಗಾರೆಡ್ಡಿ ಏಳ್ಳೆ, ಧೊಗಪ್ಪಾ ಪಸ್ತಪೂರ ಗೋವಿಂದ ರೆಡ್ಡಿ ತುಮಕುಂಟಿ ಮತ್ತು ಕುಪೇಂದ್ರ ಕಾಳಗಿ ಭಾಗವಹಿಸಿದ್ದರು. ಈ ಪಾದಯಾತ್ರೆಯ ಸಂಚಾಲನೆಯನ್ನು ಜಿಲ್ಲೆಯ ಯುವಜನ ಸಂಘಟನೆಯ ಸಂಚಾಲಕ ನಾಗೇಂದ್ರಪ್ಪಾ ಜೌರಾದಿ ಮಾಡಿದ್ದರು.

ಗಂಡೋರಿ ನೀರಾವರಿ ಯೋಜನೆಗೆ ಸರಕಾರದ ಆಶ್ವಾಸನೆ

ಗಂಡೋರಿ ನಾಲಾ ನೀರಾವರಿ ಯೋಜನೆ ಹೋರಾಟ ಸಮಿತಿಯ ಕರೆಯ ಮೇರೆಗೆ ಕೃಷ್ಣ ಕೊಳ್ಳದ ಎರಡು ಟಿ.ಎಂ.ಸಿ. ನೀರನ್ನು ಬಳಸಿಕೊಂಡು 20 ಸಾವಿರ ಎಕರೆ ನೀರಾವರಿಯಾಗುವ ಗಂಡೋರಿ ನಾಲಾ ನೀರಾವರಿ ಯೋಜನೆ ಮಂಜೂರಾತಿ ನೀಡಿ ಒಂದು ವರ್ಷವಾದರೂ ಕೆಲಸ ಪ್ರಾರಂಭವಾಗದಿರುವುದನ್ನು ಪ್ರತಿಭಟಿಸಿ ಯೋಜನಾ ಪ್ರದೇಶದ 200 ಕ್ಕೂ ಹೆಚ್ಚು ರೈತರು ಸಾಮೂಹಿಕವಾಗಿ ಸರಕಾರಕ್ಕೆ ಬೇಗನೆ ಕೆಲಸ ಪ್ರಾರಂಭಿಸಲು ಮನವಿ ಅರ್ಪಿಸಲಾಯಿತು.

ಕೃಷ್ಣಾ ವಲಯದ ಭೀಮ ಹರಿವು ಯೋಜನೆಯಿಂದ ಒಂದು ಲಕ್ಷ ಎಕರೆ, ಭೀಮಾ ಏತ ನೀರಾವರಿ ಯೋಜನೆಯಿಂದ 80 ಸಾವಿರ ಎಕರೆ, ಕಾಗಿನ ನೀರಾವರಿ ಯೋಜನೆಯಿಂದ 20 ಸಾವಿರ ಎಕರೆ ಗಂಡೋರಿ ನಾಲಾ ನೀರಾವರಿ ಯೋಜನೆಯಿಂದ 20 ಸಾವಿರ ಎಕರೆ, ಒಟ್ಟು ಗುಲ್ಬರ್ಗಾ ಜಿಲ್ಲೆಯಲ್ಲಿ ಎರಡು ಲಕ್ಷ ಇಪ್ಪತ್ತು ಸಾವಿರ ಎಕರೆ ನೀರಾವರಿಯಾಗುವ ಈ ನಾಲ್ಕು ಯೋಜನೆಗಳು ಇನ್ನೂ ಕೆಲಸವೇ ಪ್ರಾರಂಭವಾಗದಿರುವಾಗ ಕೃಷ್ಣಾ ವಲಯದಲ್ಲಿನ ಕರ್ನಾಟಕದ ಪಾಲಿನ ನೀರನ್ನು ಬಳಸಿಕೊಳ್ಳುತ್ತೇವೆ ಎಂಬ ಸರ್ಕಾರದ ಮಾತಿನ ಮೇಲೆ ಜನತೆಯ ವಿಶ್ವಾಸವಿಲ್ಲದಂತಾಗುತ್ತದೆ ಎಂದು ಹೋರಾಟ ಸಮಿತಿ ಹೇಳಿಕೆಯಲ್ಲಿ ತಿಳಿಸಿದೆ.

ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿರುವ ಗುಲ್ಬರ್ಗಾ ಜಿಲ್ಲೆಯನ್ನು ಬರಗಾಲದಿಂದ ತಪ್ಪಿಸಲು ಕೃಷಿಕೂಲಿಕಾರರಿಗೆ ಕೆಲಸ ಒದಗಿಸಲು ಜಿಲ್ಲೆಯ ನೀರಾವರಿ ಯೋಜನೆಗಳ ಕೆಲಸ ಮೊದಲು ಆರಂಭಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕೆಂದು ಹೋರಾಟ ಸಮಿತಿ ಅಭಿಪ್ರಾಯ ಪಟ್ಟಿದೆ.

ಮಾನ್ಯ ಮುಖ್ಯಮಂತ್ರಿಗಳು, ಮತ್ತು ಉಪ ಮುಖ್ಯಮಂತ್ರಿಗಳು ನಿಯೋಗದ ಜೊತೆಗೆ ಸೌಹಾರ್ದಯುತವಾಗಿ ಚರ್ಚಿಸಿ ಗಂಡೋರಿ ನಾಲಾ ನೀರಾವರಿ ಯೋಜನೆ ಕೆಲಸ ಬೇಗನೆ ಆರಂಭಿಸುವುದಾಗಿ ಭರವಸೆ ನೀಡಿದ್ದಾರೆ. ನಿಯೋಗದ ನೇತೃತ್ವವನ್ನು ಜನತಾದಳ ಮುಖಂಡರು ಹಾಗೂ ಮಾಜಿ ಸಚಿವರಾದ ಶ್ರೀ ವೈಜನಾಥ್ ಪಾಟೀಲರು ಕಮಲಾಪುರ ಮಾಜಿ ಶಾಸಕರಾದ ಸುಭಾಶ ಪಾಟೀಲರು, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಯಾದ ಕಾಂ. ಪಿ. ರಾಮಚಂದ್ರರಾವ್ ಸಿ.ಪಿ.ಐ(ಎಂ) ನಾಯಕರು ಹಾಗೂ ಕಾರ್ಮಿಕ ಮುಖಂಡರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಹಾಗೂ ಹೋರಾಟ ಸಮಿತಿ ಅಧ್ಯಕ್ಷರಾದ ಸಿರಿಕಂಠ ತದಕಲ್ ಹಾಗೂ ಕಾರ್ಯದರ್ಶಿಯಾದ ಮಾರುತಿ ಮಾನ್ಪಡೆ ಹಾಗೂ ಉಪಾಧ್ಯಕ್ಷರಾದ ರೇವಣ್ಣ ಸಿದ್ದಪ್ಪ ಮಾಸ್ತರೆ, ಮಲ್ಲಿಕಾರ್ಜುನ್ ಪಾಟೀಲ್, ಮತ್ತಿತರರು ಮುಖಂಡತ್ವದ ನೇತೃತ್ವವಹಿಸಿದ್ದರು.

ಏಕತಾ ಆಂದೋಲನ ಅಂಗವಾಗಿ ವಿಚಾರ ಗೋಷ್ಠಿ

ಬೀದರ್: ಜನವಾದಿ ಮಹಿಳಾ ಸಂಘಟನೆಯ ಆಶ್ರಯದಲ್ಲಿ ಆಗಸ್ಟ್ 10 ರಂದು ಸಾಯಂಕಾಲ ನಾಲ್ಕು ಗಂಟೆಗೆ ಸಂಗೀತ ಕಲಾ ಮಂಡಳದಲ್ಲಿ ರಾಷ್ಟ್ರೀಯ ಏಕತಾ ಆಂದೋಲನ ಅಂಗವಾಗಿ ಏರ್ಪಡಿಸಿದ ವಿಚಾರ ಗೋಷ್ಠಿ ಹಾಗೂ ಕವಿ ಗೋಷ್ಠಿಯ ಮುಖ್ಯ ಅತಿಥಿಗಳಾಗಿ ಶ್ರೀ ಜೆ.ಎಸ್. ಸಜ್ಜನ್ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ ಎಂದರು.

ಪ್ರಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ನೀಲಾ ಕೆ. ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಜೆ.ಎಂ.ಎಸ್. ಸಾಹಿತ್ಯಿಕ ರಂಗದಲ್ಲೂ ಮಹಿಳಾ ಸಾಹಿತಿಗಳಿಗಾಗಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ವಿಚ್ಛಿದ್ರಕಾರಿ ಹಾಗೂ ಕೋಮುವಾದಿ ಶಕ್ತಿಗಳು ದೇಶವನ್ನು ಒಡೆಯುತ್ತಿರುವ ಈ ಸಂದರ್ಭದಲ್ಲಿ ಸಾಹಿತ್ಯಿಕ ಸಾಂಸ್ಕೃತಿಕವಾಗಿಯೂ ಮಹಿಳೆ ರಾಷ್ಟ್ರೀಯ ಏಕತೆ ಭಾವನೆ ಒಡಮೂಡಿಸುವ ಅವಶ್ಯಕತೆ ಇದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಶಕುಂತಲಾ ತಂಬಾಕೆ ವಹಿಸಿದ್ದರು.

ಕವಿಗೋಷ್ಠಿಯಲ್ಲಿ ಸುಮಾರು 16 ಜನ ಮಹಿಳೆಯರು, ನಾಲ್ಕು ಜನ ಪುರುಷ ಕವಿಗಳು ತಮ್ಮ ಪ್ರಭಾವಿ ಕವನಗಳನ್ನು ಮಂಡಿಸಿದರು. ಪ್ರಾರಂಭದಲ್ಲಿ ಪಾರ್ವತಿ, ಸುಜಾತಾ, ಮಾಯಾ ಮತ್ತು ಸುಪ್ರಿಯಾ ಹಾಗೂ ಸಂಗಡಿಗರು ಸ್ವಾಗತ ಗೀತೆ ಹಾಡಿದರು. ಶಕುಂತಲಾ ದಂಡಿ ಸ್ವಾಗತ ಭಾಷಣ ಮಾಡಿದರು. ಶೋಭಾ ವಿನಾಯಕ್ ವಂದನಾರ್ಪಣೆ ಮಾಡಿದರು, ಮತ್ತು ರಾಜಲಕ್ಷ್ಮಿ ಕೋಠಾರೆ ಕಾರ್ಯಕ್ರಮ ನಿರ್ವಾಹಣೆ ಮಾಡಿದರು. ಸುಮಾರು ಇನ್ನೂರಕ್ಕೂ ಹೆಚ್ಚು ಜನ ಸಾಹಿತ್ಯಾಸಕ್ತರು, ಸಾಹಿತಿಗಳು ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

KRNM/BGS-405 MAG(2) PRB DECR 319-78/79

ಕಾನೂನು ಬಾಹಿರ ಕೃತ್ಯಗಳಿಗೆ ಪೋಲೀಸರು ಹಾಗೂ ಸಚಿವರ ಕುಮ್ಮಕ್ಕು ಹೋರಾಟಕ್ಕೆ ಸಿಐಟಿಯು ನಿರ್ಧಾರ

ಪೋಲೀಸ್ ಇಲಾಖೆ ಮತ್ತು ತೋಟಗಾರಿಕೆ ಸಚಿವ ಎ. ಕೃಷ್ಣಪ್ಪನವರು ಕೇವಲ್ ರಮಣಿ ಎಕ್ಸ್‌ಪೋರ್ಟರ್ಸ್ (ಪ್ರೈ) ಲಿಮಿಟೆಡ್‌ನ ಮಹಿಳಾ ಕಾರ್ಮಿಕ ವಿವಾದದಲ್ಲಿ ಅನಾವಶ್ಯಕ ಮಧ್ಯ ಪ್ರವೇಶ ಮಾಡಿ ಕಾನೂನು ಬಾಹಿರ ಕೃತ್ಯಗಳಿಗೆ ಕುಮ್ಮಕ್ಕು ನೀಡಿ ದಬ್ಬಾಳಿಕೆ ನಡೆಸುತ್ತಿರುವುದನ್ನು ಸಿಐಟಿಯು ಕರ್ನಾಟಕ ರಾಜ್ಯಸಮಿತಿ ಉಗ್ರವಾಗಿ ಖಂಡಿಸಿದೆ.

ಪೋಲೀಸ್ ಇಲಾಖೆ ಮತ್ತು ಆಡಳಿತ ಮಂಡಳಿಯ ಕಾರ್ಮಿಕ ವಿರೋಧಿ ನೀತಿ, ದಬ್ಬಾಳಿಕೆಯನ್ನು ಪ್ರತಿಭಟಿಸಿ ಇದೇ ಸೆಪ್ಟೆಂಬರ್ 1 ರಂದು ಪೋಲೀಸ್ ವರಿಷ್ಠಾಧಿಕಾರಿ ಹಾಗೂ ಕಾರ್ಮಿಕ ಆಯುಕ್ತರ ಕಛೇರಿಗೆ ಮೆರವಣಿಗೆ ನಡೆಸಿ ಮನವಿ ಸಲ್ಲಿಸಲು ಸಿಐಟಿಯು ನಿರ್ಧರಿಸಿದೆ.

ಕೇವಲ್‌ರಮಣಿ ಎಕ್ಸ್‌ಪೋರ್ಟರ್ಸ್(ಪ್ರೈ) ಲಿ. ಗಾರ್ಮೆಂಟ್ ಕಾರ್ಖಾನೆಯಾಗಿದ್ದು ಕಳೆದ ತಿಂಗಳಿನಿಂದ ಅತ್ಯಧಿಕ ಸಂಖ್ಯೆಯಲ್ಲಿರುವ ಮಹಿಳಾ ಕಾರ್ಮಿಕರು ಅವರ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. ಇದೇ ಸೆಪ್ಟೆಂಬರ್ 6 ರಂದು ಕಾರ್ಮಿಕ ಸಚಿವರ ಮನೆಯೆದುರು ಧರಣಿ ನಡೆಸಿದ ಬಳಿಕ ಕಾರ್ಖಾನೆಯ ಆಡಳಿತ ಮಂಡಳಿಯವರು ಘೋಷಿಸಿದ್ದ ಬೀಗ ಮುದ್ರೆಯನ್ನು ಕಾನೂನು ಸರ್ಕಾರ ಬಾಹಿರವೆಂದು ಘೋಷಿಸಿತ್ತು. ಬಳಿಕ ಕಾರ್ಮಿಕರು ಕಾರ್ಖಾನೆಗೆ ಮರಳಿದಾಗ ಆಡಳಿತ ಮಂಡಳಿಯು ಅನವಶ್ಯಕವಾಗಿ ನಿರ್ಬಂಧಕ್ಕೆ ಸಹಿ ಮಾಡಿ ಪ್ರವೇಶಿಸಬೇಕೆಂದೂ ಒತ್ತಾಯಿಸಲ್ಲದೇ ಬಹುಸಂಖ್ಯೆಯಲ್ಲಿ ಸದಸ್ಯರನ್ನು ಹೊಂದಿರುವ ಸಿಐಟಿಯು ಸಂಘದ ಪ್ರತಿನಿಧಿಗಳನ್ನು ಕಡೆಗಣಿಸಿ ಕಾಂಗ್ರೆಸ್ ಯೂನಿಯನ್ ಜೊತೆಗೆ ಒಪ್ಪಂದವಾಗಿದೆ ಘೋಷಿಸಿವರು. ಈ ಎಲ್ಲಾ ಕೃತ್ಯಗಳೂ ಕಾನೂನು ಬಾಹಿರವಾಗಿವೆಯಲ್ಲದೇ ಆಡಳಿತ ಮಂಡಳಿಯನ್ನು ಆರು ತಿಂಗಳ ಶಿಕ್ಷೆ ಕಾಲ ಗುರಿಪಡಿಸಬಹುದಾದ ಕೃತ್ಯಗಳಿವು.

ಈ ವಿವಾದಕ್ಕೆ ಸಂಬಂಧಿಸಿ ಮಧ್ಯ ಪ್ರವೇಶಿಸಲು ಸಹಾಯಕ ಕಾರ್ಮಿಕ ಆಯುಕ್ತರು ಕಾರ್ಖಾನೆಗೆ 14 ರಂದು ಆಗಮಿಸಲಿದ್ದರು. ಆದರೆ ಸಿಐಟಿಯು ಪ್ರತಿನಿಧಿಗಳು ಅವರಿಗೆ ಅಹವಾಲು ಸಲ್ಲಿಸದಂತೆ ಪೋಲೀಸರು ದಬ್ಬಾಳಿಕೆ ಮಾಡಿ ಬಂಧಿಸಿ ಕರೆದೊಯ್ದರು. ಈ ರೀತಿಯಲ್ಲಿ ಆಡಳಿತ ಮಂಡಳಿಯು ಪೋಲೀಸರನ್ನು ಬಳಸಿ ಹೋರಾಟ ಮುರಿಯಲು ಹವಣಿಸುತ್ತಿದೆ. ಸಚಿವರೂ ಕುಮ್ಮಕ್ಕು ನೀಡುತ್ತಿದ್ದಾರೆ. ಇದರ ವಿರುದ್ಧ ಹೋರಾಡಲು ಸಿಐಟಿಯು ನಿರ್ಧರಿಸಿದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎಪ್ರಿಲ್, ಮೇ ತಿಂಗಳಲ್ಲಿ ಬೆಲೆ ಸೂಚ್ಯಂಕ

ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಕೈಗಾರಿಕಾ ಕಾರ್ಮಿಕರ ಗ್ರಾಹಕರ ಬೆಲೆ ಸೂಚ್ಯಂಕಗಳನ್ನು ಕರ್ನಾಟಕ ರಾಜ್ಯ ಸರಕಾರ ಆಗಸ್ಟ್ 30, 1993 ರಂದು ಬಿಡುಗಡೆ ಮಾಡಿದೆ. ರಾಜ್ಯದ 15 ಕೇಂದ್ರಗಳಲ್ಲಿ ರಾಜ್ಯ ಸರಣಿಯ ಸೂಚ್ಯಂಕಗಳು ಹಾಗೂ ನಾಲ್ಕು ಕೇಂದ್ರಗಳಲ್ಲಿ ಕೇಂದ್ರ ಸರಣಿಯ ಸೂಚ್ಯಂಕಗಳು ಹೀಗಿವೆ.

ರಾಜ್ಯಸರಣಿ

(ಆಧಾರವರ್ಷ : 1987-88 =100)

ಕೇಂದ್ರಗಳು	ಎಪ್ರಿಲ್ 1993		ಮೇ 1993	
	1987-88ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ	1987-88ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ
ಬಳ್ಳಾರಿ	162	1197	162	1197
ಭದ್ರಾವತಿ	154	1415	155	1424
ದಾವಣಗೆರೆ	166	1373	168	1389
ಗುಲ್ಬರ್ಗಾ	161	1330	160	1322
ಹಾಸನ	148	1369	150	1388
ಮಂಡ್ಯ	162	1283	163	1291
ಮಂಗಳೂರು	160	1490	164	1527
ಮೈಸೂರು	152	1376	154	1394
ತುಮಕೂರು	146	-	148	-
ದಾಂಡೇಲಿ	161	-	163	-
ರಾಯಚೂರು	159	-	161	-

ಕೇಂದ್ರ ಸರಣಿ

(ಆಧಾರ ವರ್ಷ : 1982=100)

	1982 ರ ಬೆಲೆಗಳಲ್ಲಿ	1960 ಬೆಲೆಗಳಲ್ಲಿ	1982ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ
ಬೆಂಗಳೂರು	243	1375	245	1387
ಬೆಳಗಾಂ	246	-	249	-
ಹುಬ್ಬಳ್ಳಿ-ಧಾರವಾಡ	253	-	255	-
ಮಡಿಕೇರಿ	237	-	238	-
ಅಖಿಲ ಭಾರತ	*245*	*1208*	*246*	*1213*

ಶ್ರೀಮತಿ ಮೇರಿ ದೇವಾಸಿಯಾ ನಿಧನಕ್ಕೆ ಶ್ರದ್ಧಾಂಜಲಿ

ಕರ್ನಾಟಕ ರಾಜ್ಯದಲ್ಲಿ 1960 ರ ದಶಕದಲ್ಲಿ ಸರ್ಕಾರಿ ನೌಕರರ ಚಳುವಳಿಯ ಉಗಮಕ್ಕೆ ಕಾರಣೀಭೂತರಾಗಿ ಸಂಘಕ್ಕೆ ಬುನಾದಿ ಹಾಕಿದ ಮುಂಚೂಣಿ ನಾಯಕಿ ಶ್ರೀಮತಿ ಮೇರಿ ದೇವಾಸಿಯಾ ಅವರ ನಿಧನಕ್ಕೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಅತೀವ ದುಃಖ ವ್ಯಕ್ತಪಡಿಸಿ, ಶ್ರದ್ಧಾಂಜಲಿ ಅರ್ಪಿಸುತ್ತದೆ. ಅವರ ಕುಟುಂಬಕ್ಕೆ ಸಂತಾಪ ಸೂಚಿಸಿದೆ.

1960 ರ ದಶಕದಲ್ಲಿ ರಾಜ್ಯದಲ್ಲಿ ನಿಜಲಿಂಗಪ್ಪನವರು ಮುಖ್ಯಮಂತ್ರಿ ಆಗಿರುವಾಗ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳುವಳಿ ತುಂಬಾ ದುರ್ಬಲವಾಗಿರುವಾಗ ಸರ್ಕಾರಿ ನೌಕರರನ್ನು ಸಂಘಟಿಸಿ, ಸೇವೆಯಿಂದ ವಜಾ ಆದ ಸ್ಥಿತಿ ಎದುರಿಸಿಯೂ ಚಳುವಳಿಯನ್ನು ಸಮರ್ಪಣಾ ಮನೋಭಾವದಿಂದ ಕಟ್ಟಿದರು. ರಾಜ್ಯದ ದುಡಿಯುವ ಜನತೆ ಅವರ ತ್ಯಾಗ, ಹೋರಾಟದ ಅನುಭವಗಳನ್ನು ಸದಾ ಸ್ಮರಿಸುತ್ತವೆ ಎಂದು ಸಿಪಿಐ(ಎಂ) ಹೇಳಿದೆ.

ಸಿಐಟಿಯು ಸಂತಾಪ

ಸರಕಾರಿ ನೌಕರರ ಸಂಘದ ನಾಯಕಿಯಾಗಿದ್ದ ಶ್ರೀಮತಿ ದೇವಾಸಿಯರವರ ಸಾವಿಗೆ ಸಿಐಟಿಯು ಅತೀವ ದುಃಖ ವ್ಯಕ್ತಪಡಿಸುತ್ತದೆ. ಅವರು ಶ್ರೀ ನಿಜಲಿಂಗಪ್ಪ ಸರಕಾರದ ವಿರುದ್ಧ ಸರಕಾರಿ ನೌಕರರು ನಡೆಸಿದ ಹೋರಾಟದಲ್ಲಿ ಧೈರ್ಯ ಮತ್ತು ಅರ್ಪಣಭಾವ ಹೊಂದಿದ ಅಪರೂಪದ ನಾಯಕಿಯಾಗಿದ್ದರು.

ಶ್ರೀಮತಿ ಮೇರಿ ದೇವಾಸಿಯರವರು ಸರಕಾರಿ ಸೇವೆಯಿಂದ ವಜಾ ಆದನಂತರವೂ ಕಾರ್ಮಿಕ ವರ್ಗದ ಚಳುವಳಿಯೊಂದಿಗೆ ಮತ್ತು ದುಡಿಯುವ ಮಹಿಳೆಯರ ಚಳುವಳಿಯೊಂದಿಗೆ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೇರಿ ದೇವಾಸಿಯಾರವರ ಹೆಸರು ಅವರ ಸ್ಥೈರ್ಯ ಮತ್ತು ಸಮರ್ಪಣೆಗಾಗಿ ಅಮರವಾಗಿರುತ್ತದೆ ಮತ್ತು ಇತರರಿಗೆ ಮಾದರಿಯೂ ಆಗಿರುತ್ತದೆ.

ಐಕ್ಯತಾ ವೇದಿಕೆ ತೀವ್ರ ಸಂತಾಪ

ಮೇರಿ ದೇವಾಸಿಯಾರವರ ನಿಧನದಿಂದ ರಾಜ್ಯ ಸರಕಾರಿ ನೌಕರರ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಶ್ರೀಮತಿ ಮೇರಿ ದೇವಾಸಿಯಾರವರ ನಿಧನಕ್ಕೆ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ(ಐಕ್ಯತಾ ವೇದಿಕೆ) ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತದೆ.

ಧರ್ಮದ ದುರ್ಬಳಕೆ ತಡೆ ಮಸೂದೆ ಬಗ್ಗೆ ಗೊಂದಲ ಸೃಷ್ಟಿಸಲು ಹವಣಿಕೆ

ರಾಜಕೀಯದಲ್ಲಿ ಧರ್ಮದ ದುರ್ಬಳಕೆಯನ್ನು ತಡೆಗಟ್ಟುವ ವಿಷಯದಲ್ಲಿ ಕಾಂಗ್ರೆ ಮತ್ತು ಭಾರತೀಯ ಜನತಾ ಪಕ್ಷಗಳು ಜನತೆಯಲ್ಲಿ ಗೊಂದಲವನ್ನು ಸೃಷ್ಟಿಸುವುದನ್ನೇ ಉದ್ದೇಶವನ್ನಾಗಿಟ್ಟುಕೊಂಡಿವೆ. ಈ ಎರಡೂ ಪಕ್ಷಗಳಿಗೆ ಧರ್ಮದ ಮೂಲ ಆಶಯದ ಬಗ್ಗೆ ಕಾಳಜಿಯಾಗಲೀ, ಜಾತ್ಯಾತೀತತೆ, ಪ್ರಜಾಸತ್ತೆಯನ್ನು ಬಲಗೊಳಿಸಿ ಜನರ ಆಶಯಗಳಿಗೆ ಸ್ಪಂದಿಸಿ ಅಧಿಕಾರ ಮಾಡುವ ಪ್ರಾಮಾಣಿಕ ರಾಜಕೀಯ ಇಚ್ಚೆಯಾಗಲೀ ಇಲ್ಲವೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಬಿಜೆಪಿಯ ಜನಾದೇಶ ಯಾತ್ರೆಯು ಮಸೂದೆಯ ಲೋಪಗಳನ್ನು ಬಯಲಿಗೆಳೆಯುವ ಪ್ರಯತ್ನವಾಗಿರದೇ ಕೋಮುವಾದವನ್ನೇ ಧರ್ಮ ಎಂದೂ ಬಿಂಬಿಸುವ ಹುನ್ನಾರದ ಭಾಗವಾಗಿದೆ. ಭ್ರಷ್ಟಾಚಾರವಂತಹ ವಿಷಯಗಳು 'ಅನೈತಿಕ' ಅಂಗವಾಗಿದೆ. ಆದರೆ ಧರ್ಮ ವಿಶಾಲ ವ್ಯಾಪ್ತಿಯುಳ್ಳದ್ದು, ಹೀಗಾಗಿ ನೈತಿಕತೆ ಮತ್ತು ಧರ್ಮಕ್ಕೆ ಭಿನ್ನವಾದ ಆಯಾಮವಿದೆ. ಸ್ವಾಮಿ ವಿವೇಕಾನಂದನರನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಅವರ ಬರಹಗಳನ್ನು ಅಭ್ಯಸಿಸಿದರೆ ಬಿಜೆಪಿಯ ನೀತಿಗಳು ಪೂರ್ಣ ಭಿನ್ನವೇ ಆಗಿವೆ. ವಿವೇಕಾನಂದ ಖಂಡಿಸುತ್ತಿದ್ದ ವಿಚಾರಗಳನ್ನೇ ಬಿಜೆಪಿ ಅನುಸರಿಸುತ್ತಿದೆ ಎಂಬುದನ್ನು ಮರೆಯಲಾಗದು. ಈ ಹಿನ್ನೆಲೆಯಲ್ಲಿ ಧರ್ಮದ ದುರ್ಬಳಕೆ ಮಸೂದೆ ಬಗ್ಗೆ ಸಂಸತ್ ವಿಶೇಷ ಅಧಿವೇಶನ ಕರೆಯಬೇಕೆಂದು ಡಿ.ವೈ.ಎಫ್.ಐ ಆಗ್ರಹಿಸುತ್ತವೆ.

ಸುದ್ದಿಗಳು

ಸಮುದಾಯ ಸಮಾವೇಶ -93

ಕಲಬುರ್ಗಿ: ಆಗಸ್ಟ್ 22 ರಂದು ಕಲಾನಿಕೇತನದಲ್ಲಿ ಸಮುದಾಯ ಸಮಾವೇಶವು ಸಮುದಾಯ ಗೀತೆ ಮತ್ತು ಶ್ರೀ ಶಂಕ್ರಯ್ಯಾ ಆರ್. ಘಂಟೆ ಅವರ ಸ್ವಾಗತದೊಂದಿಗೆ ಪ್ರಾರಂಭವಾಯಿತು.

ಉದ್ಘಾಟಕರಾಗಿ ಡಾ. ಬಿ. ಕೃಷ್ಣಮೂರ್ತಿಯವರು ಮಾತನಾಡುತ್ತಾ ಪ್ರತಿಶತ 95 ರಷ್ಟು ಜನರಿಗೆ ಒಪ್ಪತ್ತಿನ ಊಟಕ್ಕೂ ಗತಿಯಿಲ್ಲದಿರುವಾಗ ಆಳುವ ವರ್ಗ, ಬಡತನ, ನಿರುದ್ಯೋಗ, ಜಾತಿ ಇಂತಹ ಹಲವಾರು ಸಮಸ್ಯೆಗಳನ್ನು ಹೆಚ್ಚಿಸಿ ನಮಗರಿವಿಲ್ಲದಂತೆಯೇ ಇದೇ ಒಳ್ಳೆಯ ಸಂಸ್ಕೃತಿ ಎನ್ನುವಷ್ಟರ ಮಟ್ಟಿಗೆ ನಮ್ಮ ದೇಶದ ಸಮಾಜವನ್ನು ಎಳೆದುಕೊಂಡು ಹೋಗುತ್ತಿದೆ. ಸಮೂಹ ಮಾಧ್ಯಮಗಳ ಮೂಲಕ ತಮ್ಮ ವಿಚಾರಗಳನ್ನು ತುಂಬಾ ನಾಜೂಕಾಗಿ ನಮ್ಮ ಮೇಲೆ ಹೇರಿ ಪುನಃ ಹಿಂದಿನ ಶತಮಾನಕ್ಕೆ ಒಯ್ಯುತ್ತಿದೆ. ಇದರ ಬಗ್ಗೆ ನಾವು ಎಚ್ಚರದಿಂದಿರಬೇಕೆಂದರು.

ಅಥಿತಿ ಭಾಷಣದಲ್ಲಿ ಪ್ರೊ. ವಿ.ಜಿ. ಅಂದಾನಿಯವರು ಕಲೆ ಒಂದು ತೀಕ್ಷ್ಣ ಮಾಧ್ಯಮ, ಕಲೆಯ ನೆಲೆ-ಬೆಲೆ ಪ್ರಜ್ಞೆ, ಧೈರ್ಯವಿಲ್ಲದವರು ಐತಿಹಾಸಿಕ ಶಿಲ್ಪಿಗಳೇ ದೇವರುಗಳೆಂದು ಅರ್ಥೈಸಿಕೊಂಡು ಗುಡಿ-ಗುಡಾರಗಳಿಗೆ ಗಿರಕಿ ಹೊಡೆಯುತ್ತಾರೆ. ಅವರು ನೋಡುವ ದೃಷ್ಟಿಕೋನ ಬದಲಾಗಬೇಕು. ಪ್ರಗತಿಪರ ಚಿಂತನಾಶೀಲ ಕಲೆಗಾರರನ್ನು ಮಹಿಗೊಬ್ಬರಂತೆ ತಯಾರಿಸಿದರೆ ಸಾಮುದಾಯಿಕ ಬದುಕಿಗೆ ಬೇಕಾದ ಸಮಾಜ ನಿರ್ಮಿಸಲು ಸಾಧ್ಯ ಎಂದು ನುಡಿದರು. ಪ್ರೋ ಪ್ರಭು ಬಾಣಪ್ಪರಿಯವರು ಅಧ್ಯಕ್ಷನಾಗಿ ಮಾತನಾಡುತ್ತಾ ಇಂದು ಮೇಲ್ವರ್ಗ ನಮ್ಮ ಮೇಲೆ ಭ್ರಮೆ, ಕಲ್ಪನೆ ಮತ್ತು ನಂಬಿಗೆಗಳನ್ನು ಹೇರುವ ಮೂಲಕ ಹೆಚ್ಚು ಕಂದಾಚಾರ ತುಂಬುತ್ತಿದೆ. ಅಲ್ಲದೆ ಅಧಿಕಾರದ ಬದಲಾವಣೆಗೆ ಮಾತ್ರ ಕಿತ್ತಾಟ ನಡೆಯುತ್ತಿದೆ ವಿನಃ ವ್ಯವಸ್ಥೆ ಬದಲಾವಣೆಯಾಗುತ್ತಿಲ್ಲ. ಸಮಾಜದ ಬದಲಾವಣೆ ಮೊದಲಾಗಬೇಕೆಂದರು.

ಕಾರ್ಯಕ್ರಮವನ್ನು ಶ್ರೀ ಖೇಮಣ್ಣ ಅಲ್ದಿಯವರು ನಡೆಸಿಕೊಟ್ಟರು. ಶ್ರೀ ಶಿವಶರಣ ಮುಳೆಗಾವ ವಂದಿಸಿದರು.

ಒಪ್ಪಂದದ ವಿರುದ್ಧ ಕಾರ್ಮಿಕರ ಪ್ರತಿಭಟನೆ

ಮಳಖೇಡಾ(ಗುಲ್ಬರ್ಗಾ): ಜಿಲ್ಲೆಯ ಮಳಖೇಡಾದಲ್ಲಿ ಸುಮಾರು 1984 ವರ್ಷದಲ್ಲಿ ರಾಜಶ್ರೀ ಸಿಮೆಂಟ್ ಎಂಬ ಕಾರ್ಖಾನೆ ಬಿರ್ಲಾ ಗುಂಪಿನವರು ಪ್ರಾರಂಭ ಮಾಡಿದರು. ಕಾರ್ಖಾನೆಯ ಆಡಳಿತ ವರ್ಗದವರು 1984 ರಿಂದ 1989 ರವರೆಗೆ ಅಂದರೆ ಸುಮಾರು ಐದು ವರ್ಷದವರೆಗೆ ಕಾರ್ಖಾನೆಗೆ ಕೋಟ್ಯಾಂತರ ರೂಪಾಯಿ ಲಾಭವಾಗಿದ್ದರೂ ಅಲ್ಲಿನ ಕಾರ್ಮಿಕರಿಗೆ ಒಂದು ವರ್ಷ ಕೂಡಾ ವಾರ್ಷಿಕ ಬೋನಸ್ ನೀಡಿಲ್ಲ. 1990 ರಿಂದ 1992 ರವರೆಗೆ ಮಾತ್ರ 8.33 ಶೇ. ಬೋನಸ್‌ಅನ್ನು ಅಲ್ಲಿನ ಕಾರ್ಮಿಕರಿಗೆ ನೀಡಿದರು. ಆದರೆ ಈಗಿನ ಸ್ಥಿತಿಯಲ್ಲಿ ಕೋಟ್ಯಾಂತರ ರೂಪಾಯಿ ಲಾಭ ಮಾಡಿದ ಆಡಳಿತ ವರ್ಗದವರು ಮತ್ತು ಅಲ್ಲಿರುವ ಕೆಲವು ಕಾರ್ಮಿಕ ವಿರೋಧಿ ಮುಖಂಡರು ಸೇರಿ ಮೂರು ವರ್ಷದ ಅಂದರೆ 1992-1993, 1993-94 ಮತ್ತು 94-95ರವರೆಗಿನ ಅವಧಿಯಲ್ಲಿ ಬೋನಸ್ ಶೇ.88 ಜೊತೆಗೆ 400 ರೂಪಾಯಿ ಅಡಹಾಕ ಸೇರಿಸಿ ಒಟ್ಟು 1,600 ರೂಪಾಯಿ ಸಿಲ್ಲಿಂಗ್ ಮಾಡಿ ಉಪಕಾರ್ಮಿಕ ಅಧಿಕಾರಿ ಅವರ ಎದುರುಗಡೆ ಒಪ್ಪಂದ ನಡೆಯಿಸಿ ರುಜು ಹಾಕಿದ್ದಾರೆ. ಆದರೆ ರಾಜಶ್ರೀ ಸಿಮೆಂಟ್ ಜನರಲ್ ವರ್ಕರ್ಸ್ ಮತ್ತು ಸ್ಟಾಫ್ (ಸಿ.ಐ.ಟಿ.ಯು) ಸಂಘ ಈ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿ ನಮಗೆ 20 ಶೇ. ಬೋನಸ್ ಕೊಡಬೇಕು ಮತ್ತು ಈ ಮೂರು ವರ್ಷದ ಮಾಡಿರುವ ಶೇ. 8.33 ಬೋನಸ್ ಒಪ್ಪಂದವನ್ನು ಹಿಂದೆ ತೆಗೆದುಕೊಳ್ಳಬೇಕು ಎಂದು ಆಗಸ್ಟ್ 14 ರಂದು ಒಂದು ದಿನದ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದ್ದರು. ಈ ಮುಷ್ಕರದಲ್ಲಿ ಶೇ. ನೂರರಷ್ಟು ಕಾರ್ಖಾನೆಯ ಕಾರ್ಮಿಕರು ಭಾಗವಹಿಸಿದರು. ಆದರೆ ಅಲ್ಲಿನ ಆಡಳಿತ ವರ್ಗದ ಕೆಲವು ಅಧಿಕಾರಿಗಳು ಈ ಮುಷ್ಕರ ಮುರಿಯಲು ಸಾಕಷ್ಟು ಸುಳ್ಳು ಆಶ್ವಾಸನೆಗಳು ಕೊಟ್ಟರು. ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿ ಮುಷ್ಕರವನ್ನು ಯಶಸ್ವಿ ಮಾಡಿದರು. ಈ ಮುಷ್ಕರಕ್ಕೆ ಮಳಖೇಡ, ಕೂಡಾ ಹುಡಾ ಗ್ರಾಮ, ಉಡಗಿ ಹಾಗೂ ಕೆಲವು ಗ್ರಾಮದ ರೈತರು ಮತ್ತು ಎ.ಬಿ.ಎಲ್. ಶಹಾಬಾದ್ ಕಾರ್ಮಿಕರು ಮತ್ತು ಕಾರ್ಮಿಕರ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಈ ಮುಷ್ಕರದಲ್ಲಿ ಭಾಗವಹಿಸಿದರು. ಈ ಮುಷ್ಕರದ ನೇತೃತ್ವವನ್ನು ಸಂಘದ ಅಧ್ಯಕ್ಷರಾದ ಎ.ಬಿ. ದಾಸ್, ಕಾರ್ಯದರ್ಶಿಯವರಾದ ಜಿ. ಕೃಷ್ಣಮೂರ್ತಿ, ಉಪಾಧ್ಯಕ್ಷರಾದ ಚಂದುಜಾದವ, ಶಂಕರ ಮಂಗಾ, ಶಂಕರ ಪವಾರ, ಜಂಟಿ ಕಾರ್ಯದರ್ಶಿ ಶಂಕರ ರಾಠೋಡ, ಬಿ. ಬಸವರಾಜ, ಖಜಾಂಚಿ ಅಬ್ದುಲ್ ಗಫೂರ, ಸಂಘಟನಾ ಕಾರ್ಯದರ್ಶಿ ಲಕ್ಷ್ಮಣ ಚವಾಣ ವಹಿಸಿದ್ದರು.

ಪ್ರೆಸ್ ಕಾರ್ಮಿಕರ ಸಂಘದ ವಿಶೇಷ ಮಹಾಸಭೆ

ಉಡುಪಿ : ಉಡುಪಿ ತಾಲೂಕು ಪ್ರೆಸ್ ಕಾರ್ಮಿಕರ ಸಂಘದ ವಿಶೇಷ ಮಹಾಸಭೆಯು ಆಗಸ್ಟ್ 15 ರಂದು ಆದಿತ್ಯವಾರ ಕಡಿಯಾಳದಲ್ಲಿ ಯೂನಿಯನ್ನಿನ ಅಧ್ಯಕ್ಷ ಕಾಂ. ಪಿ. ವಿಶ್ವನಾಥ ರೈ ಅವರ ಅಧ್ಯಕ್ಷತೆಯಲ್ಲಿ ಸೇರಿತು.

ಕಾರ್ಯದರ್ಶಿ ರಮೇಶ್ ಮೆಂಡನ್ ಅವರು ಸಭೆ ಕರೆದ ವಿಚಾರವನ್ನು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಸಿಐಟಿಯು ಜಿಲ್ಲಾ ಸಮಿತಿ ಅಧ್ಯಕ್ಷ ಬಿ. ಮಾಧವರವರು ಮಾತನಾಡುತ್ತಾ ಕೇಂದ್ರ ಸರಕಾರವು ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್‌ಗಳ ಶರತ್ತುಗಳಿಗೆ ಮಣಿದು ವಿದೇಶಿ ಕೈಗಾರಿಕೆಗಳನ್ನು ಭಾರತಕ್ಕೆ ಆಹ್ವಾನಿಸುತ್ತಿದೆ. ಇದರಿಂದ ನಮ್ಮ ಕೈಗಾರಿಕೆಗಳು ಮೂಲೆ ಗುಂಪಾಗುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಭಾರತದ ಕಾರ್ಮಿಕ ವರ್ಗ ಇನ್ನೊಮ್ಮೆ ವಿದೇಶಿ ಗುಲಾಮಗಿರಿ ವಿರುದ್ಧ ಹೋರಾಡಬೇಕಾಗಿದೆ ಎಂದು ಕರೆ ನೀಡಿದರು.

ಸಿಐಟಿಯು ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಕೆ. ಮೂಸಬ್ಬನವರು ಪ್ರೆಸ್ ಕಾರ್ಮಿಕರು ಬೇರೆ ಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಗಾಗಿ ಕೆಲಸ ಮಾಡಬೇಕೆಂದು ಕರೆ ಇತ್ತರು.

ಈ ಸಭೆಯಲ್ಲಿ ವಿದ್ಯುತ್ ಬೆಲೆ ಏರಿಸಿರುವುದನ್ನು ಖಂಡಿಸುವ, ನಿವೃತ್ತ ಅಧ್ಯಾಪಕರನ್ನು ಶಿಕ್ಷಕರನ್ನಾಗಿ ಪುನರ್ ನೇಮಿಸುವ ವಿರುದ್ಧ, ಪ್ರೆಸ್ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಪುನರ್ ವಿಮರ್ಶಿಸಿ ಪ್ರಕಟಿಸುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ನಿವೇಶನ ಹಂಚಿಕೆಗೆ ಸಿಪಿಐ(ಎಂ) ಆಗ್ರಹ

ಮಲಪನ ಗುಡಿ ಮಂಡಲ ಪಂಚಾಯ್ತಿಗೆ ಒಳಪಟ್ಟ ಅನಂತಶಯನಗುಡಿ ಗ್ರಾಮದಲ್ಲಿ ಬಹುದಿನಗಳಿಂದ ಬಡಜನರು ನಿವೇಶನವಿಲ್ಲದೇ ರಸ್ತೆ ಅಕ್ಕಪಕ್ಕದಲ್ಲಿ ವಾಸಮಾಡುತ್ತಿದ್ದಾರೆ.

ಈ ದಿಸೆಯಲ್ಲಿ ಸರ್ಕಾರವು ಈಗಾಗಲೇ ಸ್ವಾಧೀನಪಡಿಸಿಕೊಂಡ ಸರ್ವೆ ನಂಬರ್ 115 ರ ಎರಡೂವರೆ ಎಕರೆ ಮತ್ತು 10 ವರ್ಷದಗಳಿಂದ ಬೀಳುಬಿದ್ದಿರುವ ಸರ್ವೆನಂಬರ್ 80. ಎ. 7 ಎಕರೆ ಭೂಮಿಗಳನ್ನು ಸ್ವಾಧೀನಪಡಿಸಿಕೊಂಡು ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನಗಳನ್ನು ಹಂಚಬೇಕೆಂದು ಮತ್ತು ಹೊಸ ಹಸಿರು ಕಾರ್ಡ್‌ಗಳನ್ನು ಹಂಚಿ ಸುಮಾರು ಆರು ತಿಂಗಳಾಗಿದ್ದರೂ ಇದುವರೆಗೂ ಆಹಾರಧಾನ್ಯಗಳನ್ನು ಹಂಚದೇ ಇರುವುದರಿಂದ ಬಡಜನರಿಗೆ ಇದ್ದು ಇಲ್ಲದಂತಾಗಿದೆ. ತಕ್ಷಣ ಆಹಾರ ಧಾನ್ಯಗಳನ್ನು ಹಂಚಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಮೇಲಿನ ಎರಡು ಬೇಡಿಕೆಗಳನ್ನು ಇಟ್ಟುಕೊಂಡು ಸುಮಾರು 200 ಕ್ಕೂ ಮೇಲ್ಪಟ್ಟು ಕೂಲಿಕಾರರು ಕಾರ್ಮಿಕರು ಸಿಪಿಐ(ಎಂ) ನೇತೃತ್ವದಲ್ಲಿ ತಹಶೀಲ್ದಾರರಿಗೆ ಪ್ರತಿಭಟನೆ ಮೂಲಕ ಮನವಿಯನ್ನು ಸಲ್ಲಿಸಿದರು. ಈ ಹೋರಾಟದ ನೇತೃತ್ವವನ್ನು ಸಿಪಿಐ(ಎಂ) ಮುಖಂಡರಾದ ಬಿ. ಭರಮಪ್ಪ, ಜನರಲ್ ವರ್ಕರ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿಯಾದ ದೊಡ್ಡ ಸ್ವಾಮಿ ಟಿ. ಮತ್ತು ಭಾಸ್ಕರ್, ಗೋಪಾಲ್ ಕೆ.ವಿ. ಶ್ರೀನಿವಾಸಲು ಡಿ.ವೈ.ಎಫ್.ಐ. ಅಧ್ಯಕ್ಷರಾದ ಷಣ್ಮುಖಪ್ಪ ಮತ್ತು ಅರುಣೋದಯ ಯುವಕ ಸಂಘದ ಬಿ. ಪಂಪಾಪತಿ ವಹಿಸಿದ್ದರು.

ಪ್ರಕಾಶಕರು ... ಸ್ಟ್ಯಾಟ್ ಮಾರ್ಕ್ಸ್‌ವಾದಿ ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ : 12, 18ನೇ ಅಡ್ಡರಸ್ತೆ, ಶಾಸಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್